ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೨-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ನೋಟೀಸು

—(೦)—

ಫಕ್ಕೀರವ್ವಾ ತಂದಿ ಸಣ್ಣಬಾಲಪ್ಪಾ ಮಾದ್ರ ಸಾ॥ ಗುತ್ತೂರ ತಾ॥ ಕುಷ್ಟಗಿ ಬನಾಂ- ದುರಗಪ್ಪಾ ವ॥ ತಿಪ್ಪಣ್ಣಪ್ಪಾ ಮಾದ್ರ ಸಾ॥ ಯರೆಹಂಚಿನಹಾಳ ತಾ॥ ಯಲಬುರ್ಗಾ ತಾನು ನಮ್ಮ ಜಾತಿ ರಿವಾಜ ಪ್ರಕಾರ ಬಸ್ವಿ ಇದ್ದು ನನ್ನ ತಂದಿ ಮನೆಯಲ್ಲಿ ಇರತಿದ್ದವ್ಯಾಳೆ ಅಂದರೆ ಈಗ್ಗೆ ೪-೫ ವರ್ಷದ ಹಿಂದೆ ನೀನು ಬಂದು ನಮ್ಮ ಊರ ಕೆಲವು ಜನರ ಸಮಕ್ಷಮ ನನಗೆ ಪ್ರತಿವರ್ಷ ಒಂದು ನೂರು ರೂ॥ ಗಾಡಿಕೊಡುತ್ತೇನೆ ಅಂತಾ ಠರಾವು ಮಾಡಿಕೊಂಡು ನಿನ್ನ ಊರಿಗೆ ಕರಕೊಂಡು ಹೋಗಿ ಕೆಲವು ದಿವಸಗಳವರೆಗೆ ಉಭಯರು ನೆಟ್ಟಗೆ ಇರುತ್ತಿರಲಿಕ್ಕೆ ನೀನು ನನ್ನ ಮೇಲೆ ಎರಡನೆ ಹೆಂಗಸಿನ ಸಹವಾಸ ಮಾಡಿ ನನ್ನ ಸಂಗಡಾ ಗುದ್ಯಾಡಿ ನನಗೆ ಠರಾವು ಮಾಡಿದ ರೂ॥ಗಳನ್ನು ಕೊಡದೆ ನನಗೆ ಬಡೆದು ನನ್ನ ಮೈಮೇಲೆ ಇದ್ದ ಮುಟ್ಟುಮುರಿ ತಗೊಂಬುವದಲ್ಲದೆ ನಾನು ನನ್ನ ಮನೆಯಿಂದ ಬರೋ ಕಾಲಕ್ಕೆ ತಂದಿದ್ದ ರೂ॥ ೧೦೦ ಅಕ್ಷರದಲ್ಲಿ ಒಂದು ನೂರು ರೂ॥ ಗಾಡಿ ಸಹ ಕಸಕೊಂಡು ನನ್ನನ್ನು ಮನೆಬಿಟ್ಟು ಹೊರಗೆಹಾಕಿದ ಕಾರಣಾ ಇದರ ವಿಷಯ ಚರ್ಚೆ ಆಗಿ ಕೆಲವು ಜನರ ಮಾರ್ಫತ್ತ ನಿನ್ನ ಕಡಿಂದಾ ಸದ್ರಿ ಠರಾವು ಪ್ರಕಾರ ಕೊಡತಕ್ಕ ರೂ॥ಗಳು ಮತ್ತು ಕಸಕೊಂಡ ರೂ॥ಗಳು ಕೂಡಿ ರೂ॥ ೩೦೦ ಗಾಡಿ ಅಕ್ಷರದಲ್ಲಿ ಮೂರು ನೂರು ರೂ॥ಗಾಡಿ ಕೊಡಬೇಕು ಅಂತಾ ಮಾತು ನೇಮ ಆಗಿ ನೀನು ಸದ್ರಿ ರೂ॥ಗಳನ್ನು ಮುಟ್ಟಿಸತೀನಿ ಅಂತಾ ಹೇಳಿ ಹೇಳಿ ಎಷ್ಟೋ ಮುದ್ದತುಗಳು ಹೋದವು ಆದ್ರೂ ನಿನ್ನ ಕಡಿಯಿಂದ ಇವತ್ತಿಗೂ ದಾವ ವ್ಯವಸ್ಥಾನು ಆಗಲಿಲ್ಲ ಕಾರಣಾ ಈ ನೋಟೀಸ ಕೊಟ್ಟಿರುತ್ತದೆ ಈ ನೋಟೀಸ ಮುಟ್ಟಿದ ೮ ೧೦ ದಿವಸಗಳಲ್ಲಿ ನೀನು ಬಂದು ರಕ್ಕಮಿನ ವ್ಯವಸ್ಥಾ ಮಾಡಿದ್ರೆ ಠೀಕ ಅದೆ ಇಲ್ಲದಿದ್ರೆ ನಿನ್ನ ಮೇಲೆ ಸರಕಾರದಲ್ಲಿ ಜಾಪ್ತಾಕಾರವಾಯಿ ಮಾಡುತ್ತೇನೆ ಮತ್ತು ನಮ್ಮ ಉಭಯರ ನಡುವೆ ಇದ್ದ ಕರಾರು ಇವತ್ತಿನಿಂದ ರದ್ದು ಇರುತ್ತದೆ ಅದರ ಖುಲ್ಲ ಖರ್ಚು ನಿನ್ನ ತಲಿ ಮೇಲೆ ಇರುತ್ತದೆ ಇದಲ್ಲದೆ ಉಭಯರ ನಡುವೆ ಆದ ಕರಾರುಗಳನ್ನು ಮೊದಲೆ ಫಸ್ಕ ಆಗಿರುತ್ತವೆ ಫಕ್ತ, ತಾ॥ ೨೩ ಡಿಸೆಂಬರ ಸನ್ನ ೧೯೨೯ನೆ ಇಸವಿ

ಈ ಎಡಗೈ ಹೆಬ್ಬೆರಳಿನ ಗುರ್ತು ಫಕೀರವ್ವಾ ಮಾದ್ರ ಇಕೀದು ಅದೆ

ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ ಅಬ್ಬಿಗೇರಿ

ಸ್ವಲ್ಪದಿವಸಗಳೊಳಗಾಗಿಯೇ, ಸ್ವಲ್ಪದಿವಸಗಳ ಸಲುವಾಗಿ ಧಾರವಾಡಕ್ಕೆ

ವೀರರಾಣಿ ಕಿತ್ತೂರ ಚೆನ್ನಮ್ಮ ನು ಬರುವಳು

ಬಂದು ತನ್ನ ಅಪ್ರತಿಮ ವೀರತನವನ್ನು ತೋರಿಸುವಳು

ತೀವ್ರವೇ ಜನ್ಮಭೂಮಿಯಾದ ಕಿತ್ತೂರ, ಬೈಲಹೊಂಗಲ, ಬೆಳಗಾವಗಳ ಕಡೆಗೆ ತೆರಳುವಳು.

ಎಂದು, ಎಲ್ಲಿಗೆ, ಯಾವಾಗ, ಎಷ್ಟು ದಿವಸ, ಯಾವ ತಾರೀಖಿಗೆ ಬರುವಳೆಂಬುದನ್ನು

ಮೊದಲೇ ಲಕ್ಷಗೊಟ್ಟು ನೋಡುತ್ತಿರುವದು ಒಳ್ಳೇದು.

ಹಿಂದುಗಡೆಯಲ್ಲಿ ಮುಂದಾಗಿ ತಿಳಿಸಲಿಕ್ಕೆಲ್ಲವೇ ಅಂಬ ಆಶಾವಾದ ಸೂಚಕರೆಂದಾದ ತಿಳಿಸುವ

ರಸಿಕಾಗ್ರಣಿಗಳಡಿಯಾಳಾದ

ಮ್ಯಾನೇಜರ

ಕ. ಸಾ. ಸೇ. ಸಂ. ನಾ. ಮಂ. ಅಬ್ಬಿಗೇರಿ.

ನೋಟೀಸು

—(೦)—

ಕಾಮವ್ವಾ ನಕ್ರಪ್ಪಾ ಅರಬರ ಸಾ॥ ಮುಧೋಳ ತಾ॥ ಕುಷ್ಟಗಿ ಬನಾಂ- ಮುಸಪ್ಪಾ ಹೊನ್ನಪ್ಪಾ ತಂದಿ ಮಾಳಪ್ಪಾ ಹಿರೆಕುರಬರ ಸಾ॥ ದ್ಯಾಮಪುರ ತಾ॥ ಯಲಬುರ್ಗಾ ಈತನಿಗೆ-

ನೀನು ನನಗೆ ಪೂರ್ವದಲ್ಲಿ ಲಗ್ನದ ಗಂಡನಿದ್ದು ಸಂಸಾರದಲ್ಲಿ ಉಭಯತರಿಗೆ ಜಲೋರೀತಿ ನಡಿಯುದ ಕಾರಣಾ ೮ ವರ್ಷದ ಲಾಗಾಯತು ನನ್ನ ತವರುಮನೆಯಲ್ಲಿಯೇ ಇದ್ದು ಉಪಜೀವಿಸುತ್ತಿರಲಿಕ್ಕೆ ಇವತ್ತಿಗೆ ಕೆಲವು ದಿವಸಗಳ ಪೂರ್ವದಲ್ಲಿ ಮುಧೋಳ ಗ್ರಾಮದಲ್ಲಿ ಕೆಲವು ಜನರ ಸಮಕ್ಷಮ ನೀನು ಠರಾವು ಮಾಡಿಕೊಂಡದ್ದು ಏನಂದರೆ- ನಿನ್ನ ಕಡೆಯಿಂದಾ ಸಂಸಾರ ಮಾಡ... ಆಗುವದಿಲ್ಲ ಅಂತಾ ಮನಸ್ಸಿಗೆ ಪೂರ್ಣ ತಿಳಿದ್ದರೂ ಇವತ್ತಿನವರೆಗೆ ನೀನು ಏನೂ ವ್ಯವಸ್ಥಾ ಮಾಡಲಿಲ್ಲ ಆದ ಕಾರಣಾ ನಿನ್ನ ಗಲತ್ತಿ ಮೂಲಕ ನನ್ನ ಖರ್ಚಿನ ದಿಂದಾ ಪ್ರತಿವರ್ಷ ಐವತ್ತು ರೂ. ಪ್ರಕಾರ ಇವತ್ತಿಗೆ ಖುಲ್ಲ ರೂ. ೪೦೦ ನಾಲ್ಕನೂರು ಗಾಡಿ ಮತ್ತು ನನ್ನ ತವರಮನಿ ಸಾಮಾನದ ಬಾಬತ್ತ ಐವತ್ತು ರೂ ಅಂತಾ ೪೫೦ ಗಾಡಿಕೊಟ್ಟು ನನ್ನ ಮರ್ಜಿಪ್ರಕಾರ ಇರುವದಕ್ಕ ನಿನ್ನ ಕಡೀಂದಾ ನನಗೆ ಫಾರಿಕತ್ತು ಕೊಡಬೇಕು ಅಂತ ಠರಾವು ಆಗಿರುವದು ಆದರೂ ರೂಪಾಯಿ ಬರಲಿಲ್ಲ ಫಾರಿಖತ್ತನ್ನು ಕೊಡಲಿಲ್ಲಾ ಕಾರಣಾ ಈ ನೋಟೀಸು ಕೊಟ್ಟಿರುತ್ತದೆ. ಈ ನೋಟೀಸು ಮುಟ್ಟಿದ ೮-೧೦ ದಿವಸಗಳಲ್ಲಿ ಸದ್ರಿ ರೂ ಗಳನ್ನು ಬೇಬಾಕ ಕೊಟ್ಟು ಫಾರಿಖತ್ತ ಕೊಟ್ಟರೆ ಬನ್ನಾಯಿತು ಇಲ್ಲದಿದ್ದರೆ ನಾನು ಇದೆ ನೋಟೀಸ ಫಾರಿಖತ್ತ ಅಂತಾ ತಿಳದು ನಮ್ಮ ಜಾತಿ ರಿವಾಜಪ್ರಕಾರ ಮತ್ತು ನನ್ನ ಮನಸಾ ಪ್ರಕಾರ ಯಾರಜನೆ ಲಗ್ನ ಮಾಡಿಕೊಳ್ಳುವದಲ್ಲದೆ ನಿನ್ನ ಮೇಲೆ ಸದ್ರಿ ರೂ ಗಳ ಸಲುವಾಗಿ ಸರಕಾರದಲ್ಲಿ ಜಾಪ್ತಾ ಪ್ರಕಾರ ಕಾರವಾಯಿ ಮಾಡುತ್ತೇನೆ. ಮುಂದೆ ಅದರ ಖುಲ್ಲಖರ್ಚು ನಿನ್ನ ತಲೆಯಮೇಲದೆ ಫಕ್ತ, ತಾ॥ ೨೩ ಮಾಹೆ ಡಿಸೆಂಬರ ಸನ್ನ ೧೯೨೯ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಕಾಮವ್ವಾ ಮುಧೋಳ ಈಕಿ ಮಾಡಿದ್ದು ಅದೆ

ವಿಶೇಷ ಸವಲತ್ತು

ದಿ ಧಾರವಾಡ ಮೋಟಾರ ಡ್ರೈವ್ಹಿಂಗ ಆ್ಯಂಡ ಮೆಕ್ಯಾನಿಕಲ್

ಟ್ರೇನಿಂಗ ಸ್ಕೂಲ.

ನಮ್ಮ ಸ್ಕೂಲಿನಲ್ಲಿ ಜಾನೇವಾರಿ ೨೦ನೇ ತಾರೀಖಿನವರೆಗೆ ಮಾತ್ರ ಫಕ್ತ ೨೦ ವಿದ್ಯಾರ್ಥಿಗಳ ಪ್ರವೇಶ ಸಿಗುವದು, ಆದ್ದರಿಂದ ಬೇಗನೇ ಮೋಟಾರ ಡ್ರಾಯ್ವಿಂಗ ವ ಮೆಕ್ಯಾನಿಕಲ್ ಶಿಕ್ಷಣ ಪಡೆಯಬಿಚ್ಛಿಸುವವರು ನಮ್ಮ ಮಾಹಿತಿ ಪತ್ರಕ ತರಿಸಿಕೊಂಡು ಅದರೊಳಗಿನ ನಿಯಮಕ್ಕನುಸರಿಸಿ ಹೆಸರು ದಾಖಲ ಮಾಡಿಸಿಕೊಳ್ಳಬೇಕು,

ತಮ್ಮ ಹಿತಚಿಂತಕ.

ವ್ಹಿ. ಎಸ್. ಇಟಗಿ,

ಲೈನಬಝಾರ ಧಾರವಾಡ.

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು.

R. No. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶನಿವಾರ ತಾರೀಖು ೪ ನೇ ಜನವರಿ ೧೯೩೦ (ಸಂಚಿಕೆ ೪

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ವತ್ತೀ ಮೇಲೆ ಸೋಯಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗೀನೆಗಳ ಮೇಲೆ ಸೋಯಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ವತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಅಷ್ಟಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಸಮಂತಾದ ಪಟ್ಟಣವಾಸಿಗಳು ಈ ಸೋಯಿಯ ಪ್ರಯೋಜನ ತಕ್ಕೊಳ್ಳುತ್ತಿದ್ದಾರೆ. [illegible] ಇದರ ಮುಖ್ಯ ಉದ್ದೇಶ ಉಪಯೋಗವು ಹಳ್ಳಿಯ ಜನರಿಗೂ ಆಗಲೆಂದು ಈ ಜಾಹೀರಾತು ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗಳಿಗೆ ಕಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಕ್ಕೆ [illegible] ವರೆಗೆ ಇರುತ್ತದೆ. ಅದೂ ಒಮ್ಮೆಲೆ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರಂತೂ ಇಲ್ಲಿ [illegible] ದಾಗೀನೆಗಳು ಸಹ [illegible] ಮತ್ತು ಬಡ್ಡಿಯಲ್ಲಿ ಮುಳುಗಿದವರಾಗಿ ಹೋಗುತ್ತಾರೆ. ಆ ಪ್ರಕಾರ ಈ ಬ್ಯಾಂಕಿನಲ್ಲಿ ದಾಗೀನೆ ವತ್ತೀ ಇಟ್ಟರೆ ಆಗುವದಿಲ್ಲ. ಯಾಕಂದರೆ [illegible] ರಕಮು ಕೊಟ್ಟರೂ ಅದನ್ನು [illegible], ಸಾಲದ ಭಾರವು ಕಡಿಮೆಯಾಗುತ್ತಾ ಬರುತ್ತದೆ. [illegible] ಹಳ್ಳಿಗಳಲ್ಲಿ ದೊರೆಯುವದು. ಆದ್ದರಿಂದ ಹಳ್ಳಿಯ [illegible] ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ. ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿ [illegible] ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು [illegible] ಇರುತ್ತದೆ. ನೂರರ ಮೇಲಿನ ರಕಮಿಗೆ ಬಡ್ಡೀ ದರ ಸಮಕ್ಷಮ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಯ ಜನರು ಶಹರದ ಊರಿಗೆ ಬಂದು ಸಾವಕಾರ ಮುಂತಾದವರಲ್ಲಿ ಅವರು ಕೇಳಿದಷ್ಟು ಬಡ್ಡಿ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಮುಂದೆ ಲೆಕ್ಕ ತಿಳಿಯದೆ ಲುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. ಹಳ್ಳಿಯವರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರೀ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಘಟ್ಟಿಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ ಪೇಟೆಯಲ್ಲಿ ಎಲ್ಲಕ್ಕಿಂತಲೂ ಸೋಯಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ ಭಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ರು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ [illegible] ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೧೪-೧-೩೦ನೇ ಇಸ್ವಿ.

ಶ್ರೀ

ಆ ವಿಜಯಂ ಶ್ರೀಕಬ್ಬಿಗರು
ಕೀರ್ತಿವನಿತೆಯು ನಲಿಸುವ ಸುಚರಿತರೆನಿಸಿರೆ ॥
ದೀ "ವಿಜಯಂ" ಶ್ರೀಕರಮಾ ।
ನಾವಿರತಗಳ ನಿವರಿಸುವನಿತ್ತುದು ಸಾಜದ ॥೧

ಹಿಂದುಸ್ಥಾನದ ಭಾವೀ ರಾಜ್ಯಕಾರಣದೊಳಗಿನ ತ್ರಿಗುಣಗಳೋ? ತ್ರಿದೋಷಗಳೋ?

ವೈದ್ಯ ಶಾಸ್ತ್ರದಲ್ಲಿ ವಾತ, ಪಿತ್ತ ಮತ್ತು ಕಫವೆಂದು ಮೂರು ದೋಷಗಳನ್ನು ಹೇಳುವರು ವೇದಾಂತ ಶಾಸ್ತ್ರದಲ್ಲಿ ಸತ್ವ, ರಜ ಮತ್ತು ತಮ ವೆಂದು ಮೂರು ಪ್ರಕೃತಿ ಗುಣ ಹೇಳುವರು. ಮೊದ ಲನೆಯದು ದೋಷ, ಎರಡನೆಯದು ಗುಣ. ಹಿಂದು ಸ್ಥಾನದ ರಾಜಕಾರಣದ ವಿಷಯಕವಾಗಿ ಹಿಂದೀ ಯವರಲ್ಲಿ ಮೂರು ಗುಣಗಳುಂಟು. ರಾಜನಿಷ್ಠ ಮವಾಳ ಮತ್ತು ರಾಷ್ಟ್ರೀಯ. ಆಳರಸರ ದೃಷ್ಟಿ ಯಿಂದ ಇವು ಸತ್ವ ರಜ ಮತ್ತು ತಮವೆಂದರು ಸ್ಥವೆ. ಇವುಗಳಲ್ಲಿ ಸತ್ವ ಮತ್ತು ರಜ ಗುಣಗಳು ಳ್ಳವರಲ್ಲಿ ಆಳರಸರ ನಂಬಿಗೆ ಬಹಳ. ರಾಜನಿಷ್ಠ ರಲ್ಲಂತೂ ಅವಿಶ್ವಾಸವೆಂದೂ ಬಗೆಯುವಂತಿಲ್ಲ. ಮ ವಾಳರು ತುಸು ಕೃತಘ್ನ ರಾಗಲಾಡಿಸಿದರೆ ಅವರ ಬೆನ್ನು ಚಪ್ಪರಿಸಿದರಾಯಿತು. ಕೂಡಲೆ ಅವರು ಆನಂದದಿಂದ ತಾಂಡವನೃತ್ಯ ಮಾಡುವರು. ರಾ ಷ್ಟ್ರೀಯರು ಮಾತ್ರ ಬಹಳ ಬೋಡಿಗಳು ತಮೋ ವೃತ್ತಿಯವರು. ಇವರನ್ನು ಸಮಾಧಾನ ಪಡಿಸು ವದು ಬ್ರಹ್ಮದೇವರಿಗೇ ಆಗದು. ಅಂದಬಳಿಕ ಮ ನುಷ್ಯ ಮಾತ್ರರ ಪಾಡೇನು? ವಸಾಹಾತಿನ ಸ್ವರಾ ಜ್ಯದ ಆಶೆ ತೋರಿಸಿದರೂ, ಇವರು ಸ್ವಾತಂತ್ರ್ಯದ ಸಿತಾರ ಹಚ್ಚಿದರು.

ರಾಜನಿಷ್ಠ, ಮವಾಳ ಮತ್ತು ರಾಷ್ಟ್ರೀಯ ರು ದೇಶಕಾರ್ಯದಲ್ಲಿ ಕೈಕೊಳ್ಳುವ ಕೃತ್ಯ ಕರ್ತ ವ್ಯಗಳು ತ್ರಿವಿಧವಾಗಿವೆ. ರಾಜನಿಷ್ಠರು ಯಾವಾ ಗಲೂ ಆಳರಸರ ಪ್ರಭಾವಳಿಯಲ್ಲಿರತಕ್ಕವರು. ಸಳ್ಳಿ ಯ ನಾಮಿನೇಟೆಡ್ ಪಂಚನಿಂದ ರಾಜಧಾನಿಯಲ್ಲಿ ಸರ ಪದವಿಯುಳ್ಳ ಗೃಹಸ್ಥನತನಕ ಸರಕಾರದ ಕೃ ಪೆಗೆ ಪಾತ್ರನಾಗಿರತಕ್ಕವನು ರಾಜಕೀಯ ವಿಚಾರ ವನ್ನು ಸ್ವಪ್ನದಲ್ಲಿ ಸಹ ತರತಕ್ಕದ್ದಲ್ಲ. ಸ್ವಪ್ನ ದಲ್ಲಿ ಈ ವಿಚಾರ ಬಂದರೆ ಸಚೈಲ ಸ್ನಾನ ಮಾಡ ತಕ್ಕದ್ದು, ಜೀವಿಕ, ಫಾಸ್ಪರಸ, ಆಗ್ರಿಕಲ್ಚ ರ ಶೋ ಮುಂತಾದವುಗಳಲ್ಲಿ ಇವರು ಆಳರಸರ ಅಪ್ಪ ಣೆಯಂತೆ ನಡೆಯತಕ್ಕದ್ದು. ಇವುಗಳಿಗೆ ಸೇರಿಸಿ, ಇತ್ತಲಾಗಿನ ಬಾಯಸ್ಕೌಟನ್ನು ಸೇರಿಸಬಹುದು ಈ ಸಮಾರಂಭಗಳು ಯಶಸ್ವಿಯಾಗಲಿಕ್ಕೆ ಯಾವ ನು ಹೆಚ್ಚು ವರ್ಗಣಿ ಕೊಡುವನೋ, ಅವನ ಮೇ ಲೆ ರಾಜಕೀಯರ ಕೃಪಾದೃಷ್ಟಿಯು ಹೆಚ್ಚಾಗುವ ದು. ಇವರ ತರುವಾಯ, ಮವಾಳರು ಇವ ರು ರಾಜಕೀಯ ಹಕ್ಕು ಬೇಡುವರು. ಆದರೆ ಅ ದರಿಂದ ಆಳರಸರಿಗೆ ಯಾವದೊಂದು ನೋವಾಗತ ಕ್ಕದ್ದಲ್ಲ. ಆನೆಗೆ ನೊಣ ಕಡಿದಷ್ಟು ನೋವು ಕೂ ಡ ಆಗತಕ್ಕದ್ದಲ್ಲ. ಸಾಯಮನ್ನ ಕಮೀಶನಕ್ಕೆ ಬ ಹಿಷ್ಕಾರ ಹಾಕಿದ್ದು ನಿಜ. ಆದರೆ ಅದರ ವಿರುದ್ಧ ಮುಂದಿನ ಮುಂತಾದ ನಿಷೇಧದ ಯಾವ ಕೃತಿಗ ಳನ್ನೂ ಮಾಡಲಪೇಕ್ಷಿಸಲಿಲ್ಲ. ಬಹಳವೇಕೆ ವಿ ಲಾಯತಿಯ ಬಟ್ಟೆಗೆ ಬಹಿಷ್ಕಾರ ಹಾಕಬಹುದೆಂದರೆ ಇವರ ಜೀವದ ಸುತ್ತು ಬರುತ್ತದೆ. ಸ್ವದೇಶಿಗೆ ಉತ್ತೇಜನ ಕೊಡಬೇಕೆಂಬ ಆಳದಕ್ಕೆಯು ರಾವು ವಾಸು ಮಾಡುವರು. ಆದರೆ ಸ್ವತಃ ವಿಲಾಯತಿ ಯ ಬಟ್ಟೆಬರೆಗಳಿಂದ ಸರ್ವಾಂಗ ಭೂಷಣ ಮಾಡಿ ಕೊಳ್ಳುವರು. ತಮ್ಮ ವಿಲಾಯತಿಯ ಊಟಿಗೆ ಧೂಳ ಸಹ ಹತ್ತದಷ್ಟು ದೇಶಕಾರ್ಯ ಮಾಡಲು ಕ ರ್ತವ್ಯ ತತ್ಪರ ರವರು. ಒಂಬತ್ತು ರಾಜಕಾರ ಣದಲ್ಲಿ ಸಂಧಾನದಿಂದ ಹೋಗಬೇಕೆಂಬದೇ ಇವರ ತೋರಿಕೆಯು. ಹಣ ಮಾತ್ರ ಹುಟ್ಟಿದ ಕೂಡಲೆ ಸಹಾಯವನ್ನು ಹಿಡಿಯಲಿಕ್ಕೆ ಹೋದಂತ ಪರಾಕ್ರಮ ತೋರಿಸಬೇಕೆಂಬ ಭಾವನೆಯೇ ಇಲ್ಲ ಆದ್ದರಿಂದ ಆಳರಸರಿಗೆ ಇವರ ಹೆದರಿಕೆಯೇ ಇರು ವದಿಲ್ಲ. ಲಾಹೋರದ ಕಾಂಗ್ರೆಸ ಸಭೆಯಲ್ಲಿ ಸ್ವಾ ತಂತ್ರ್ಯದ ಠರಾವು ಪಾಸಾದ ಕೂಡಲೆ ಮವಾಳರ ನ್ನು ನಿಮ್ಮ ಕಿಸೆಯಲ್ಲಿ ಹಾಕಿಕೊಳ್ಳಿರೆಂದು ವಿಲಾ ಯತಿಯ ಪತ್ರಗಳು ಕೂಗಬ್ಬಿಸಿವೆ. ಸಹಕಾರದಿಂ ದಲೇ ನಿಮ್ಮ ಹಿತವಾಗುವದೆಂದು ಮೊನ್ನೆ ವೆಜ್ವುಡ್ಡ ಸಾಹೇಬರು ಇದೇ ಸಮಯದಲ್ಲಿ ಭಾಷಣ ಮಾಡಿದ್ದು, ಮವಾಳರಿಗೆ ಮಹದಾನಂದವನ್ನುಂಟು ಮಾಡಿದೆ.

ರಾಷ್ಟ್ರೀಯರು ಒಣ ಮಾತಿಗೆ ಮೋಸ ಹೋ ಗತಕ್ಕವರಲ್ಲ. ಇವರು ತಪ್ಪುಮಾಡಿದರೂ, ಕುಸ್ತಿ ಯಲ್ಲಿ ಬಿದ್ದರೂ ಎದೆಗುಂದತಕ್ಕವರಲ್ಲ. ಮತ್ತೆ ಸಡ್ಡುಹೊಡೆದು ನಿಲ್ಲತಕ್ಕವರು. ಇವರಲ್ಲಿ ಜನತೆ ಯ ನಂಬಿಗೆ ಬಹಳ. ಇವರೇ ಕಾಂಗ್ರೆಸದವರು. ಮವಾಳರ ಸಭೆಗೆ ನೂರನ್ನೂರು ಜನರು ಕೂಡಬೇ ಕಾದರೆ ಕುರಿಕೋಣ ಬೀಳುತ್ತವೆ. ಆದರೆ ಕಾಂ ಗ್ರೆಸಕ್ಕೆ ಲಕ್ಷಾವಧಿ ಜನರು ನೆರೆಯುವರು. ಕಾಂ ಗ್ರೆಸದಲ್ಲಾದ ಠರಾವು ಪಾಸಾಗುವದೆಂಬದನ್ನು ಜ ಗತ್ತು ಲಕ್ಷ್ಯಗೊಟ್ಟು ನೋಡುವಂತೆ ಮವಾಳರ ಠರಾವುಗಳ ಒಗ್ಗೆ ಲಕ್ಷ್ಯಗೊಡುವದಿಲ್ಲ. ರಾಷ್ಟ್ರ ದ ಹಿತಕ್ಕಾಗಿ ಪ್ರಾಣಾಹುತಿ ಕೊಡಲಿಕ್ಕೆ ಸಿದ್ಧ ರಾದ-ಧನರು ನೊಂದಲೆನ್ನಿಂದ ತ್ಯಾಗ್ರಕ, ತಾ ಯ ವಿಭಾಗ ಮಾಡಬೇಕೆನ್ನುವಂಥವರು ಈ ಪಂಗಡ ಗಲ್ಲಿ ಸೇರುವರು. ರಾವುಂಡ ಟೇಬಲ ಪರಿಷ ದೆ ಮುರಿದು, ವಸಾಹತಿಕ ಸ್ವರಾಜ್ಯದ ವಿಚಾ ರವು ಮುರಿದರೆ ಇವರಿಗೆ ಮವಾಳರಂತೆ ದುಃಖವಾ ಗಿಲ್ಲ. ಇವರ ಉತ್ಕೃಷ್ಟ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವಾಗಿದೆ. ಈ ಸ್ವಾತಂತ್ರ್ಯ ದೊರಕಿ ಸಲು ತಮ್ಮ ಮುಂದೆ ಅನಂತ ಸಂಕಟಗಳು ಬ ರುತ್ತವೆಂಬದನ್ನು ಬಲ್ಲರು. ಕುರಂಗವಾಸ ಸತ್ಯಾ ಗ್ರಹವಾಸದರ ಜೀವನೆನಿಸುವದಿಲ್ಲ. ಹತ್ತು ವರ್ಷಗಳ ಹಿಂದೆ ೪೦ ಸಾವಿರ ಜನರು ಕ ೧೦ ಕಂಡರ ಈಗಾರೆ ನಾಲ್ಕು ಲಕ್ಷ ಜನರನ್ನು ಸೆರೆಮನೆಯ ಅಳು ಮಾಡಬೇಕೆಂದು ಹರುಷಿಸು ತಿದ್ದಾರೆ. ತಾವು ಬೇಡಿದ ಹಕ್ಕು ಸ್ವಾತಂತ್ರ್ಯ ದೊರೆಯಬೇಕೆನ್ನುವರಲ್ಲದೆ, ಆಳರಸರು ಕೊಟ್ಟದ್ದ ರಲ್ಲಿ ತೃಪ್ತರಾಗಬೇಕೆಂಬ ಅಲ್ಪ ಸಂತೋಷಿಗಳಲ್ಲ. ನಡೆಯುವ ವರ್ಷವೆಂದರೆ ಅಸಹಕಾರದ ಪುನರ್ಜ ನ್ಮವೇ ಸರಿ. ಇದು ದೇಶದ ತುಂಬ ಭಯಂಕ ರವಾದ ಬೇಗೆಯನ್ನು ಹಬ್ಬಿಸದಂತೆ ಮಾಡುವದು ಆಳರಸ ಕೈಯಲ್ಲಿಯೇ ಉಂಟು.

ಮವಾಳರ ಮಂಡಳದಲ್ಲಿ ವಸಾಹಾತಿನ ಸ್ವರಾಜ್ಯ.

ಕಾಂಗ್ರೆಸ ಸಭೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ದ ಜಾಹೀರನಾಮೆಯು ಹತ್ತಿದ್ದರಿಂದ, ಪಂಡಿತ ಮೋತಿಲಾಲರ ವಸಾಹತಿನ ಸ್ವರಾಜ್ಯ ಲೇಖನವು ನಿರುಪಯೋಗವಾಯಿತು. ಮವಾಳರಿಗಂತೂ ವಸಾ ಹಾತಿನ ಸ್ವರಾಜ್ಯ ಬೇಕು. ಅದರ ಹವಣಿ ಹುಟ್ಟಿ ರುತ್ತದೆ. ಇದನ್ನು ದೊರಕಿಸಲು ತಮ್ಮದೊಂದು ಸ್ವತಂತ್ರ ಯೋಜನೆಯನ್ನು ಸಿದ್ಧ ಪಡಿಸಲು ಒಂದು ಕಮೀಟಿ ನೇಮಿಸಿದ್ದಾರೆ. ಇದಕ್ಕೆ ಈ ಕೆಳಗಿನವರಿಗೆ ಆಮಂತ್ರಣ ಕೊಡುವಂತೆ ಜಾಹೀರ ಮಾಡಿದ್ದಾರೆ.

ನಾಮದಾರ ಶ್ರೀನಿವಾಸ ಶಾಸ್ತ್ರಿ, ೨ ಸರ ತೇಜ ಬಹಾದ್ದೂರ ಸಪ್ರು ೩ ಸರ ಫಿರೋಜ ಸೆ ಟನಾ ೪ ಡಾಕ್ಟರ ಅನಿಬಿಝಂಟ ೫ ಮಿ. ಮುನಿ ಸ್ವಾಮಿ ನಾಯುಡು ೬ ಮಿ ಬಿ. ರಾಮಸ್ವಾಮಿ ಮೊದ್ಲಿಯಾರ ೭ ಸರ ಪರಶುರಾಮ ಪಟ್ರೋ ೮ ಬ್ಯಾರಿಸ್ಟರ ಜಿನ್ನಾ, ೯ ಮಹಮುಹಮ್ಮದಾಬಾದಿನ

-ರಾಜರು, ೧೦ ಸರ ಮುಸಮುದ ಶಾಫಿ ೧೧ ಡಾಕ್ಟರ ಅನಸಾರಿ, ೧೨ ಮೌಲ್ವಿ ಶಾಹಾ ಅಬ್ದುಲ ಕಲಮ ಆಜದ ೧೩ ಪಂಡಿತ ಮಾಲವಿಯಾ ೧೪ ಮೆಸ್ಸ ಜಯಕರ ಮತ್ತು ಕೇಳಕರ ೧೫-೧೬ ಮುಗಳಿಂಗ ೧೭ ದಿವಾನ ಬಹಾದ್ದೂರ ಆರೇಂಗ್ಯಸ್ವಾಮಿ ಪೆ ದ್ರಾಮಾಂ ೧೮ ಮಿ. ವೆಂಕಟರಮಣ ಶಾಸ್ತ್ರಿ ಮತ್ತು ಬೇಗ ಬೆ-ಪೆ ಶ್ರೀನಿವಾಸರು, ಬಿಪಿನಚಂದ್ರರು, ವಿಶ್ವನಾಥ, ತಾಂಬಾಸಯ್ಯನವರು.

ಚೀನದಲ್ಲಿ ಪರರಾಷ್ಟ್ರೀಯರ ಹಕ್ಕಿನ ಮೇಲೆ ಗದಾ ಪ್ರಹಾರ.

—(೦)—

ಚೀನದೇಶದಲ್ಲಿ ವಾಸವಾಗಿರುವ ಪರರಾಷ್ಟ್ರೀಯರು ತಂತಮ್ಮ ಜನರ ಅಪರಾಧಿಗಳ ವಿಚಾರಣೆ ಮಾಡುವದಕ್ಕಾಗಿ ಸ್ವತಂತ್ರ ಕೋರ್ಟುಗಳನ್ನು ಸ್ಥಾಪಿಸಿದ್ದರು. ಅಂದರೆ ಇವರಿಗೂ ಚೀನರಿಗೂ ಅಧಿಕಾರ ಸಂಬಂಧವಿಲ್ಲದ್ದಾಗಿತ್ತು. ತಮ್ಮ ರಾಜ್ಯದಲ್ಲಿ ವ್ಯಾಪಾರೋದ್ಯೋಗಕ್ಕಾಗಿ ಬಂದು, ತಮ್ಮ ನೆತ್ತಿಯ ಮೇಲೆ ಬೆಣಸನ್ನು ಅರೆಯುವಂಥ ಪರಕೀಯರ ಕೃತ್ಯವು ಅಸಹ್ಯವಾದ ವೇದನೆಯನ್ನುಂಟುಮಾಡುವದಾಗಿರುತ್ತದೆಂದು ಚೀನರು ದಕ್ಷಿಣದ ಶ್ರೀ ... ರಾಷ್ಟ್ರೀಯ ಸರಕಾರದವರಾಗಿ, ಆ ದುಸ್ಥಿತಿ ತಪ್ಪಿಸುವ ಹಟ್ಟಿಯಲ್ಲಿಯು ಸಿಟ್ಟಿನ ಹಟ್ಟಿಯಲ್ಲಿ ನಿಂತಿರಾಗಿತ್ತು. ಇಂದು ಇವರು ಇಂಗ್ಲಂಡ, ಫ್ರಾನ್ಸ, ರಶಿಯಾ, ಜಪಾನ ಮುಂತಾದ ಬಲಾಢ್ಯ ದೇಶಗಳ ಕೂಡ ಹೋರಾಡಲಿಕ್ಕೆ ಅಸಮರ್ಥರಾಗಿದ್ದರೂ ಸ್ವಯಂ ನಿರ್ಣಯತತ್ವ ಪ್ರಕಾರ ತಮ್ಮ ರಾಜ್ಯ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಲು ಸಮರ್ಥರಾಗಿದ್ದಾರೆ. ಇವರಲ್ಲಿ ಪರಕೀಯರು ಬಾಯಿ ಹಾಕಲಾರದಂತಾಗಿದ್ದಾರೆ. ಆದ್ದರಿಂದ ಜನವರಿಯ ೧ನೇಯ ತಾರೀಖಿನಿಂದ ಪರಕೀಯರ ಅಪರಾಧಗಳ ವಿಚಾರಣೆಯನ್ನು ಚೀನ ಕೋರ್ಟಿನಲ್ಲಿಯೇ ನಡೆಯಬೇಕೆಂದು ಜಾಹೀರನಾಮೆಯನ್ನು ಹಚ್ಚಿದ್ದಾರೆ. ೧೦೦ ವರುಷ ಇಸವಿಯಿಂದ ಇಂಗ್ಲಿಷರು ತಮ್ಮ ಕೋರ್ಟುಗಳಿಂದಲೇ ತಮ್ಮವರ ನ್ಯಾಯ ವಿಚಾರಣೆ ಮಾಡುತ್ತಿದ್ದರು. ಇವರಿಗೆ ಆ ಹಕ್ಕು ಈಗ ಹೋಗುವದು ಒಂದು ಪ್ರಕಾರದಿಂದ ಅಪಮಾನವೆನಿಸಿದರೆ- ಆಶ್ಚರ್ಯವಲ್ಲ.

ಕಲಕತ್ತೆಯಲ್ಲಿ ಕುದುರೆಯ ಪಾಳ್ಯದಲ್ಲಿ ಒಂದು ಹೆಸರಾದ ಕುದುರೆಯು ಕಾಲು ಮುರಿದುಕೊಳ್ಳಲು, ಅದನ್ನು ಗುಂಡುಹಾಕಿ ಕೊಂದರು. ಇದರ ಬೆಲೆ ... ರೂಪಾಯಿ.

ಕೌನ್ಸಿಲ ಮತ್ತು ಅಸೆಂಬ್ಲಿಯ ರಾಜೀನಾಮೆಗೆ ಪ್ರಾರಂಭ.

—(೦)—

ಕಾಂಗ್ರೆಸದ ಕೌನ್ಸಿಲ ಮತ್ತು ಅಸೆಂಬ್ಲಿಗೆ ಸ್ವರಾಜ್ಯ ಪಕ್ಷೀಯರು ರಾಜೀನಾಮೆ ಕೊಡಬೇಕೆಂದು ಠರಾವಾದ ಪ್ರಕಾರ ಶ್ರೀ. ಪ್ರಕಾಶರು ರಾಜೀನಾಮೆ ಕೊಟ್ಟು ಕಳಿಸಿದರು. ಇವರು ರಾಜೀನಾಮೆ ಕೊಟ್ಟ ಈ ಸಂತರ ಯಾರು ಹೇಳಿದರೂ- ಪ್ರಸಂಗಬಿದ್ದರೆ- ಮುಂದೆ ಚುನಾವಣೆಯಲ್ಲಿ ಉಮೇದವಾರರಾಗುವದಿಲ್ಲೆಂದು ಹೇಳಿದ್ದಾರೆ. ೧೫ನೇಯ ತಾರೀಖಿನ ವರೆಗೆ ಇಡಿಯರು ಪಂಡಿತ ಮಾಲವಿಯಾ, ಕೇಳಕರ ಮೊದಲಾದವರು ಬಂದು ವಿಸ್ತಾರ ಪತ್ರವನ್ನು ಜಾಹೀರ ಮಾಡಿದ್ದಾರೆ. ಕರ್ನಾಟಕದ ಮಂಡಿಯಿಂದ ಶ್ರೀ ಜೋಗ ಮತ್ತು ಕರೀಯವರ ಸ್ವರಾಜ್ಯ ಪಕ್ಷೀಯರು ಇದ್ದು, ಇವರೂ ರಾಜೀನಾಮೆ ಕೊಡಬಹುದಾಗಿದೆ

ಪರದೇಶಗಳಿಂದ ಕಾಂಗ್ರೆಸಕ್ಕೆ ಬಂದ ಸಂದೇಶಗಳು

—(೦)—

ಕಾಬೂಲದಿಂದ ಮಹೇಂದ್ರ ಪ್ರತಾಪರು ಕಳಿಸಿದ ತಾರ.-

ಅಫಗಾನಿಸ್ಥಾನದ ಬಗ್ಗೆ ಸಹಾನುಭೂತಿಯುಳ್ಳವರಾಗಿ ಹಿಂದುಸ್ಥಾನವು ಸ್ವತಂತ್ರವಾಗಲಿ, ಏಶಿಯಾದ ಕೂಡ ಬಹುರಂಗವಾಗಿ ಸ್ನೇಹ ಬೆಳೆಸಬೇಕು. ಏಶಿಯಾಖಂಡವೆಲ್ಲ ಒಂದೆಂಬ ತತ್ವವನ್ನು ಅಂಗೀಕರಿಸಬೇಕು. ಜಗತ್ತಿನ ಎಲ್ಲ ಗುಲಾಮ ದೇಶಗಳಿಗೆ ಸ್ವಾತಂತ್ರ್ಯ ದೊರೆಯುವಂತೆ ಯತ್ನಿಸಬೇಕು.

ಇದೇ ಪ್ರಕಾರ ಅಮೇರಿಕೆ, ಫೀಜಿ, ದಕ್ಷಿಣ ಆಫ್ರಿಕೆ ಮುಂತಾದ ದೇಶಗಳಲ್ಲಿ ವಾಸವಾಗಿರುವ ಹಿಂದೀ ಜನರಿಂದ ಸಂದೇಶಗಳು ಬಂದಿರುತ್ತವೆ.

---

೬೦ ಹುಡುಗರು ಹೊಗೆಯಿಂದ ಉಸಿರುಗಟ್ಟಿ ಸತ್ತರು.

—[])[]—

ಇಂಗ್ಲಂಡಕ್ಕೆ ಸೇರಿದ ಪೇಸ್ಲೆ ಎಂಬ ಗ್ರಾಮದಲ್ಲಿ ಕ್ರಿಸ್‌ಮಸದ ಆನಂದವೆಂದು ಹುಡುಗರು ಸಿನೇಮಾ ನೋಡಲಿಕ್ಕೆ ಹೋಗಿದ್ದರು. ಥಿಯೆಟರದಲ್ಲಿ ಒಮ್ಮಿಂದೊಮ್ಮೆ ಬಾಂಬು ಎದ್ದು ಭಯಂಕರವಾಗಿ ಹೊಗೆಯಾಯಿತು. ಜನರೂ ಹುಡುಗರೂ ದಿಕ್ಕುಗಾಣದಾದರು. ಹೊಗೆಯಿಂದ ಉಸಿರುಗಟ್ಟಿ ೬೦ ಹುಡುಗರು ಎಚ್ಚರದಪ್ಪಿ ಬಿದ್ದರು. ಇವರಲ್ಲಿ ೬೦ ಜನರು ಸತ್ತೇಹೋದರು

ವರದರಾಜರ ಚಟವಟಿಕೆ-

ಡಾಕ್ಟರ ವರದರಾಜರು ಮಹಾತ್ಮರ ಭಕ್ತಾಗ್ರೇಸರರಾಗಿದ್ದರು. ಹನುಮಂತನು ರಾಮನ ಸೇವೆ ಮಾಡಿದಂತೆ ಇವರ ಸೇವೆ ಮಾಡಿದರು. ಆದರೆ ಇವರಿಗೆ ವಸಾಹಾತಿನ ಸ್ವರಾಜ್ಯ ಮತ್ತು ರಾಷ್ಟ್ರಪಂಥ ಬೇಕೆಂಬಲ್ಲಿಯೇ ವಿಶ್ವಾಸವುಂಟಾಗಿದೆ. ಕಾಂಗ್ರೆಸದ ಸಂಪೂರ್ಣ ಸ್ವಾತಂತ್ರ್ಯವಂತೂ ಇವರಿಗೆ ದಿಗ್ಭ್ರಮೆಯನ್ನುಂಟುಮಾಡಿದೆ. ಆದ್ದರಿಂದ ಇವರು ಕಾಂಗ್ರೆಸದ ಎಲ್ಲ ಸಂಬಂಧ ಮುರಿದು ಸಂಬಂಧ ಕಡಿದುಕೊಂಡಂತೆ ಜಾಹೀರ ಮಾಡಿ, ಮವಾಳರ ಮುಖಂಡತ್ವ ಕೂಡಿಕೊಂಡಿದ್ದಾರೆ.

ಸ್ವಾತಂತ್ರ್ಯವೆಂದರೆ ಬೊಲ್ಶೆವಿಜಮ-

ಕಾಂಗ್ರೆಸವು ಸ್ವಾತಂತ್ರ್ಯದ ಜಾಹೀರನಾಮೆಯನ್ನು ಹಚ್ಚಿದ್ದು ಸಂಪೂರ್ಣ ಬೊಲ್ಶೆವಿಕವಾಗುತ್ತದೆ. ಇದು ಒಡೆದು ಕಾಣಿಸುವಂಥ ಮಾತು. ಇದರಿಂದ ಹಿಂದುಸ್ಥಾನದ ತುಂಬ ಅನಾಯಕತನ ಮತ್ತು ಪುಂಡಾಟಿಕೆ ಮಾಡಿ, ರಾಜ್ಯಕ್ರಾಂತಿಗೆ ಕಾರಣವಾಗುವದು. ಆದ್ದರಿಂದ ಈ ಬಗ್ಗೆ ಭಾರತೀಯರು ಜಾಗೃತರಾಗಬೇಕೆಂದು ಮದ್ರಾಸದಲ್ಲಿ ಕೂಡಿದ ಮವಾಳರ ಪರಿಷತ್ತಿನ ಅಧ್ಯಕ್ಷರಾದ ಸರ ಸೆಟಲವಾಡ ಸಾಹೇಬರು ಹೇಳುತ್ತಾರೆ.

ಮುನಸಿಪರ ಹೆಸರಿನಲ್ಲಿ ಬದಲು-

ಮುಂಬಯಿಯಲ್ಲಿ ಸಿವ್ಹಿಲಸರ್ವಿಸ ಅಸೋಸಿಯೇಶನದ ಕಮಿಟಿ ಕೂಡಿತ್ತು. ಫಸ್ಟಕ್ಲಾಸಿನ ಸಬ್ಬಜ್ಜರಿಗೆ ಫಸ್ಟಕ್ಲಾಸ ಸಿವ್ಹಿಲಜಡ್ಜ ಮತ್ತು ಸೆಕಂಡ ಕ್ಲಾಸ ಸಬಾರ್ಡಿನೇಟ ಸಬ್ಬಜಡ್ಜರಿಗೆ ಸೆಕಂಡಕ್ಲಾಸ ಸಬ್ಬಜಡ್ಜವೆಂದು ಹೆಸರಿನಲ್ಲಿ ಬದಲು ಮಾಡುವಂತೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕೆಂಬ ಠರಾವು ಪಾಸುಮಾಡಲ್ಪಟ್ಟಿತು.

ಹುಬ್ಬಳ್ಳಿ-

ಹುಬ್ಬಳ್ಳಿಯಲ್ಲಿ ಉಣಕಲ್ಲ ಕೆರೆಗೆ ಈ ಸಾರೆ ಸಾಕಷ್ಟು ನೀರು ಬಂದಿಲ್ಲ. ಕೆರೆಯ ನೀರು ಕಡಿಮೆಯಾದ್ದರಿಂದ ಕಡಿಮೆ ಹೊತ್ತು ನೀರು ಬಿಡುವಂತೆ ಊರೊಳಗೆ ಡಂಗುರ ಹೊಡೆದಿದ್ದಾರೆ. ಬೇಸಿಗೆಯಲ್ಲಿ ನೀರಿನ ಅಭಾವ ಬೀಳಬಹುದೆಂದು ಜನರು ಹೌಹಾರಿದ್ದಾರೆ

ಲಾಹೋರಿನಲ್ಲಿ ಒಂದು ಊಟದ ಮನೆಗೆ ಬೆಂಕಿಹತ್ತಿ ೬೦ ಸಾವಿರದ ಹಾನಿಯಾಯಿತು.

ಮುಂದಿನ ವರ್ಷದ ಕಾಂಗ್ರೆಸವು ಕರಾಚಿಯಲ್ಲಿ ಕೂಡುವದು.

ಈಪ್ರಕಾರ ಕಿಮ್ಮತ್ತಿನ ದಾಗೀನೆಗಳನ್ನು ಅಥವಾ ಸಾವಿರ ರೂಪಾಯಿಗಳನ್ನು ಮತ್ತು ಈಗೆರಡು ವರ್ಷ ಬೇರೆ ಇದ್ದು ಸಾಲಾ ಮಾಡಿ ಉಪಜೀವನ ಮಾಡಿಕೊಂಡಿದ್ದರ ಬಾಬತ್ತು ಮೂರು ನೂರು ರೂಪಾಯಿ ಕೊಟ್ಟು ನನ್ನಿಂದ ಪಾವತಿ ಪಡೆಯಬೇಕು ಮತ್ತು ನನ್ನ ಮೇಲೆ ವ್ಯಭಿಚಾರದಿಂದ ಗರ್ಭಧಾರಣ ಹೊಂದಿದ ಆರೋಪ ಹೊರಿಸಿ ನನ್ನ ಬೇಅಬ್ರು ಮಾಡಿದ್ದೀರಿ ಈ ಬಾಬತ್ತು ಲುಕ್ಸಾನ ತರೀಕ ೨೦೦೦ ರೂಪಾಯಿ ಕೊಟ್ಟು ನಿಮ್ಮ ನೋಟೀಸು ಪರತ ತೆಗೆದುಕೊಳ್ಳಬೇಕು ಇಲ್ಲವಾದರೆ ನಿಮ್ಮ ಮೇಲೆ ಒಟ್ಟು ೩೩೦೦ ರೂಪಾಯಿಗಳಿಗೆ ದಾವೆ ಮತ್ತ ಫೋಟಿಗಿದೆಸೆಯಿಂದ ಇಲಾಜ ಮಾಡಲಾದೀತು ಇವೆಲ್ಲ ಬೋಜಾ ನೀವು ತಪ್ಪಿಸಿಕೊಳ್ಳಬೇಕಾದರೆ ಈ ನೋಟೀಸು ಮುಟ್ಟಿದ ೧ ತಿಂಗಳೊಳಗಾಗಿ ನನ್ನ ತಂದೆ ನನಗೆ ಕೊಟ್ಟ ದಾಗೀನೆಗಳನ್ನು ಮತ್ತು ನನ್ನ ಹೊಟ್ಟೆಯ ಖರ್ಚು ಹಾಗು ನನ್ನನ್ನು ಚಲೋ ರೀತಿಯಿಂದ ನಡಿಸಿಕೊಳ್ಳುವ ಬಾಬತ್ತು ಯೋಗ್ಯ ಜಾಮೀನು ಕೊಟ್ಟು ನನ್ನನ್ನು ಕರಕೊಂಡು ಹೋಗಿ ಸುರಳೀತ ಬಾಳ್ವೆ ಮಾಡಿಸಿಕೊಳ್ಳಬೇಕು ಇದಕ್ಕೆ ತಪ್ಪಿದರೆ ನಾನು ನಿಮ್ಮ ಮೇಲೆ ಕಾಯಿದೇಶೀರ ಇಲಾಜ ಮಾಡಬೇಕಾದೀತು ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಅದೆ ತಿಳಿಯುವದು ತಾ|| ೩-೧-೧೯೩೦ನೇ ಇಸ್ವಿ

ಸಹಿ ದ್ಯಾಮವ್ವಾ ಕೋಂ| ಕರಿಗೌಡಾ ಗೋನಾಳ

ನೋಟೀಸು

ಪೀರಸಾಹೇಬ ವಲ್ಲದ ಫಕೀರಸಾಹೇಬ ಮುಂಡರಗಿ ಸಾ|| ಗುಡಿಗೇರಿ ಹಾಲಿವಸ್ತಿ ಮುಗದ ಈತನಿಗೆ—

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಮೋದೀನಬಿ ಕೋಂ ಪೀರಸಾಹೇಬ ಮುಂಡರಗಿ ಈಕೆಯು ನಿನಗೆ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ನನ್ನ ಮದಿವೆಯ ಗಂಡನಿದ್ದು ನಿನ್ನಿಂದ ನನಗೆ ಒಂದು ಗಂಡುಮಗ ಸಹ ಆಗಿದೆ ನೀನು ಇತ್ತಲಾಗ ಸಿಸಾಬಾಜಿ ಮನುಷ್ಯನಾಗಿ ನನ್ನನ್ನು ಬಹಳ ಕೆಟ್ಟರೀತಿಯಿಂದ ನಡಿಸಿಕೊಂಡು ನಿನ್ನಕ್ಕನ ಮಾತುಕೇಳಿ ಕಡೆಗೆ ಹೊಡೆದು ಎಳೆ ಕೂಸಿನ ಸಹಿತವಾಗಿ ಮನೀಬಿಟ್ಟು ಹೊರಗೆ ಹಾಕಿದಿ ಹೊರಗೆ ಹಾಕುವಾಗ ನನ್ನ ತವರ ಮನಿಯ ದಾಗೀನೆ ಅಂದರೆ ಗುಂಡಿನ ಟೀಕಿ ೧ ಕಿ ರೂ ೫೨ ಪವಳದ ಸರ ೧ ಕಿ ರೂ ೩೭ ಇವನ್ನು ಕಸಕೊಂಡಿ ಈಗ ಇವನ್ನು ನಿನ್ನ ಸಿಸಾಬಾಜಿಗೆ ಹಾಳುಮಾಡಿದಂತೆ ಕೇಳತೇನೆ ಈ ಮಾತಿಗೆ ಒಂದು ವರ್ಷವಾಯಿತು ನಾನು ಫೋಷಾದ ಹೆಂಗಸು ಇರುವದರಿಂದ ನಾನು ಬೇರೆಯವರಲ್ಲಿ ಸಾಲಾ ಮಾಡಿ ಉಪಜೀವನ ಮಾಡಿಕೊಂಡೆನು ಈಗ ಸಾಲಗಾರರ ತಗಾದಿ ಆಗಿದೆ ಕಾರಣಾ ಈ ನೋಟೀಸ ಮೂಲಕಾ ನಿನಗೆ ತಿಳಿಸುವದೇನಂದರೆ- ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ರಕಮು ರೂ ೫೦ ಮತ್ತು ಕೂಸಿನ ದೆಸೆಯಿಂದ ಹಾಲಿನ ಖರ್ಚು ರೂ ೩೫ ಮತ್ತು ದಾಗೀನೆ ಬಾ|| ರೂ ೬೪ ಅಂತೂ ೧೪೯ ರೂಪಾಯಿಗಳನ್ನು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ನೀನು ಸಿಸಾಬಾಜಿ ಮನುಷ್ಯನಿರುವದರಿಂದ ನನಗೆ ಮತ್ತು ನನ್ನ ಕೂಸಿಗೆ ಜನ್ಮದ ಭೀತಿ ಇರುತ್ತದೆ ಆದ್ದರಿಂದ ವ್ಯಸನಬಿಟ್ಟು ಚಲೋರೀತಿಯಿಂದ ಬಾಳಿವೆ ಮಾಡತೇನೆಂದು ದೈವದವರ ಜಾಮೀನುಕೊಟ್ಟು ಕರಕೊಂಡು ಹೋಗಬೇಕು ಇಲ್ಲವಾದರೆ ಇದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು ಅನಂತರ ನಿನ್ನ ಹಕ್ಕು ನನ್ನಮೇಲೆ ವ ಕೂಸಿನಮೇಲೆ ಮತ್ತು ಉಡಕಿಗಂಡನಮೇಲೆ ಬಿಲಕೂಲ ನಡೆಯಲಾರದು ಅಂತಾ ಕೊಟ್ಟ ನೋಟೀಸು ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲದೆ ತಿಳಿಯುವದು

ತಾ|| ೩ನೇ ಜನೇವರಿ ೧೯೩೦ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಮೋದೀನಬಿ ಕೋಂ ಪೀರಸಾಹೇಬ ಮುಂಡರಗಿ ಸಾ|| ಗುಡಿಗೇರಿ ಈಕಿ ಕೈದು ಇರುತ್ತದೆ

ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ ಅಬ್ಬಿಗೇರಿ

ಸ್ವಲ್ಪದಿವಸಗಳೊಗಾಗಿಯೇ, ಸ್ವಲ್ಪದಿವಸಗಳ ಸಲುವಾಗಿ ಧಾರವಾಡಕ್ಕೆ

ವೀರರಾಣಿ ಕಿತ್ತೂರ ಚನ್ನಮ್ಮ ನು ಬರುವಳು

ಬಂದು ತನ್ನ ಅಪ್ರತಿಮ ವೀರತನವನ್ನು ತೋರಿಸುವಳು

ತೀವ್ರವೇ ಜನ್ಮಭೂಮಿಯಾದ ಕಿತ್ತೂರ, ಬೈಲಹೊಂಗಲ, ಬೆಳಗಾವಗಳ ಕಡೆಗೆ ತೆರಳುವಳು.

ಎಂದು, ಎಲ್ಲಿಗೆ, ಯಾವಾಗ, ಎಷ್ಟು ದಿವಸ, ಯಾವ ತಾರೀಖಿಗೆ ಬರುವಳೆಂಬದನ್ನು

ಮೊದಲೇ ಲಕ್ಷಗೊಟ್ಟು ನೋಡುತ್ತಿರುವದು ಒಳ್ಳೇದು.

ಹಿಂದುಗಡೆಯಲ್ಲಿ ಮುಂದಾಗಿ ತಿಳಿಸಲಿಲ್ಲವೇಕೆಂಬ ಅಪವಾದ ಹೊರಬಾರದೆಂದಾಶಿಸುವ

ರಸಿಕಾಗ್ರಣಿಗಳಡಿಯಾಳಾದ

ಮ್ಯಾನೇಜರ

ಕ. ಸಾ. ಸೇ. ಸಂ. ನಾ. ಮಂ. ಅಬ್ಬಿಗೇರಿ.

ಸುಸಮಯ

ವಿ. ಟ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರ್ಯಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ವಿಶೇಷ ಸವಲತ್ತು

ದಿ ಧಾರವಾಡ ಮೋಟಾರ ಡ್ರೈವಿಂಗ ಆ್ಯಂಡ ಮೆಕ್ಯಾನಿಕಲ್

ಟ್ರೇನಿಂಗ ಸ್ಕೂಲ.

ನಮ್ಮ ಸ್ಕೂಲಿನಲ್ಲಿ ಜಾನೇವಾರಿ ೨೧ನೇ ತಾರೀಖಿನವರೆಗೆ ಮಾತ್ರ ಫಕ್ತ ೨೦ ವಿದ್ಯಾರ್ಥಿಗಳ ಪ್ರವೇಶ ಸಿಗುವದು. ಆದ್ದರಿಂದ ಬೇಗನೇ ಮೋಟಾರ ಡ್ರಾಯ್ವಿಂಗ ವ ಮೆಕ್ಯಾನಿಕಲ್ ಶಿಕ್ಷಣ ಪಡೆಯಲಿಚ್ಛಿಸುವವರು ನಮ್ಮ ಮಾಹಿತಿ ಪತ್ರಕ ತರಿಸಿಕೊಂಡು ಅದರೊಳಗಿನ ನಿಯಮಕ್ಕನುಸರಿಸಿ ಹೆಸರು ದಾಖಲ ಮಾಡಿಸಿಕೊಳಬೇಕು.

ತಮ್ಮ ಹಿತಚಿಂತಕ,
ವ್ಹಿ. ಎಸ್. ಇಟಗಿ,
ಲೈಸನಡ್ಝೂರ ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪಕ್ತಿ ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1448

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ (೧) ಧಾರವಾಡ ರವಿವಾರ ತಾರೀಖು ೫ ನೇ ಜನವರಿ ೧೯೩೦ (ಸಂಚಿಕೆ ೫

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಟ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ಪತ್ತೀ ಮೇಲೆ ಸೋವಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗೀನೆಗಳ ಮೇಲೆ ಸೋವಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ಪತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ [illegible] ಎಷ್ಟಷ್ಟೇ ರಕಮು ಕಂಡು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಎಷ್ಟಷ್ಟೇ ರಕಮು ಕೊಡು [illegible], ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆ [illegible]. ಧಾರವಾಡ [illegible] ಪಟ್ಟಣವಾಸಿಗಳು ಈ ಸೋಯಿಯ ಪ್ರಯೋಜನ ತಕ್ಕೊಳ್ಳುತ್ತಿದ್ದಾರೆ. [illegible] ಮತ್ತು [illegible] ಈ [illegible], [illegible] ಹಳ್ಳಿಯಲ್ಲಿ ಬಡ್ಡಿಯ ದರವು [illegible] ಇರುತ್ತದೆ ಅದೂ ಒಮ್ಮೊಮ್ಮೆ [illegible] ದಾಗೀನೆಗಳು [illegible] ಸಹ [illegible] ಬಡ್ಡಿಯಲ್ಲಿ [illegible] ಈ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ಪತ್ತೀ ಇಟ್ಟರೆ [illegible], [illegible] ಸಾಲದ ಭಾರವನ್ನು ಕಡಿಮೆ ಮಾಡಿಕೊಳ್ಳ [illegible] ಹಳ್ಳಿಯಲ್ಲಿ ಸಾಲ [illegible] ನಮ್ಮ [illegible] ಲಾಭ ಪಡೆಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿಯ ಮೇಲೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ [illegible] ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು [illegible] ಸಾವಕಾರರ [illegible] ಕರಾರ ಮಾಡಿ ಸಾಲ ತೆಗೆದುಕೊಳ್ಳುವರು, [illegible] ಹೀಗೆ ಬ್ಯಾಂಕಿನಲ್ಲಿ [illegible]. ಹಳ್ಳಿಗಳ ಜನರು ನಮ್ಮಲ್ಲಿ [illegible] ವ್ಯವಹಾರ ಮಾಡಿ ಖಾತ್ರೀ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಪೆಟ್ಟಿಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋವಿಯಿಂದ ಸಿಗುವವು.

ಕೃಷ್ಣರಾವ ವೆಂಕಟರಾವ ಧಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀ.

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ದರವನ್ನು ನಮ್ಮಿಂದ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯು ಇರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨೮-೧-೩೦ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯು

ಶ್ರೀ ವಸುಮತಿಯು ನಲಿಸುವ ಸುಖತರ ಸಂತೆಗಳಿಂ ।

ದೀ " ವಿಜಯಂ " ಶ್ರೀಕರದಿಂ ।

ನಾ ವಿಸ್ತರಿಸಿ ವಿನಾಶವಲಿಪ್ರತು ಸಾಜಾ ॥೧

ಪಂಡಿತ ಜವ್ಹಾರಲಾಲ ನೆಹರು

— []()[] —

ಆಯುಷ್ಯದ ಮಧ್ಯಕಾಲ

—(೦)—

ಪಂಡಿತ ಜವ್ಹಾರಲಾಲರ ಹೆಸರು ಹಿಂದುಸ್ಥಾನವನ್ನು ಪಾರತಂತ್ರ್ಯದಿಂದ ಮುಕ್ತಮಾಡುವಂಥವರ ನಾಮಾವಳಿಯಲ್ಲಿ ಉಚ್ಚಸ್ಥಾನವನ್ನು ಹೊಂದುವದು. ಸ್ವತಃ ಜನಕರಾದ ಪಂಡಿತ ಮೋತಿಲಾಲರು ಬಾಪನೆ ಬೇಟಾ ಸವಾಯಾ ಎಂದಿದ್ದಾರೆ. ಕಬೀರನಿಗಿಂತ ಕಮಾಲನು ಹೆಚ್ಚಿನವನಾದಂತೆ ! ಜವ್ಹಾರಲಾಲರು ಗರ್ಭ ಶ್ರೀಮಂತರು ತಂದೆಯ ಸಂಪತ್ತು ಬಹು ದೊಡ್ಡದು. ರಾಜಮಹಾರಾಜರು ಅಸೂಯಪಡುವಂಥಾದ್ದು ಇವರ ಅರಮನೆಗಳು ಫ್ರಾನ್ಸದಲ್ಲಿ ಹೊಲಿದು ಬರುತ್ತಿದ್ದವು ಇಂಥವರು ಈಗ ಶುದ್ಧ ಖಾದೀಧಾರಕರಾಗಿದ್ದಾರೆ ಇವರ ಶಿಕ್ಷಣವು ವಿಲಾಯತಿಯಲ್ಲಾಯಿತು. ಹಿಂದುಸ್ಥಾನದಲ್ಲಿ ಕೂಡ ಒಬ್ಬ ಸಾಹೇಬರೇ ಶಿಕ್ಷಕರಾಗಿದ್ದರು. ವಿಲಾಯತಿಗೆ ಹೋಗಿ ಬ್ಯಾರಿಸ್ಟರರಾಗಿ ಬಂದರು. ಇಂದು ತಂದೆಗಿಂತ ಮಗನು ಹೆಚ್ಚಿನವನಾದರೂ, ವಕೀಲಿ ವ್ಯವಸಾಯದಲ್ಲಿ ತಂದೆಯ ಮುಂದೆ ಮಗನ ಬೆಳಕು ಬೀಳಲಿಲ್ಲ.

ಸಾರ್ವಜನಿಕ ಕೆಲಸಗಳಲ್ಲಿ ಮನಸ್ಸುಹಾಕಿ ಯಥಾಶಕ್ತಿಯಾಗಿ ಅವನ್ನು ನಿರ್ವಹಿಸುವದು ಇವರಿಗೆ ಹುಟ್ಟು ಗುಟ್ಟು ಹಾಕಿತ್ತೆಂದರೂ ಸಲ್ಲುವದು. ವಿಲಾಯತಿಯಲ್ಲಿರುವಾಗ ಕೂಡ ಹಿಂದುಸ್ಥಾನದ ರಾಜಕಾರಣದಲ್ಲಿ ಮನಸ್ಸು ಹಾಕುತ್ತಿದ್ದರು. ಹಿಂದುಸ್ಥಾನಕ್ಕೆ ಬಂದನಂತರ ನಾಮದಾರ ಗೋಖಲೆಯವರ ಸರ್ವಂಟ ಫ್ ಇಂಡಿಯಾ ಸೊಸಾಯಿಟಿಗೆ ೪೦ ಸಾವಿರ ರೂಪಾಯಿಗಳನ್ನು ಕೂಡಿಸಿಕೊಟ್ಟರು ಇಂಥ ಕೆಲಸಗಳಲ್ಲಿಯೇ ಮನಸ್ಸು ಹಾಕಿದರಲ್ಲದೆ, ದ್ರವ್ಯಸಂಪಾದನೆಯಲ್ಲಿ ಮನಸ್ಸೇ ಹಾಕಲಿಲ್ಲ. ೧೯೨೧ರಲ್ಲಿ ನಾನ-ಕೋ-ಆಪರೇಶನ ಪ್ರಾರಂಭವಾದ ಕೂಡಲೆ ಅದರಲ್ಲಿ ಸೇರಿದರು. ಸರಕಾರದವರು ಎರಡು ಸಾರೆ ಶಿಕ್ಷೆ ಮಾಡಿದರು. ಎರಡೂ ಸಾರೆ ಶಿಕ್ಷೆ ಮುಗಿಯುವದರೊಳಗಾಗಿ ಬಂಧಮುಕ್ತರಾದರು. ನಾಭಾದಲ್ಲಿ ಇವರಿಗೆ ಬರಲು ಪ್ರತಿಬಂಧವಾಯಿತು ಆದರೂ ಅಲ್ಲಿ ಹೋದರು. ಈ ಅಪರಾಧಕ್ಕಾಗಿ ಎರಡೂವರೀ ವರ್ಷದ ಶಿಕ್ಷೆಯಾಯಿತು. ಶಿಕ್ಷೆ ಹೇಳಿದ್ದು ನಾಭಾದಲ್ಲಿ, ಇವರು ಇದನ್ನು ಪ್ರಯಾಗವಲ್ಲಿ. ಶಿಕ್ಷೆ ಅನುಭವಿಸಲು ವಾರಂಟನಿಂದ ಇವರನ್ನು ಹಿಡಿಯೊಯ್ಯಲೇ ಇಲ್ಲ. ಆ ಶಿಕ್ಷೆಯು ಹಾಗೇ ಉಳಿದಿದೆ ೧೦ ವರ್ಷಗಳ ಹಿಂದೆ ಕಾಬೂಲ ಮತ್ತು ಹಿಂದುಸ್ಥಾನ ಸರಕಾರದ ನಡುವೆ ರಾಜಿಯ ಸಂಧಾನ ನಡೆವಾಗ-ಕಾಬೂಲದವ ಕೀಲರನ್ನು ಕಾಣಲಿಕ್ಕೆ ಹೋಗಕೂಡದೆಂದು ಸರಕಾರದವರು ಇವರಿಗೆ ಬಂದುಕಟ್ಟು ಮಾಡಿದ್ದರು.

ಈ ಸಂಗತಿಯಿಂದ ಇವರ ಮೇಲೆ ಸರಕಾರದ ಎಷ್ಟು ಕೃಪೆ ಮತ್ತು ಪ್ರೀತಿ ಇರುತ್ತದೆಂಬದು ಧ್ವನಿತವಾಗುತ್ತದೆ. ಕಳೆದಾರು ವರ್ಷಗಳಿಂದ ಇವರು ಕಾಂಗ್ರೆಸದ ಸೇಕ್ರೇಟರಿಯಾಗಿದ್ದರು. ಆಗಿನಿಂದ ಇವರು ರಾಷ್ಟ್ರಕಾರ್ಯದಲ್ಲಿ ಓರ್ವ ಪ್ರಮುಖಗೃಹಸ್ಥರಾದರು ಈ ಸಾರೆ ಇವರು ಕಾಂಗ್ರೆಸದ ಅಧ್ಯಕ್ಷರಾದದ್ದು ಅಯಾಚಿತವಾದದ್ದು ಏಕೆಂದರೆ ತಾವು ಅಧ್ಯಕ್ಷರಾಗಬೇಕೆಂದು ಅಪೇಕ್ಷಿಸಲಿಲ್ಲ ಮಹಾತ್ಮರು ಒತ್ತಾಯದಿಂದ ಇವರನ್ನು ಕಾಂಗ್ರೆಸದ ಅನಭಿಷಕ್ತರಾಜರಾಗಿ ಮಾಡಿದರೆಂಬದು ಸರ್ವಶ್ರುತವದೆ ರಶಿಯಾಕ್ಕೆ ಹೋಗಿ, ಅಲ್ಲಿಯ ಸ್ಥಿತಿಗತಿಯನ್ನು ನೋಡಿದ್ದಾರೆ ತಾವು ಸ್ವತಃ ಸೋಶಿಯಾಲಿಸ್ಟ ಮತ್ತು ಪ್ರಜಾಸತ್ತಾತ್ಮಕವಾದಿ ಎಂದು ಮರೆಮಾಚದೆ ಪ್ರಸಿದ್ಧ ರೀತಿಯಿಂದ ಹೇಳಿದ್ದಾರೆ ಇವರು ಮಾಡಿದ ಭಾಷಣದ ಮಹಾತ್ಮರ ಘೋರ ಅನುಕಂಪೆಯುಂಟು. ಒಂದು ವರ್ಷದಲ್ಲಿ ಸ್ವರಾಜ್ಯ ಕೊಡದಿದ್ದರೆ- ಸ್ವಾತಂತ್ರ್ಯದ ಕೆಂಪು ನಿಶಾನೆ ಹಚ್ಚುವೆನೆಂಬ ಮಹಾತ್ಮರು ಆಡಿದ ನುಡಿಯನ್ನು ಇವರು ನಿಜವಾಗಿ ತೋರಿಸಿದರು. ಹಿಂದುಸ್ಥಾನಕ್ಕೆ ಸಂಪೂರ್ಣ ವಿಲ್ಲದಿದ್ದರೂ ವಸಾಹಾತಿನ ಸ್ವರಾಜ್ಯ ದೊರೆತರೂ, ಹಿಂದೆ ಕೊಟ್ಟ ಸಾಲ ಮುಣುಗುವದು ಮುಂದೂ ಸಾಲ ಕೊಡಬೇಡಿರೆಂದು ವಿಲಾಯತಿಯ ಪತ್ರಗಳು ಒಂದು ತಿಂಗಳ ಹಿಂದೆ ಬೊಬ್ಬೆಹೊಟ್ಟಿದ್ದನ್ನ ವಿಜಯದಲ್ಲಿ ಓದಿದ್ದೇವೆ ಅವು ಮತ್ತಷ್ಟು ಗಾಬರಿಯಾಗುವಂತೆ ಪಂಡಿತರು ಈ ವಿಷಯವನ್ನು ಎತ್ತಿ ಹಿಡಿದಿದ್ದಾರೆ. ಆ ಭಾಗವು ಮುಂದೆ ಕೊಟ್ಟಿರುತ್ತದೆ

ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೆಂದರೆ-ಬ್ರಿಟಿಶ ಸ್ಥಿತಿಯ ಚಕ್ರವು ಕೆಳಪದಿಯಾಗಿಯೂ ತಮ್ಮ ಪ್ರಭುತ್ವಕ್ಕೆ ಸೇರಿದಂಥ ಪರಕೀಯರ ರಕ್ತ ಹೀರುವದೂ ಆಗಿರುತ್ತದೆ. ಇಂಥ ಸಾಮ್ರಾಜ್ಯದ ಭಾಗವಾಗಿರುವದು ಘಾತಕವೇ ಸರಿ. ಸ್ವಾತಂತ್ರ್ಯದ ಹೋರಾಟದಲ್ಲಿ ನಮಗೆ ಇಂದೇ ಜಯದೊರೆಯಲಿಕ್ಕಿಲ್ಲ. ಮುಂದೆ ನಿಶ್ಚಯವಾಗಿ ದೊರೆಯುವದು. ಹಿಂದುಸ್ಥಾನವನ್ನು ಯಾವಾಗಲೂ ತಮ್ಮ ಸಾಲದ ಹಂಗಿನೊಳಗಿಟ್ಟು ಅದನ್ನು ಕೊಳೆ ಹಾಕಬೇಕೆಂದು ಬ್ರಿಟಿಶರ ರಾಜನೀತಿಯ ತತ್ವವು ಆದ್ದರಿಂದ ನಾವು ಈ ಸಾಲವನ್ನೇ ಕೊಡುವದಿಲ್ಲೆಂದು ಸಾರಿಸಾರಿ ಹೇಳತಕ್ಕದ್ದು, ಗುಪ್ತಸಂಚಿನ ಕಾಲ ಹೋದಾಯಿತು ಸ್ವಾತಂತ್ರ್ಯಕ್ಕಾಗಿ ಜಾಹೀರ ರೀತಿಯಿಂದ ಉದ್ಯುಕ್ತರಾಗಬೇಕು.

ಪಂಡಿತ ಜವ್ಹಾರಲಾಲರ ಮೇಲೆ ವಿಲಾಯತಿಯ ಪತ್ರಿಕೆಗಳು ಅತ್ಯಂತವಾಗಿ ಕೋಪಗೊಂಡಿವೆ, ಇವರ ಮೇಲೆ ರಾಜದ್ರೋಹ ಮತ್ತು ರಾಜ್ಯಕ್ರಾಂತಿಯ ಆರೋಪ ಹೊರಿಸಿ, ಖಟ್ಲೆ ನಡಸಬೇಕೆಂದೂ ಒಂದು ಪತ್ರವು ಅಂದಿರುತ್ತದೆ ಸ್ವಾತಂತ್ರ್ಯದ ಜಾಹೀರನಾಮೆಯನ್ನು ಹಚ್ಚುವಾಗ ತಮ್ಮ ಮೇಲೆ ಯಾವ ಜವಾಬದಾರಿಯುಂಟು. ಅದಕ್ಕಾಗಿ ಯಾವ ಸಂಕಟ ಬರುವದೆಂಬದನ್ನು ಪಂಡಿತರು ಅರಿತೇ ಇದ್ದಾರೆ

ಖಿಲಾಫತ್ತ ಪರಿಷತ್ತು

—:೦:—

ಲಾಹೋರಿನಲ್ಲಿ ಮುಸಲಮಾನರ ಖಿಲಾಫತ್ತ ಕೂಡಿತ್ತು ಸರ ಜುಲ್ಫಿಕರ ಅಲ್ಲಿಖಾನರು ಸ್ವಾಗತಾಧ್ಯಕ್ಷರೂ, ನವಾಬ ಇಸ್ಮಾಯಿಲಖಾನರು ಸಭಾಧ್ಯಕ್ಷರೂ ಆಗಿದ್ದರು. ಮೌಲಾನಾ ಮಹಮದಲ್ಲಿ, ಶೌಕತಲ್ಲಿ, ಹಸರತ ಮೋಹಿನಿ ಮೊದಲಾದವರು ಸಭೆಗೆ ದಯಮಾಡಿಸಿದ್ದರು ಸಭೆಯಲ್ಲಿ ಶೌಕತಲ್ಲಿಯವರು ಮಹಾತ್ಮರು, ಪಂಡಿತ ಮೋತಿಲಾಲ ಮತ್ತು ಪಂಡಿತ ಜವ್ಹಾರಲಾಲರನ್ನು ದೂಷಿಸುವಂಥ ಮಾತುಗಾರಿಕೆಯನ್ನು ಪ್ರಾರಂಭಿಸಲು-ಸಭೆಯತುಂಬ ದೊಡ್ಡ ಗೊಂದಲವೆದ್ದಿತು ಒಂದು ಕಾಲದಲ್ಲಿ ಮಹಾತ್ಮರ ಎಡ-ಬಲ ಸೇವಕರಾಗಿದ್ದ ಅಲ್ಲಿ ಬಂಧುಗಳು ಮಹಾತ್ಮರ ಮೇಲೆ ದುಷ್ಟ ಆರೋಪಗಳನ್ನು ಹೊರಿಸಲಾರಂಭಿಸಿದ್ದನ್ನು ಕೇಳಿ, ಸಭಿಕರು ಇವರನ್ನು ಜಳೆದು, ಮುಂದೆ ಮಾತನಾಡಗೊಡದೆ ಕೆಳಗೆ ಕೂಡ್ರಿಸಿದ್ದು ಎಷ್ಟೂ ಆಶ್ಚರ್ಯವಲ್ಲ ಇವರು ಖಿಲಾಫತದ ಮುಖ್ಯ ಪುರಸ್ಕರ್ತರಾಗಿದ್ದರು ಅಲ್ಲಿಯೇ ಹೂವು ಮಾರಿದಲ್ಲಿ ಹುಲ್ಲು ಮಾರಿಕೊಂಡಂತೆ ತಮ್ಮ ಅವಸ್ಥೆ ಮಾಡಿಕೊಂಡದ್ದು ಶೋಚನೀಯವು ಕಾಂಗ್ರೆಸದಲ್ಲಿ ಸ್ವಾತಂತ್ರ್ಯದ ಠರಾವು ಪಾಸಾಯಿತು ಅಲ್ಲಿ ರಾಜ್ಯಕ್ರಾಂತಿಯು ಜಯಜಯಕಾರವಾಗಲಿ, ಬ್ರಿಟಿಶ ಸಾಮ್ರಾಜ್ಯಕ್ಕೆದ ಅಧಃಪತನ

ವಾಗಲಿ, ಒಂದನಲಗಾರರ ದುರ್ದೇಶಿಯಾಗಲಿ ಎಂಬ ಕೋಲಾಹಲವೆದ್ದರೂ ಒಬ್ಬರೂ ಅದಕ್ಕೆ ಅಡ್ಡ ಹೋಗಲಿಲ್ಲ. ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಗಲ್ಲಿಗೇರುವೆನು; ಪ್ರಾಣ ಕೊಡುವೆನು; ರುಂಡ ಹಾರಿದರೂ ಪರಿವೆ ಮಾಡತಕ್ಕವನಲ್ಲೆಂದು ಈ ಪರ್ಯಂತರ ಘಂಟಾಘೋಷವಾಗಿ ಸಾರುತ್ತ ಬಂದಿದ್ದ ವೆಲೌ ಶೌಕತಲ್ಲಿಸಾಹೇಬರು ತಮ್ಮ ಸಭೆಯಲ್ಲಿ ಈ ವಾಕ್ಯಗಳ ಉಚ್ಚಾರವಾದ ಕೂಡಲೆ- ಅದಕ್ಕೆ ಅಡ್ಡಿ ಮಾಡಿದ್ದು ತೀರ ಹಾಸ್ಯಾಸ್ಪದವಾಗುತ್ತದೆ ನಾಂಪ್ರತ ಪ್ರಾರಂಭವಾಗುವ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ವೆಲೌ ಸಾಹೇಬರಂಥವರು ಸಡ್ಡು ಹೊಡೆದು ರಣಕುಂಡದಲ್ಲಿ ಹಾರಬೇಕಾದದ್ದು ಪರೀಕ್ಷೆಯ ಹೊತ್ತು ಬಂದ ಕೂಡಲೆ- ಹಿಂಜರಿಯುವದು ಸೋಜಿಗವಲ್ಲವೇ; ಹಿಂದೂ ಜನರು ಇಂಥವರನ್ನು ಉತ್ತೇಜಿಸುವಾರನೆಂದು ಕರೆಯುವರು

ಶ್ರೀ. ಬಸವೇಶ್ವರ ವಾಚನಾಲಯದ ಸ್ಥಾಪನೆ.

—(೨)—

ಕುಡಪಲಿ ತಾ|| ಹೋಡ ತ|| ೨೮-೧೨-೨೯

ಮೊದಲೇ ಗೊತ್ತಾದ ಮೇರೆಗೆ ತಾರೀಖು ೨೮-೧೨-೨೯ ನೇ ದಿವಸ ಸದರೀ ವಾಚನಾಲಯವನ್ನು ಸ್ಥಾಪಿಸುವದಕ್ಕೆ ಸದರಿ ಗ್ರಾಮದ ತರುಣ ಮಂಡಳಿಯವರು, ಮೆ| ಅಗ್ರಿಕಲ್ಚರ ಖಾತೆಯ ಡೈರೆಕ್ಟರರಾದ ಎಸ್. ಎಸ್. ಸಾಲೀಮಠ ಸಾಹೇಬರವರಿಂದ ವಾಚನಾಲಯದ ಅನಾವರಣ ಸಮಾರಂಭವನ್ನು ಮಾಡಬೇಕೆಂದು ಅವರಿಗೆ ವಿನಂತಿಯನ್ನು ಮಾಡಿಕೊಂಡ ಪ್ರಕಾರ ಸದರಿಯವರು ಅದಕ್ಕೆ ಒಪ್ಪಿಕೊಳ್ಳಲು, ಅವರನ್ನು ಅತಿ ವಿಜೃಂಭಣೆಯಿಂದ ವಾಚನಾಲಯದ ಸಲುವಾಗಿ ಕಟ್ಟಿಸಿದ ಕಟ್ಟಡದ ಮುಂದೆ ಭವ್ಯವಾಗಿ ರಚಿಸಿದ ಮಂಟಪಕ್ಕೆ ಕರೆತಂದರು, ಆ ದಿವಸ ಸುತ್ತಲಿನ ಗ್ರಾಮದ ಸಭ್ಯಗೃಹಸ್ಥರು ಆಗಮಿಸಿದ್ದರು ಮೆ. ಸಾಲೀಮಠ ಸಾಹೇಬರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ವೇಳೆ, ಹಿರೇಕೇರೂರ ತಾಲೂಕ ಮೆ. ಮಾಮಲೇದಾರಸಾಹೇಬರವರೂ ಮೆ| ರಾ| ರಾ| ಶ್ರೀ ಡಿ ಎಲ್ ಬಿ. ಮೆಂಬರ ದೊಡ್ಡ ಅಡಿವೆಪ್ಪಣ್ಣ ಕುಬಸದ, ಮತ್ತು ಟಿ ಎಲ್ ಬಿ. ಪ್ರೆಸಿಡೆಂಟ ನಾಗಪ್ಪಣ್ಣ ಕುಬಸದ ಇವರೂ, ಹಿರೇಕೇರೂರ ಶಾಲಾ ಹೆ| ಮಾ| ರಾದ ಮಿ. ದೀಕ್ಷಿತ ಇವರೂ ಇನ್ನೂ ಕೆಲವು ಸಭ್ಯಗೃಹಸ್ಥರೂ ವಾಚನಾಲಯದ ಮಹತ್ವವನ್ನು ಕುರಿತು, ಹಳ್ಳಿಯ ಜನರ ಮೇಲೆ ಒಳ್ಳೇ ಪರಿಣಾಮವಾಗುವಂತೆ ಭಾಷಣಗಳನ್ನು ಮಾಡಿದರು. ಅದಕ್ಕೆ ಕೆಲ ಸಭ್ಯಗೃಹಸ್ಥರು ಮೂರು-ನಾಲ್ಕು ವರ್ತಮಾನಪತ್ರಗಳನ್ನು ತರಿಸಿಕೊಡುವೆವೆಂದು ವಾಗ್ದಾನ ಮಾಡಿದರು ಮತ್ತು ಇದೇ ಸಭೆಯಲ್ಲಿ ಸದರ ವಾಚನಾಲಯವು ಸುರಕ್ಷಿತವಾಗಿ ನಡೆಯುವಂತೆ ನೂರು (೧೦೦) ರೂಪಾಯಿಗಳನ್ನು ಚಿರಸ್ಥಾಯಿ ಫಂಡು ಕೂಡಿಸಿತು. ಇದು ಇನ್ನೂ ಮುಂದೆ ಪ್ರತಿವರ್ಷ ನಾಲ್ವತ್ತು (೪೦) ರೂಪಾಯಿ ಬಡ್ಡಿ ಬರುವಂತೆ ಬೆಳೆಸುವ ಧ್ಯೇಯವನ್ನು ವಾಚನಾಲಯದ ವ್ಯವಸ್ಥಾಪಕರು ಇಟ್ಟುಕೊಂಡಿರುವರು.

ಈ ಪ್ರಕಾರದ ಇಲ್ಲಿಯ ತರುಣರ ಉತ್ಸಾಹ ನೋಡಿ, ಮೆ| ಸಾಲೀಮಠಸಾಹೇಬರವರು ಅತ್ಯಂತ ಆನಂದಪೂರ್ವಕವಾಗಿ ಸಮಾರೋಪ ಭಾಷಣವನ್ನು ಮಾಡಿದ ನಂತರ ಹಾರತುರಾಯಿಗಳೊಂದಿಗೆ ಸಭೆಯು ವಿಸರ್ಜನೆಯಾಗಿ ಮೆ| ಸಾಲೀಮಠಸಾಹೇಬರವರಿಂದಲೇ ಶ್ರೀ ಬಸವೇಶ್ವರ ವಾಚನಾಲಯವೆಂಬ ಹೆಸರನ್ನು ಇರಿಸಿ ಸದರ ವಾಚನಾಲಯವನ್ನು ಅವರಿಂದಲೇ ತೆರೆಸಲ್ಪಟ್ಟಿತು.

ಈ ಕೆಲಸವನ್ನು ಮೆ| ಸಾಲೀಮಠಸಾಹೇಬರವರು ದೂರದಿಂದ ಬಂದು ತಮ್ಮ ಶ್ರಮವನ್ನು ಲಕ್ಷ್ಯಕ್ಕೆ ತರದೆ ನೆರವೇರಿಸಿದ್ದಕ್ಕಾಗಿ, ಕುಡಪಲಿ ಗ್ರಾಮದ ಸಭ್ಯಗೃಹಸ್ಥರೂ ಮತ್ತು ತರುಣ ಮಂಡಳಿಯವರೂ ಮೆ| ಸಾಲೀಮಠಸಾಹೇಬರವರ ಮತ್ತು ಆಗಮಿಸಿದ ಇತರ ಸಭ್ಯಗೃಹಸ್ಥರ ಉಪಕಾರವನ್ನು ಮರೆಯದೇ ಇರುವರು

ಕಾಂಗ್ರೆಸದ ಸುದ್ದಿಗಳು-

ಕಾಂಗ್ರೆಸದ ಸ್ವಾತಂತ್ರ್ಯದ ಚಳವಳಿಯನ್ನು ಹಿಂದುಸ್ಥಾನದ ತುಂಬ ಮಾಡಲೋಸುಗ ಕಾಂಗ್ರೆಸ ಸಭೆಯು ಪಂಡಿತ ಜವಾಹಿರಲಾಲ ಮತ್ತು ಶ್ರೀ ನೇನಗಪ್ಪನನ್ನು ಪ್ರತಿನಿಧಿಯಾಗಿ ನೇಮಿಸಿದ್ದಾರೆ

ಹಿಂದುಸ್ಥಾನದ ಸ್ವಾತಂತ್ರ್ಯವೇ ತಮ್ಮ ಧ್ಯೇಯವೆಂದು ಇಂಗ್ರೇಜಿ ತಿಂಗಳ ೨೬ನೇ ತಾರೀಖಿನ ದಿವಸ ಪ್ರತಿಯೊಂದು ಹಳ್ಳಿಪಟ್ಟಣದಲ್ಲಿ ಸಭೆಮಾಡಿ, ಜಾಹೀರ ಮಾಡಬೇಕೆಂದು ಗೊತ್ತಾಗಿದೆ

ಕಾಂಗ್ರೆಸದಲ್ಲಿ ಸ್ವಾತಂತ್ರ್ಯ ಠರಾವು ಪಾಸಾದ ಕೂಡಲೆ ಎಲ್ಲ ಮಾರ್ಕೆಟ ಪೇಟೆಯಲ್ಲಿ ಭಯ ಹುಟ್ಟಿ, ಶೇರುಗಳ ಧಾರಣೆಯು ಸುಮಾರಕ್ಕೆ ಎದುರಾಗಿ ಬಿದ್ದಿವೆ

ಕಾಂಗ್ರೆಸದ ಮಂಡಪದಲ್ಲಿ ಕಾಂಗ್ರೆಸದ ಸುದ್ದಿಗಳಿಂದ ಕಾರಣದಿಂದ ಪಕ್ಕಲಕ್ಷ ಶಬ್ದಗಳು ಪರಸ್ಥಳ ಮತ್ತು ಪರದೇಶಕ್ಕೆ ಕಳಿಸಲ್ಪಟ್ಟವು

ಪುಣೆ ಮತ್ತು ಮುಂಬಯಿಯ ಕೂಲಿಕಾರರು ಸಭೆಮಾಡಿ ಸ್ವಾತಂತ್ರ್ಯದ ಠರಾವನ್ನು ಪುಷ್ಟೀಕರಿಸಿ ಕೆಂಪು ನಿಶಾನೆ ಹಚ್ಚಿದರು

ನೋಟೀಸಿನ ಉತ್ತರಾ

ಕರಿಗೌಡಾ ತಂದಿ ನಾಗನಗೌಡಾ ಪಾಟೀಲ ಸಾ|| ಗೋನ್ಹಾಳ ಪೋಸ್ಟ ಶಿಗ್ಗಾವಿ ಇತನಿಗೆ-

ಕೆಳಗೆ ಸಹಿ ಮಾಡುವ ದ್ಯಾಮವ್ವಾ ಕೋಂ ಕರಿಗೌಡಾ ಪಾಟೀಲ ಸಾ|| ಗೋನ್ಹಾಳ ಇತನಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ಧಾರವಾಡ ವಿಜಯಪತ್ರದಲ್ಲಿ ನನ್ನ ಹೆಸರಿನಿಂದ ತಾ|| ೨೧-೧೨-೧೯೨೯ನೇ ಇಸ್ವಿ ದಿವಸ ಕೊಟ್ಟ ನೋಟೀಸು ಮುಟ್ಟಿತು ಅದರಲ್ಲಿ ಬರೇ ಯಾವತ್ತು ಮಜಕೂರು ಪೂರಾ ಸುಳ್ಳು ಇರುತ್ತದೆ ನೀವು ಫಂಡಗೆದಾರ ವ ವತನದಾರ ಗೌಡರಿದ್ದು ಮತ್ತು ನನ್ನ ತವರ ಮನೆಯವರು ಸಹ ದೊಡ್ಡ ಮನೆತನದವರು ಇರುತ್ತಾರೆ ಹೀಗೆ ಎರಡೂ ಮನೆತನಗಳು ದೊಡ್ಡವೂ ಮತ್ತು ಅಬ್ರುದಾರ ಇದ್ದು ನೀವು ನನ್ನ ಹಾಗು ನನ್ನ ತವರ ಮನೆಯ ಹಾಗು ಸಹ ನಿಮ್ಮ ಮನೆತನದ ಬೇಅಬ್ರು ಆಗುವಂಥ ಮಜಕೂರು ನೋಟೀಸಿನಲ್ಲಿ ನಮೂದ ಮಾಡಿದ್ದು ಬಹಳೇ ಅವಿಚಾರದ್ದು ಆಗಿರುತ್ತದೆ ನಾನು ನಿಮ್ಮ ಮೊದಲನೆಯ ಹೆಂಡತಿ ಇರುತ್ತೇನೆ ನನ್ನ ತರುವಾಯ ನೀವು ಎರಡನೇಯವಳನ್ನು ಲಗ್ನ ಮಾಡಿಕೊಂಡಿ ಚಿಕ್ಕ ಹೆಂಡತಿ ಮತ್ತು ನಿಮ್ಮ ಸೋದರತ್ತೆಯ ಮಾತು ಕೇಳಿ ನೀವು ನನಗೆ ಅನೇಕ ತರದಿಂದ ತ್ರಾಸ ಕೊಟ್ಟು ನನ್ನ ತಂದಿ ನನಗೆ ಸ್ತ್ರೀಧನರೂಪವಾಗಿ ಕೊಟ್ಟ ಯಾವತ್ತು ದಾಗೀನೆಗಳನ್ನು ಕಸಕೊಂಡು ಉಟ್ಟ ಸೀರೆಯ ಮೇಲೆ ಮನೆ ಬಿಟ್ಟು ಹೊರಗೆ ಹಾಕಿದರಿ ಆ ವೇಳೆಗೆ ಎರಡು ವರ್ಷವಾಯಿತು ಅಲ್ಲಿಂದ ನನ್ನನ್ನು ಕರಕೊಂಡು ಹೋಗಲಿಕ್ಕೆ ಶ್ರೇಷ್ಠರಾದ ಮಧ್ಯಸ್ಥರಾಕಿ ಹೇಳಿಕಳಿಸಿದರೂ ನೀವು ಕರಕೊಂಡು ಹೋಗಲಿಲ್ಲ ಕಡೆಗೆ ನಮ್ಮ ತಂದೆಯು ನನಗೆ ಕೊಟ್ಟ ಸ್ತ್ರೀಧನ ದಾಗೀನೆಗಳನ್ನು ಹಾಗು ನನ್ನ ಉಪಜೀವನಕ್ಕೆ ಜಮೀನು ಕೊಡಿರೆಂದು ಕೇಳಿದಾಗ ಈ ಥರತೆ ನೋಟೀಸು ಕೊಟ್ಟಿರುತ್ತೀರಿ ನನ್ನ ದಾಗೀನುಗಳಂದರೆ-

೧	ಬಂಗಾರ ಬಳಿಜೋಡು ಕಿಮ್ಮತ್ತು		೧೨೦	ರೂ||
೨	ಗೆಜ್ಜೆಟೀಕಿ ೧	,,	೩೦೦	,,
೩	ಬುಗಡಿಜೋಡು	,,	೧೦೦	,,
೪	ನತ್ತು ೧	,,	೧೨೫	,,
೫	ಗುಂಡಿನಟೀಕಿ ೧	,,	೬೦	,,
೬	ಪದಕದಸರಾ ೧	,,	೬೦	,,
೭	ಏಕಾವಳಿಸರಾ ೧	,,	೫೦	,,
೮	ನೆಲ್ಲಿಕಾಯಿಸರಾ ೧	,,	೨೦೦	,,
೯	ತೋಡ ೨	,,	೮೦	,,

೧೦೦೦ ಒಟ್ಟು

ಸಲ್ಲದಿರು ವ್ಯಲ್ಲಪ್ಪಶೆಟ್ಟಿಗಿಂತ ಅಬ್ಬಿಗೇರಿಯ ಮಲ್ಲಪ್ಪಶೆಟ್ಟಿಯವರು ವೀರ ಪಾಲಿಗೆ ಮೇಲ್ಪಂಗತಿಯವನು. ಹಟ್ಟಿ ವಿನೋದಗಾರನು.

ಇನ್ನಿತರ ಪಾತ್ರಗಳಲ್ಲಿ ಸಾಹೇಬನ್ನವರು ಬಸ್ಯಾ, ಲಿಂಗಪ್ಪ ಸಾಬೇದಾರರೂ, ಪ್ರತಿನಿಧಿಗಳೂ ಪಟಿಕಬಂದವರಾದ್ದರಿಂದ ಅವರ ಪಾತ್ರಗಳು ಅಷ್ಟೊಂದು ಸರಸವಾಗಲಿಲ್ಲ. ಠಕ್ಕೆಯನು ನೆಟ್ಟನೆ ವೀರಪ್ಪನವರಿಗೆ ಪೆನ್ಶನ್ ಕೊಡುವದು ಒಳ್ಳೇದು.

ವಸ್ತ್ರ-ಪ್ರಾವರಣಗಳಲ್ಲಿ ಎಂದೂ ಕಾಪನೆಯವರು ಸರಸವಾಗಸ್ತ್ಯಧರು. ಪಡದೆಗಳಲ್ಲಿಯೂ ಹೊಸದಿದ್ದಂತಿಲ್ಲ. ಇಬ್ಬರೂ ಒಬ್ಬರೇ ಭಾವಣಿಯ ಪಡದೆಯನ್ನು ಮಾಡಿಸಿರುವದಿಲ್ಲ. ಕಿತ್ತೂರ ಕಿಲ್ಲೆಯ ಮಹಾದ್ವಾರದ ಕೇರಿಯಿಂದ ನಟವರ್ಯರು ಒಂದು ಹೆಜ್ಜೆ ಮುಂದಿಟ್ಟಿರುವರು. ತಾತ್ಪರ್ಯವೇನಂದರೆ ಕರ್ನಾಟಕ ಸ್ತ್ರೀರತ್ನವು ನಾಟ್ಯಾಗ ಪ್ರಯೋಗಗಳಲ್ಲಿ ಯಶವನ್ನು ಪಡೆಯುವದೆಂದು ಹೇಳಲು ಅಭ್ಯಂತರವಿಲ್ಲ. ಸಮಯಾನುಸಾರ ಅವಾಂತರ ಸೂಚನೆಗಳನ್ನು ಕೊಡುವೆನು.

ನೋಟೀಸು

ಧಾರವಾಡ ತಾರೀಖು ೫-೧-೪೦

ಮಲ್ಲಪ್ಪಾ ಕೋಂ ವೆಂಕಪ್ಪಾ ಹರಸನಹಳ್ಳಿ ಸಾ|| ಗದಗ ಇವರಿಗೆ- (ಕವಡನವರ ಮನಿಯಲ್ಲಿ)

ನಾನು ಯಲ್ಲಪ್ಪಾ ತಿಪ್ಪಣ್ಣಾ ಹರಸನಹಳ್ಳಿ ಸಾಕೀನ ಉಳ್ಳೇಗಡ್ಡಿ ಓಣಿ ಈ ನೋಟೀಸಿನ ದ್ವಾರಾ ತಿಳಿಸುವದೇನಂದರೆ ಉಳ್ಳೇಗಡ್ಡಿ ಓಣಿಯಲ್ಲಿರುವ ಮು. ಮು ನಂಬರ ೪೧೫೫೫ನೇ ಮನಿ ಅರ್ಧಮನಿ ೬೦ ರೂಪಾಯಕ್ಕೆ ತಾ|| ೨೩ ೯-೩೯ ನೆ ದಿವಸ ಖರೀದಿ ಕೊಟ್ಟು ಖರೀದಿ ಪತ್ರಾ ನೋಂದಾಯಿಸಿ ಕೊಡದೆ ಹಾಗೆ ಹೋಗಿ ಹೋದ ನೋಂದಾಯಿಸಿ ಕೊಡೋದಕ್ಕೆ ಅನೇಕಸಾರೆ ಕೇಳಿದಾಗ್ಯೂ ನೋಂದಾಯಿಸಿ ಕೊಡಲಿಲ್ಲಾ. ಈ ಬಗ್ಗೆ ನಾನು ಸದರ ದಸ್ತೈವಜ ನೋಂದಾಯಿಸಿ ಕೊಡಬೇಕಂತಾ ಧಾರವಾಡ ಸ|| ರಜಿಸ್ಟರ ಕಚೇರಿಯಲ್ಲಿ ಅರ್ಜಿ ಮಾಡಲು ಸದರ ದಸ್ತೈವಜು ನೋಂದಾಯಿಸಿರುತ್ತಾರೆ. ತಾ|| ೧೬-೧೨-೩೯ ಖರಿ ದಿವಸದಲ್ಲಿ ಕಂಡ ರೂ ೬೦ ಈ ನೋಟೀಸ ಮುಟ್ಟಿದ ೧೫ ದಿವಸದಲ್ಲಿ ಒಂದು ಈಗ ನಾನು ಈ ಸವ್ಯಂದಿ ಖರ್ಚು ಮಾಡಿದ ೩೯ ರೂಪಾಯಿಗಳು ವಜಾ ಹೋಗಲಾಗಿ ಬಾಕಿ ಉಳಿದ ೩೧ ರೂ ತಗೆದು ಪಾವತಿಕೊಟ್ಟು ಹೋಗಬೇಕು ಆ ಪ್ರಕಾರ ಬಾರದೆ ಇದ್ರೆ ನಿಮ್ಮ ರೂಪಾಯಿ ಸ|| ರಜಿಸ್ಟರ ಕಚೇರಿಯಲ್ಲಿ ಹಾಜರ ಮಾಡಲೇನ ತಿಳಿಯುವದು

ಸಹಿ ಯಲ್ಲಪ್ಪಾ ತಿಪ್ಪಣ್ಣಾ ಹರಸನಹಳ್ಳಿ

ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ ಅಬ್ಬಿಗೇರಿ
ಸ್ವಲ್ಪದಿವಸಗಳೊಗಾಗಿಯೇ, ಸ್ವಲ್ಪದಿವಸಗಳ ಸಲುವಾಗಿ ಧಾರವಾಡಕ್ಕೆ

ವೀರರಾಣಿ ಕಿತ್ತೂರ ಚೆನ್ನಮ್ಮ ನು ಬರುವಳು

ಬಂದು ತನ್ನ ಅಪ್ರತಿಮ ವೀರತನವನ್ನು ತೋರಿಸುವಳು

ತೀವ್ರವೇ ಜನ್ಮಭೂಮಿಯಾದ ಕಿತ್ತೂರ, ಬೈಲಹೊಂಗಲ, ಬೆಳಗಾವಿಗಳ ಕಡೆಗೆ ತೆರಳುವಳು.

ಎಂದು, ಎಲ್ಲಿಗೆ, ಯಾವಾಗ, ಎಷ್ಟುದಿವಸ, ಯಾವ ತಾರೀಖಿಗೆ ಬರುವಳೆಂಬುದನ್ನು

ಮೊದಲೇ ಲಕ್ಷಗೊಟ್ಟು ನೋಡುತ್ತಿರುವದು ಒಳ್ಳೇದು.

ಹಿಂದಿನಡೆಯಲ್ಲಿ ಮುಂದಾಗಿ ತಿಳಿಸಲಿಕ್ಕೆ ಬೇಕೆಂಬ ಅನಿವಾರ ಹಾರೈಕೆಯಿಂದಾತಿರುವ

ರಸಿಕಾಗ್ರಣಿಗಳ ಡಿಯಾಳದ

ಮ್ಯಾನೇಜರ

ಕ. ಸಾ. ಸೇ. ಸಂ. ನಾ. ಮಂ. ಅಬ್ಬಿಗೇರಿ.

ಜಾಹೀರ ನೋಟೀಸು

ಕೆಳಗೆ ಸಹಿ ಮಾಡುವವರು ನೋಟೀಸು ಕೊಡುವದೇನಂದರೆ ನಮ್ಮ ಮನಿಯು ಬಾಡಗಿ ಕೊಡತಕ್ಕದ್ದು ಅದೆ ಮನಿಯಲ್ಲಿ ಇಂತಕ್ಕ ಸೋಯಿ ಇದ್ದು ಹವಾಸೀರ ಇರುತ್ತದೆ. ಭಾವಿ ನಳಾ ಪಾಯಖಾನೆ ಹಿತ್ತಲದಲ್ಲಿ ದನಕರು ಕಟ್ಟಿಕೊಳ್ಳಲಿಕ್ಕೆ ಛಪ್ಪರ ಇರುತ್ತದ. ಮಳೆಗಾಲದಲ್ಲಿ ಕಟಗಿ ವಗೈರೆ ಇಟ್ಟುಕೊಳ್ಳಲಿಕ್ಕೆ ಬರುವಂತೆ ಅದೆ. ಬಾಡಿಗೆ ಸಮ್ಮಂಧೀ ಸಮಕ್ಷಮಾ ಕರ್ನಾಟಕ ಪ್ರಿಂಟಿಂಗ ವರ್ಕ್ಸ ಲೈನಬಜಾರ ಹತ್ತರ ಇರುವ ಛಾಪಖಾನೆಯಲ್ಲಿ ಬಂದು ಭೆಟ್ಟಿ ಆಗಬೇಕು.

ತಾ|| ೨೫-೧೨-೧೯೩೯

ತಿರುಮಲರಾವ ಕೃಷ್ಣ ಜೋಶಿ

ಜಾಹೀರ ನೋಟೀಸು.

ಅದ್ವಿತೀಯ ಮತ್ತು ಸರ್ವ ರೋಗ ನಿವಾರಕವಾದ "ಅಮೃತ ಪ್ರಭಾ" ವೆಂಬ ದಿವ್ಯೌಷಧ, "ಕೇಶಪ್ರಭಾ" ವೆಂಬ ಕೂದಲಿಗೆ ಹಚ್ಚುವ ಸುವಾಸನೆ ಎಣ್ಣೆ, ಉತ್ತಮವಾದ ನೀಲಗಿರಿ ಚಹಾ, ಸ್ಲೇಟ್ ಪೆನ್ಸಿಲುಗಳು, ಮತ್ತು ಇತರ ಸಾಮಾನುಗಳನ್ನು ಮಾರಲಿಕ್ಕೆ ಧಾರವಾಡ, ಹುಬ್ಬಳ್ಳಿ, ಬಿಜಾಪುರ, ಬಾಗಲಕೋಟೆ, ಹೊಸಪೇಟೆ ಬಳ್ಳಾರಿ, ಇತರ ಸ್ಥಳಗಳಲ್ಲಿ ಕಮಿಶನ ಮೇಲೆ ಕೆಲಸಮಾಡಲಿಕ್ಕೆ ಸಬ್ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ದಿ. ನೆ ಮಂಡ್ಲಿ ಕಂಪನಿ ಲಿಮಿಟೆಡ್

೧೬೨೨ ಕಾಟನ ಮಾರ್ಕೆಟ ರೋಡ,

ಗದಗ ಸಿಟಿ.

ಗಶೀಷ ಸವಲತ್ತು

ದಿ ಧಾರವಾಡ ಮೋಟಾರ ಡ್ರೈವ್ಹಿಂಗ

ಅ್ಯಾಂಡ ಮೆಕ್ಯಾನಿಕಲ್

ಟ್ರೇನಿಂಗ ಸ್ಕೂಲ.

ನಮ್ಮ ಸ್ಕೂಲಿನಲ್ಲಿ ಜಾನೇವಾರಿ ೩೧ನೇ ತಾರೀಖಿನವರೆಗೆ ಮಾತ್ರ ಫಕ್ತ ೩೦ ವಿದ್ಯಾರ್ಥಿಗಳ ಪ್ರವೇಶ ಸಿಗುವದು. ಅದ್ದರಿಂದ ಬೇಗನೇ ಮೋಟಾರ ಡ್ರೈವ್ಹಿಂಗ ವ ಮೆಕ್ಯಾನಿಕಲ್ ಶಿಕ್ಷಣ ಪಡೆಯಲಿಚ್ಛಿಸುವವರು ನಮ್ಮ ಮಾಹಿತಿ ಪತ್ರಕ ತರಿಸಿಕೊಂಡು ಅದರೊಳಗಿನ ನಿಯಮಕ್ಕನುಸರಿಸಿ ಹೆಸರು ದಾಖಲ ಮಾಡಿಸಿಕೊಳಬೇಕು.

ತಮ್ಮ ಹಿತಚಿಂತಕ.

ಎಂ. ಎಸ್. ಇಟಗಿ.

ಲೈನಬಝಾರ ಧಾರವಾಡ.

ನೋಟೀಸ ದರಗಳು.

ಸಿಂಗಲ ಕಾಲಮಿನ ಪಕ್ತಿ ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ. ಡಬಲ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಲಿಂಗಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. ೫೪

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಶ್ರೀ [illegible] ಬಾಳಾಚಾರ್ಯ ಸಕ್ಕರಿ.

ವರ್ಷ ೧೧) ಧಾರವಾಡ ಸೋಮವಾರ ತಾರೀಖು ೬ ನೇ ಜನವರಿ ೧೯೩೦ (ಸಂಚಿಕೆ ೬

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ಪತ್ತೀ ಮೇಲೆ ಸೋವಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಗಳ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು [illegible] ದಾಗೀನೆಗಳ ಮೇಲೆ [illegible] ಕೊಟ್ಟಿರೂ [illegible] ಪಟ್ಟಿ [illegible] ಒಪ್ಪಿಯಲ್ಲಿ [illegible] ನಲ್ಲಿ ದಾಗೀನೆ [illegible] ಬಡ್ಡಿಯಿಂದ [illegible] ಎರಡು [illegible] ಕೊಳ್ಳಬೇಕು.

ದಿಕ್ಕಿನ [illegible] ಕರಾರ ಮಾಡಿ [illegible] ಹೀಗೆ ಬ್ಯಾಂಕಿನಲ್ಲಿ [illegible] ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— [illegible] ನಮ್ಮಲ್ಲಿ [illegible] ಕಚೇರಿಯಲ್ಲಿ [illegible] ಸಿಗುವವು.

ಕೃಷ್ಣರಾವ ವೆಂಕಟರಾವ ಧಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ

ದಿ ಧಾರವಾಡ ಅರ್ಬನ ಕೊ ಆಪರೇಟಿವ್ಹ ಬ್ಯಾಂಕ ಲಿಮಿಟಿಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಳಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದ ರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ „	೭-೦-೦
೪ „	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೫-೧-೩೦ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯಾ
ಶ್ರೀ ವಸುಧಾತಲೆ ನಲಿಸಲಿ ಸುಲಕ್ಷಣವತೀ ತೆಗೆ ॥
ದೇ " ವಿಜಯಂ " ಶ್ರೀಕಕರುಣಾ :
ನಾ ನಿಹಿತಂಗೆ ವಿವರಿಸಿನಲಿ ಕೃತು ಶಾಜಾ ॥

ಕರ್ನಾಟಕದ ಮರಾಠಿಗರು ಬುದ್ಧಿಗಲಿಯುವಂಥ ಮಾತು.

ಅಸ್ಪೃಶ್ಯರ ಸಭೆಗಾಗಿ ಧಾರವಾಡಕ್ಕೆ ಬಂದಿದ್ದ ಬ್ಯಾರಿಸ್ಟರ ಅಂಬೇಡಕರರು ಇಲ್ಲಿಯ ಕೆಲಸವಾದ ಬಳಿಕ ಹುಬ್ಬಳ್ಳಿಗೆ ಹೋದರು. ಅಲ್ಲಿ ಇವರಿಗೆ ಮರಾಠಿಯಲ್ಲಿ ಭಾಷಣ ಮಾಡಬೇಕಾಯಿತು. ಅದರ ತರ್ಜುಮೆಯನ್ನು ಕನ್ನಡದಲ್ಲಿ ಮಾಡಿ, ನೆರೆದ ಜನರಿಗೆ ಹೇಳಬೇಕಾಯಿತು. ಮೂಲ ಉಕ್ತಿಯ ಭಾಷಾಂತರ ಮಾಡುವಾಗ ಮೂಲದೊಳಗಿನ ಸ್ಫೂರ್ತಿಯು ಕಡಿಮೆಯಾಗುವದು ಸಹಜವು. ಒಮ್ಮೊಮ್ಮೆ ನೀರಸತ್ವ ಮತ್ತು ನೀರಸವಾಗುವದು. ಬ್ಯಾರಿಸ್ಟರರಿಗೆ ಇದರ ಪೂರಾ ಅನುಭವ ಬಂತು. ಅದ್ದರಿಂದ ಇವರು ತಾವು ಇನ್ನೊಮ್ಮೆ ಧಾರವಾಡ ಹುಬ್ಬಳ್ಳಿಗೆ ಬರುವಷ್ಟರಲ್ಲಿ ಕನ್ನಡ ಕಲಿತು, ಕನ್ನಡದಲ್ಲಿಯೇ ಭಾಷಣಮಾಡುವಂತೆ ಪ್ರೇಕ್ಷಕರಿಗೆ ವಚನ ಕೊಟ್ಟರು. ಬ್ಯಾರಿಸ್ಟರ ಅಂಬೇಡಕರರು ಅಂತ್ಯಜರಾದರೂ, ಅವರ ಯೋಗ್ಯತೆಯು ಗುಣಾಃ ಪೂಜಾಸ್ಥಾನಂ ಗುಣಿಷು ನಚಲಿಂಗಂ ನಚವಯಃ ಎಂಬಂತೇ ಇರುತ್ತದೆಂದು ಈ ಮೊದಲು ಬರೆದಿದ್ದೇವೆ.

ಕರ್ನಾಟಕದಲ್ಲಿ ನೂರಾರು ವರ್ಷಗಳಿಂದ ಬೀಡು ಮಾಡಿಕೊಂಡು ಸಾವಿರಾರು ಜನ ಮರಾಠಿಗರು ವಾಸವಾಗಿದ್ದಾರೆ. ರಾಜ್ಯಕರ್ತರೆಂದು ಬಂದವರು ಇಲ್ಲಿಯೇ ಧ್ವಜ ಹೂಡಿದರು. ಆದರೆ ಅವರಲ್ಲಿ ಬಹು ಜನರಿಗೆ ಕನ್ನಡ ಅಭಿಮಾನವಿಲ್ಲ; ಅಶಿಕ್ಷಿತರ ವಿಚಾರವಿಲ್ಲ; ಸುಶಿಕ್ಷಿತರೆಂಬುವರು ಹಳೆಗನ್ನಡನಾಡು ಮತ್ತು ಕನ್ನಡ ನುಡಿಯನ್ನು ತಿರಸ್ಕಾರದಿಂದ ನೋಡುವರು, ಉಂಡು ಮನೆಯ ಗಳ ಎಣಿಸುವಂತೆ !! ಮರಾಠಿಗರು ಕನ್ನಡದ ನೆಲೆಯಿಂದ ಅಭಿಮಾನವುಳ್ಳವರಾಗಿದ್ದರೆ ಬೆಳಗಾವಿಯಲ್ಲಿ ಕನ್ನಡ ಮರಾಠಿಯ ವಾದವೇ ಏಳುತ್ತಿದ್ದಿಲ್ಲ, ಪುಣೆಯಿಂದ ಬೆಳಗಾವಿಗೆ ಬರುತ್ತಿದ್ದ ಮರಾಠಿಗರು ನ್ಯಾಯವನ್ನು ಬಯಸುವಂತೆ ತಮ್ಮ ಮೇಲೂ ಕರೇ ನಿಶಾನೆಯು ಅಷ್ಟಾಗಿಯೂ ಎಲ್ಲಿ ಹಿಡಿಯಲ್ಪಡುವದೆಂಬ ಭಯಪಡತಕ್ಕ ಕಾರಣವೇ ಇದ್ದಿಲ್ಲ.

ಬೆಳಗಾವಿಯ ಸಭೆಯಿಂದ ಮರಾಠಿಗರಿನ್ನೂ ಬುದ್ಧಿಗಲಿತಿಲ್ಲ. ಕನ್ನಡ ಕಲಿಯಬೇಕೆಂಬ ಅಪೇಕ್ಷೆ ನಾತಲಿಲ್ಲ. ಒಬ್ಬರಾದರೂ ಅದರ ಬಾಲಬೋಧೆಯನ್ನು ಹಿಡಿದಿದ್ದರೆ ಇಷ್ಟೊತ್ತಿಗೆ ಕರ್ನಾಟಕ ಏಕೀಕರಣವಾಯಿತೆಂದರೆ. ಇವರು ಇಂದು ಅವಶ್ಯಕರ್ತವ್ಯವೆಂದು ಹೊಟ್ಟೆಯ ಚಿಂತೆಯೆಂದು ತನ್ನ ಡನ್ನು ಕಲಿಯೇ ಕಲಿಯುವರು. ಆಗ ಹಂಗಿಗೆ ಕೊಡ್ಡದನ್ನು ತಪ್ಪಿಸಿಕೊಳ್ಳಲು ಕನ್ನಡ ಕಲಿತು, ಕನ್ನಡದಲ್ಲಿ ಬರೆದು ಕರ್ನಾಟಕದ ಅಭಿಮಾನವನ್ನೇಕೆ ಬೆಳೆಸಬಾರದು. ಕೋರ್ಟು ಕಚೇರಿಯಲ್ಲಿ ಕನ್ನಡ ಮಾತಾಡುವದು ಜೀವನದ ಮಾರ್ಗವಾಗಿರುವಂತೆ ಸಾರ್ವಜನಿಕ ಸಭೆಗಳಲ್ಲಿ ಕನ್ನಡದಲ್ಲಿ ಮಾತಾಡುವದು, ವರ್ತಮಾನ ಪತ್ರಗಳಿಗೆ ಲೇಖ ಬರೆಯುವದು ದೇಶಸೇವೆಯೆಂದೇಕೆ ತಿಳಿಯಬಾರದು? ಬ್ಯಾರಿಸ್ಟರ ಅಂಬೇಡಕರರಂಥ ಸಿಕ್ಕಷ್ಟು ಕೆಲಸಗಳಲ್ಲಿ ಜನ್ಮವೆತ್ತಿದವರು ಇನ್ನೊಮ್ಮೆ ಧಾರವಾಡ ಹುಬ್ಬಳ್ಳಿಗೆ ಬಂದಾಗ ಕನ್ನಡದಲ್ಲಿಯೇ ಮಾತಾಡುವೆನೆಂದು ವಾಗ್ದತ್ತರಾದದ್ದನ್ನು ಕೇಳಿ, ಇವರಿಗಿಂತ ಶ್ರೇಷ್ಠರು ಶ್ರೇಷ್ಠರಾದಂಥವರಾದ ನಮ್ಮ ಪ್ರಾಂತದ ಮರಾಠಿಗರು ವಿಚಾರ ಮಾಡಿ, ಆ ಪ್ರಕಾರ ಆಚರಣದಲ್ಲಿ ತರುವದು ಧರ್ಮವೇ ಆಗಿರುತ್ತದೆ.

ತರುಣ ಮತ್ತು ಪ್ರಬುದ್ಧರಾದ ಮರಾಠಿಗರು ಪುಣೆಯಲ್ಲಿ ಅಥವಾ ಯಾವದೊಂದು ಕನ್ನಡ ಸಂಘ ಸಂಸ್ಥೆಗಳಲ್ಲಿ ಕನ್ನಡದ ಅಭ್ಯಾಸ ಮಾಡಬೇಕು. ತಮ್ಮಂತೆ ತಮ್ಮ ಮಕ್ಕಳಿಗೆ ಕನ್ನಡದ ಅಭ್ಯಾಸವು ಚಿಕ್ಕಂದಿನಿಂದಾಗುವಂತೆ ತಮ್ಮ ಹುಡುಗ ಹುಡಿಗೆಯರನ್ನು ಮೊದಲಿನಿಂದ ಕನ್ನಡ ಶಾಲೆಗೆ ಹಾಕಬೇಕು. ಪುಣೆ ಮುಂಬಯಿಯಲ್ಲಿ ವಾಸವಾಗಿರುವ ಕನ್ನಡಿಗರು ತಮ್ಮ ಮಕ್ಕಳನ್ನು ಮರಾಠಿ ಶಾಲೆಗೇ ಹಾಕುವದಿಲ್ಲವೇ?

ಮೈಸೂರು ಬೆಂಗಳೂರಲ್ಲಿಯ ಮರಾಠಿಗರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಹಾಕುವದಿಲ್ಲ ಅಷ್ಟೇ ಕನ್ನಡವಲ್ಲ; ಅಷ್ಟು ಮರಾಠಿಯಲ್ಲ; ತ್ರಿಶಂಕುವಿನಂತೆ ಉತ್ತರ ಕರ್ನಾಟದಲ್ಲಿರುವ ಮರಾಠಿಗರು ಈ ಬಗ್ಗೆ ವಿಚಾರ ಮಾಡುವರೆಂದು ಭಾವಿಸುತ್ತೇವೆ.

ಇಟಲಿ ದೇಶದ ಹೊಸ ಚಳುವಳಿಯಾಯಿತು ಸಾಮ್ರಾಜ್ಯವಾದ ಮುಸ್ಸೋಲಿನಿಯು ಇಟಲಿಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವದೇ ತಮ್ಮ ಧ್ಯೇಯವೆಂದು ಜಾಹೀರ ಮಾಡಿದ್ದಾರೆ.

ವರ್ಣ ಸಂಕರದ ಪರಿಷತ್ತು.

—ೃ[]'ೂ)[]ೃ —

ಲಾಹೋರದಲ್ಲಿ ನೆರೆದ ಹಲವು ಪರಿಷತ್ತುಗಳಲ್ಲಿ ವರ್ಣಸಂಕರದ ಜಾತ ಪಾತ ತಡೆ ಪರಿಷತ್ತು. ಕಲಕತ್ತೆಯ ಸುಪ್ರಸಿದ್ಧ ಗೃಹಸ್ಥರಾದ ಶ್ರೀ. ರಾಮಾನಂದ ಚಟರ್ಜಿಯವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಾದ ಭಾಷಣಗಳ ಸಾರಾಂಶವು.

ಸ- ಪಿ ಸಿ ರಾಯ

ಅಸ್ಪೃಶ್ಯವು ಹಿಂದೂ ಸಮಾಜದಲ್ಲಿ ಕಲ ನಾಗಿದೆ. ಇದರ ಮೂಲೋತ್ಪಾದನ ಮಾಡಲೇಬೇಕು ಚಾತುರ್ವರ್ಣಕ್ಕೆ ಮಣ್ಣು ಕೊಡಬೇಕದ್ದು.

ಹುವಿಲಾಲ ಕಾಲೀದಾ-

ವರ್ಣವ್ಯವಸ್ಥೆ ಮತ್ತು ಜಾತಿಭೇದವು ಹಿಂದೂ ಸಂಘಟನ ಶುದ್ಧಿ ಮತ್ತು ಅಸ್ಪೃಶ್ಯೋದ್ಧಾರದ ದಾರಿಯಲ್ಲಿ ಹೆಬ್ಬಂಡೆಯಂತೆ ಅಡ್ಡ ಬಿದ್ದಿರುತ್ತವೆ.

ಡಾಕ್ಟರ ದತ್ತ-

ವಿದ್ಯಮಾನ ಜಾತಿಭೇದವನ್ನು ನಷ್ಟ ಮಾಡಿ ಲೋಕರು ಹಾಗೂ ಸಮಾಜದ ಉನ್ನತಿಗಾಗಿ ಪ್ರಯತ್ನ ಮಾಡುವ ಎಲ್ಲ ಸಂಸ್ಥೆಗಳು ಮುಂದೆ ಬರಬೇಕು

ಡಾಕ್ಟರ ಪ-ನೀಸ-

ಅವಿವಾಹಿತ ತರುಣ ತರುಣಿಯರು ಮದುವೆಯ ವೇಳೆಯಲ್ಲಿ ಜಾತಿಯನ್ನು ಎತ್ತಿ ಲಕ್ಷಿಸಬಾರದು. ಇದಕ್ಕೆ ಶ್ರೀಮತಿ ನೈನಾದೇವಿಯು ಅನುಮೋದನ ಕೊಟ್ಟಳು

ಪಂಡಿತ ನೋತಿಲಾಲ-

ನನಗೆ ಈಗ ೯ ವರ್ಷ ಕಳೆದ ೩೫ ವರ್ಷಗಳಿಂದ ನಾನು ಜಾತಿಭೇದವನ್ನು ಬಿಟ್ಟುಬಿಟ್ಟಿದ್ದೇನೆ ಹಿಂದುಸ್ಥಾನದಲ್ಲಿ ಸಾಮಾಜಿಕ ಸುಧಾರಣೆಯು ಹೇಗೆ ಪ್ರಗತಿ ಹೊಂದುವದೆಂದು ನನಗೆ ಕೆಲವರು ಪ್ರಶ್ನ ಮಾಡಿದರು. ಮಿಶ್ರವಿವಾಹವೊಂದೇ ಉಪಾಯವೆಂದು ಹೇಳಿದ್ದೇನೆ.

ಠರಾವು-

ಜಾತಿ ಉಪಜಾತಿ; ಜಾತಿ ಪಂಜಾತಿಗಳ ನಡುವೆ ಜರಗುವ ಲಗ್ನಗಳು ಕಾಯದೆಯಿಂದ ಮಾನ್ಯವಾಗುವಂತೆ ಅಸೆಂಬ್ಲಿಯಲ್ಲಿ ಬಿಲ್ಲ ತಂದಿರುವ ನಾ ಹರಿಸಿಂಗ ಗೌ, ರಾಯಸಾಹೇಬ ಹರಿವಿಲಾಸ ಶಾರದಾ, ಮಿಸರ್ಸ ಜಯಕರ ಕೇಳಕರ ಮುಂತಾದವರ ಬಿಲ್ಲನ್ನು ಪಾಸು ಮಾಡಬೇಕೆಂದು ಸರಕಾರವನ್ನು ಬಲವಂತದಿಂದ ಕನ್ಯಾಶಾಲೆಯ ವಿದ್ಯಾರ್ಥಿನಿಯರು ರಾಷ್ಟ್ರಗೀತವನ್ನು ಹಾಡಿದ ಬಳಿಕ ಸಭೆಯು ವಿಸರ್ಜನೆ ಯಾಯಿತು.

——

ಕರ್ನಾಟಕ ಸ್ತ್ರೀರತ್ನ

ಅಥವಾ

ಕಿತ್ತೂರ ಚನ್ನಮ್ಮ.

-(೦)—

(ಲೇಖಕ- ಶಾಂತಲೆಯ ಸುತನಂದನ)

ಇತ್ತಿತ್ತಲಾಗಿ ಕನ್ನಡ ರಂಗಭೂಮಿಯು ಅಥವಾ ಕನ್ನಡ ನಟ್ಟಿಗರು ಮುದ್ರಿತ ಕರ್ನಾಟಕದ ಐತಿಹಾಸಿಕ ಪ್ರಸಂಗಗಳನ್ನು ಕನ್ನಡಿಗರ ಮುಂದಿಟ್ಟು ಕನ್ನಡಿಗರ ಸ್ವದೇಶಾಭಿಮಾನವನ್ನು ಹೆಚ್ಚಿಸುವ ಸ್ತುತ್ಯ ಉದ್ಯೋಗವನ್ನು ಕೈಕೊಂಡದ್ದು ಕನ್ನಡ ನಾಟಕ [illegible] ಗೆ ಭೂಷಣಾಸ್ಪದವಾದ್ದು. ಈ ಪ್ರಸಂಗಕ್ಕೆ ಮುಂದೆ ಬಂದವರಲ್ಲಿ ಮೊದಲನೆಯವರೆಂದರೆ ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ ಅಬ್ಬಿಗೇರಿಯವರಾಗಿದ್ದಾರೆ. ಎರಡನೆಯವರು ದತ್ತಾತ್ರೇಯ ನಾಟಕ ಮಂಡಳಿಯವರು. ಮೂರನೆಯವರು ನವಲಡಿಯ ಕರ್ನಾಟಕ ಸಂಗೀತ ನಾಟಕದ [illegible]ವರು. ಆದರೆ ಮೂರನೆಯವರ ಬಗ್ಗೆ [illegible] ಅಪಮಾನಾಸ್ಪದವಾಗುವದು ಕನ್ನಡ ಸಾಹಿತ್ಯ ಸೇವಾ ಮಂಡಳಿಯವರಂತೆ ಸ್ವತಂತ್ರ ವೃತ್ತಿಯ ಕಿತ್ತೂರ ಚನ್ನಮ್ಮನಂತೆಯೂ ದತ್ತಾತ್ರೇಯ ಕಂಪನಿಯವರಂತೆ [illegible] ನಾಯಕನನ್ನೇ ಇರದೆ ಕನ್ನಡ ಸಾಹಿತ್ಯ ಸೇವೆಯವರು ಅಭಿನಯಿಸುತ್ತಿರುವ ಕಿತ್ತೂರ ಚನ್ನಮ್ಮನನ್ನು ಹೋಲುತ್ತಿರುವ ಕರ್ನಾಟಕ ಸ್ತ್ರೀರತ್ನವಾಗಿರುವದರಿಂದ ಸ್ವಲ್ಪ ವಿಷಾದನೆನಿಸುತ್ತದೆ. ಕರ್ನಾಟಕದಲ್ಲಿ ಅನೇಕ ಶೌರ್ಯೋಜ್ವಲವಾದ ಐತಿಹಾಸಿಕ ಪ್ರಸಂಗಗಳಿವೆ. ಅವುಗಳಲ್ಲೊಂದು ಕೊಂಡು ಕೃತಿಯನ್ನು ಬರೆದಿದ್ದರೆ ಶೋಭಾಗತ್ತಿತ್ತು. ವಿಶೇಷ ಕೀರ್ತಿಯುಂಟಾಗುತ್ತಿತ್ತು.

ಕರ್ನಾಟಕ ಸ್ತ್ರೀರತ್ನವನ್ನು ಮಿ. ಅಂಗಡಿಯವರು ಬರೆದಂತೆ ಪ್ರಕಟವಾಗಿದೆ. ಐತಿಹಾಸಿಕ ಸಂಗತಿಯನ್ನುಳ್ಳದರಿಂದ [illegible] ನಾಟಕದ ಸಾರವೂ ಒಂದೇ ಆದೆ. ಕೇವಲ ಕಿತ್ತೂರ ಚನ್ನಮ್ಮನಂತೆ ನಿಸ್ತ್ರಾಣವಾಗಿ ಬೇರೆ ಕರ್ನಾಟಕ ಸ್ತ್ರೀರತ್ನವೆಂದು ಇರುವ ಚನ್ನಮ್ಮನ ಸ್ವತಂತ್ರ ವೃತ್ತಿಯ ಜೀವನಕ್ಕಿಂತ ಮರಣವು ಸಾವಿರ ಪಾಲಿಗೆ ಒಳಿತೆಂಬ ಜೀವನವನ್ನು [illegible] ತೋರಿಸಿಕೊಂಡಿರುವದು ವಿಶೇಷವಾಗಿದೆ. ಉಪಲಬ್ಧವಾದ ಕಿತ್ತೂರ ಚನ್ನಮ್ಮನ ಐತಿಹಾಸಿಕ ಸಂಗತಿಗಳಲ್ಲಿ [illegible] ಕೂಡದ, ದೇಶಗಳನ್ನು ನಷ್ಟ ಮಾಡಲು ಬಂದ ಕಲೆಕ್ಟರ ಥ್ಯಾಕರೆ ಫೌಜಿನನ್ನು ದಿಟ್ಟಿಗೆಟ್ಟು ಚನ್ನಮ್ಮನು ವಧಿಸಿದ್ದಾಳೆ. ಈ ಪ್ರಸಂಗದಲ್ಲಿ ಸ್ವದೇಶದ್ರೋಹಿಯಾದ ಮಂತ್ರಿ [illegible] ರನ ಮಲ್ಲಪ್ಪಶೆಟ್ಟಿಯೆಂಬವನು ಕಂಪನೀ ಸರಕಾರದ ಸಂಚಿನಲ್ಲಿ ಸೇರಿ ದೇಶದ್ರೋಹವನ್ನು ನಡೆಸಲು ಪ್ರವೃತ್ತನಾದನು. ಥ್ಯಾಕರೆಯ ಕೊಲೆಯನಂತರ ಯುದ್ಧವಾಗಿ ಕಡೆಗೆ ದೇಶಗತಿಯು ಇಂಗ್ಲೀಷ ಸರಕಾರಕ್ಕೆ ಸೇರಿಸಲ್ಪಟ್ಟಿತು. ಇಷ್ಟು ಸಂಗತಿಯು ಮಾತ್ರ ಕನ್ನಡಿಗರಾದ ನಮಗೆ ಗೊತ್ತುಂಟು. ಉಳಿದ ಪಾತ್ರಗಳಲ್ಲಿ ಕೆಲವು ಸತ್ಯವಿರಬಹುದು ಕಾಲ್ಪನಿಕವಿರಬಹುದು. ಚೌತಿ ನರಸ ಸ್ತ್ರೀಗಳೊಬ್ಬರು ಮಾತ್ರ ನಿಜವಾದವರು. ಆದಕ್ಕೇ ಬಾಣದಮ್ಮನವರು, ಜೋಯಿಸರು, ಇವರೇ ಮೊದಲಾದ ಸಂಭಾವಿತ ಕಿರುಕುಳ ಪಾತ್ರಗಳು ರಂಗಭೂಮಿಯ ರಚನೆಗೆ ಬೇಕಾಗುವ ವೇಳೆಗಾಗಿಯೂ, ಪ್ರೇಕ್ಷಕರ ಉತ್ಸಾಹವನ್ನು ಹೆಚ್ಚಿಸುವದಕ್ಕಾಗಿ ಬೇಕಾಗುವ ಹಾಸ್ಯರಸಕ್ಕಾಗಿಯೂ ಕಲ್ಪಿಸಲ್ಪಟ್ಟವುಗಳಾಗಿವೆ. ಮಿ. ಅಂಗಡಿಯವರು ನುರಿತ ನಾಟಕಕಾರರಾಗಿದ್ದರೆ ಕಲ್ಪನಾ ವೃತ್ತಿಯುಳ್ಳವರಾಗಿದ್ದರೆ, ಒಬ್ಬರೆಂಬುವನ್ನು ಸ್ವೀಕರಿಸದೆ, ಸ್ವತಂತ್ರ ವೃತ್ತಿಯ ಹಾಸ್ಯಪ್ರಸಂಗಗಳನ್ನುಂಟು ಮಾಡುತ್ತಿದ್ದರು. ಸಂವಿಧಾನಕ ರಚನೆಯಲ್ಲಿ ಬದಲಿಸುತ್ತಿದ್ದರು. ಅಂಥವರಲ್ಲವಾದ್ದರಿಂದಲೇ ನಕಲು ಮಾಡಿದಂತೆ ಮಾಡಿಬಿಟ್ಟಿರುವರು. ಅದರಲ್ಲಿಯೂ ಅಲ್ಪ, ಅತ್ಯಲ್ಪ, ತೀರ ಅತ್ಯಲ್ಪವೆಂದರೆ ಯೋಜನೆಯಲ್ಲಿ, ಭಾಷಣದಲ್ಲಿ, ಪ್ರವೇಶಗಳಲ್ಲಿ, ನಾಟ್ಯಾಂಕದಲ್ಲಿ ಸ್ವಾತಂತ್ರ್ಯ ತಂದುಕೊಳಿಸಿದ್ದು ಸಮಾಧಾನದ ಸಂಗತಿಯಿದೆ.

ಆದರೂ ಮೂಲ ಕಿತ್ತೂರ ಚನ್ನಮ್ಮನನ್ನು ಬರೆದ ಮಿ. ಸಾವಳಗಿಮಠದವರು ಈ ನಾಟಕ ಮಂಡಳಿಯವರಲ್ಲಿರುವದರಿಂದಲೂ, ಅವರಲ್ಲಿ ಹಸ್ತಲಿಖಿತ ಪ್ರತಿಯು ಇರುವದು ಸಹಜವಾಗಿರುವದರಿಂದಲೂ, ಕರ್ನಾಟಕ ಸ್ತ್ರೀರತ್ನವನ್ನು ಬರೆದವರು ಅವರೇ ಇರಬಹುದೆಂಬುದರ ಕಲ್ಪನೆಯು ಯೋಗ್ಯವಾದದ್ದೇ. ಈ ಬಗ್ಗೆ ಪಾಠಕರು ಕಿತ್ತೂರ ಚನ್ನಮ್ಮನು ಸ್ವಲ್ಪ ದಿವಸಗಳಲ್ಲಿಯೇ ಕೋರ್ಟಿನ [illegible] ಬಹುದು. ಎರಡು ಕಂಪನಿಗಳು ಅದರಲ್ಲಿ ಒಂದೇ ಊರಲ್ಲಿ ಎರಡು ಕಂಪನಿಗಳು, ಒಂದೇ ಊರಲ್ಲಿ, ಅದರೊಳಗೂ ಒಂದೇ ನಾಟಕವನ್ನಾಡುತ್ತಿರುವಾಗ [illegible] ಮೂಲತಃ ಕನ್ನಡ ಸಾಹಿತ್ಯಸೇವಾ ಮಂಡಳಿಯವರು ಅದರ ಸ್ವಾಮಿತ್ವವನ್ನು ಪಡೆದುಕೊಂಡಿರುವದರಿಂದ [illegible] ಸಹಜವಿದೆ. ನ್ಯಾಯಾನ್ಯಾಯ [illegible] ನಿರ್ಣಯಿಸುವ ಯೋಗ್ಯತೆಯು ನಮಗಿಲ್ಲ. [illegible] ಹಬ್ಬದಂತೆಯೂ ನಮಗಿಲ್ಲ. [illegible] ದ್ದಿಗೆ [illegible] ರಂಗಭೂಮಿಯ ಮೇಲೆ [illegible] ಐತಿಹಾಸಿಕ ನಾಟಕಗಳಲ್ಲಿಯ ಪಾತ್ರಗಳನ್ನು [illegible] ಸೃಷ್ಟಿಯಿಂದ [illegible] ಅಬ್ಬಿಗೇರಿಯ [illegible] ಸಂಗೀತ ನಾಟಕ ಮಂಡಳಿಗೆ ಅಬ್ಬಿಗೇರಿಯ ನಾಟಕವೆಂತಲೂ, ನವಲಡಿಯ ಕರ್ನಾಟಕ ಸಂಗೀತ ನಾಟಕ ಮಂಡಳಿಗೆ ನವಲಡಿಯ ನಾಟಕವೆಂತಲೂ ಸಂಕ್ಷಿಪ್ತ ಹೆಸರುಗಳಿಂದ ಇನ್ನು ಉಲ್ಲೇಖಿಸುವೆನೆಂದು ವಾಚಕರಿಗೆ ತಿಳುಹಿಸಿ ವಿವೇಚನವನ್ನು ಪ್ರಾರಂಭಿಸುವೆನು.

ಕಾರ್ಯ-ಕಾರಣ ಪರಂಪರೆಯ ದೃಷ್ಟಿಯಿಂದ ಈ ಐತಿಹಾಸಿಕ ನಾಟಕದಲ್ಲಿ ಚನ್ನಮ್ಮಾ, ಸ್ತ್ರೀಗಳು, ಮಲ್ಲಪ್ಪಶೆಟ್ಟಿ, ರುದ್ರಪ್ಪನಾಯಕ, ಹೀಗೆ ನಾಲ್ವರು ಪ್ರಮುಖರಾಗಿ ತೋರುವರು. ಇವರೊಳಗೆ ಅಬ್ಬಿಗೇರಿಯವರಲ್ಲಿ ಚನ್ನಮ್ಮ ನಾಗೂ ಮಲ್ಲಪ್ಪಶೆಟ್ಟಿ ಇವರು ಶ್ರೇಷ್ಠ ತರಗತಿಯಲ್ಲಿಯೂ, ಸ್ತ್ರೀಗಳು ಉತ್ತಮ ವರ್ಗದಲ್ಲಿಯೂ, ರುದ್ರಪ್ಪನಾಯಕನು ಮಧ್ಯಮನಾಗಿಯೂ, ನವಲಡಿಯವರಲ್ಲಿ ಚನ್ನಮ್ಮ ಹಾಗೂ ಸ್ತ್ರೀಗಳು ಶ್ರೇಷ್ಠ ತರಗತಿಯಲ್ಲಿಯೂ ರುದ್ರಪ್ಪನಾಯಕನ ಉತ್ತಮ ವರ್ಗದಲ್ಲಿಯೂ, ಮಲ್ಲಪ್ಪಶೆಟ್ಟಿಯು ಮಧ್ಯಮನಾಗಿಯೂ ಕಾಣುವನು. ಉಳಿದ ಉಪ ಪಾತ್ರಗಳ ವಿಚಾರದ ಆವಶ್ಯಕತೆಯಿಲ್ಲವೆಂಬುವದು ಈ ಬಗ್ಗೆ ಹಿಂದೆ ಈ ನಾಟಕಕ್ಕೆ ಸಂಬಂಧಿಸಿದ ಹಲವು ಲೇಖಗಳಿಂದ ವಾಚಕರ ಮನವರಿಕೆಯಾಗಿರಬಹುದು. ಇನ್ನು

ಚನ್ನಮ್ಮದ್ವಯರಲ್ಲಿ ಹೆಚ್ಚಿನವರಾರು?

ಎರಡೂ ನಾಟಕಗಳಲ್ಲಿ ಚನ್ನಮ್ಮನ ಭೂಮಿಕೆಯನ್ನು ವಹಿಸುವವರು [illegible] ವರ್ಷಗಳ ಬಾಲಕಿಯರೇ. ಇಬ್ಬರ ರೂಪ, ಆಕಾರ, ಭಾಷಣ, ಅಭಿನಯಗಳು ಅಭಿನಂದನೀಯವಾಗಿವೆ. ಇಬ್ಬರೂ ಏಕರೂಪವಾಗಿಬಿಟ್ಟಿದ್ದಾರೆ. ಆದರೆ ಶುದ್ಧಾಶುದ್ಧತೆಯಲ್ಲಿ ನವಲಡಿಯ ಚನ್ನಮ್ಮನೇ ಮೇಲು. ಗಾಯನದಲ್ಲಿ ಇಬ್ಬರೂ ಸಮಾನ ಸ್ಥಿತಿಯಲ್ಲಿರುವರು. ಒಟ್ಟಿನ ಮೇಲೆ [illegible] ನವಲಡಿಯ ಯೋಗ್ಯತೆಯು ಸ್ವಲ್ಪ ಹೆಚ್ಚು.

ಸ್ತ್ರೀಗಳವರಲ್ಲಿ ಶ್ರೇಷ್ಠರಾರು?

ರಂಗಭೂಮಿಯನ್ನು ಗದಗದಿಸಿಬಿಡುವ ಪ್ರೇಕ್ಷಕರನ್ನು [illegible] ಸರ್ವ್ಯಡಕರೇ ನವಲಡಿಯ ಸ್ತ್ರೀಗಳು ಭಾಷಣ, ಗಾಯನ, ಅಭಿನಯಗಳಲ್ಲಿ [illegible] ಅಬ್ಬಿಗೇರಿಯ ಸ್ತ್ರೀಗಳು [illegible] ತಿಳಿಯಲಾಗಿದೆ.

ರುದ್ರಪ್ಪರಿಬ್ಬರಲ್ಲಿ ಉತ್ತಮರಾರು?

ಅಬ್ಬಿಗೇರಿಯ ರುದ್ರಪ್ಪನಾಯಕನಿಗಿಂತ ನವಲಡಿಯ ರುದ್ರಪ್ಪನಾಯಕನು ಅನೇಕ ವೇಳೆಗಳಲ್ಲಿ [illegible] ಉತ್ತಮನಾಗಿರುವನು. ಭಾಷಣವೂ [illegible] ಇದ್ದಲ್ಲಿ [illegible] ಅನೇಕವಿದ್ದರೆ [illegible] ಮಾರ್ಮಿಕವಾಗುವದು.

ಇಬ್ಬರು ಮಲ್ಲಪ್ಪಶೆಟ್ಟರಲ್ಲಿಯೋ ಮೇಲ್ಪಂಕ್ತಿ [illegible] ಗತಿಯುವ

R. N. B. 1443

ಸಾಪ್ತಾಹಿಕ | ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

(೧) ಧಾರವಾಡ ಸೋಮವಾರ ತಾರೀಖು ೬ ನೇ ಜನವರಿ ೧೯೩೦ (ಸಂಚಿಕೆ ೧

ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯದ ಸಂದೇಶ

ಪಂಡಿತ ಜವ್ಹಾರಲಾಲ ನಹರು

ಆಯುಷ್ಯದ ಮಧ್ಯಕಾಲ

—(೧)—

ಪಂಡಿತ ಜವ್ಹಾರಲಾಲರ ಹೆಸರು ಹಿಂದುಸ್ಥಾನವನ್ನು ಪಾರತಂತ್ರ್ಯದಿಂದ ಮುಕ್ತಮಾಡುವಂಥ ವರ ನಾಮಾವಳಿಯಲ್ಲಿ ಉಚ್ಚಸ್ಥಾನವನ್ನು ಹೊಂದುವದು. ಸ್ವಾತ ಜನಕರಾದ ಪಂಡಿತ ಮೋತಿಲಾಲರು ಬಾಪನೆ ಬೇಟಾ ಸಲಾಮ ಎಂದಿದ್ದಾರೆ. ತಂದೆಯನ್ನು ಗಿಂತ ಕಮಾಲನು ಬಚ್ಚಿನವನಾದಂತೆ!! ಜವ್ಹಾರಲಾಲರು ಗರ್ಭ ಶ್ರೀಮಂತರು ತಂದೆಯ ಸಂಪತ್ತು ಬಹು ದೊಡ್ಡದು ರಾಜರಂಜೇಶ್ವರರು ಅಸೂಯ ಪಡುವಂಥದ್ದು ಇವರ ಅರಮನೆಗಳು ಪ್ರಾಸ್ತಿಲ್ಲಿ ಜೊಲಿದು ಬರುತ್ತಿದ್ದವು ಇಂಥವರು ಈಗ ಶುದ್ಧ ಖಾದೀಧಾರಕರಾಗಿದ್ದಾರೆ ಇವರ ಶಿಕ್ಷಣವು ವಿಲಾಯತಿಯಲ್ಲಾಯಿತು. ಹಿಂದುಸ್ಥಾನದಲ್ಲಿ ಕೂಡ ಒಬ್ಬ ಸಾಹೇಬರೇ ಶಿಕ್ಷಕರಾಗಿದ್ದರು ವಿಲಾಯತಿಗೆ ಹೋಗಿ ಬ್ಯಾರಿಸ್ಟರರಾಗಿ ಬಂದರು. ಇಂದು ತಂದೆಗಿಂತ ಮಗನು ಹೆಚ್ಚಿನವನಾದರೂ, ವಕೀಲಿ ವ್ಯವಸಾಯದಲ್ಲಿ ತಂದೆಯ ಮುಂದೆ ಮಗನ ಬೆಳಕು ಬೀಳಲಿಲ್ಲ.

ಸಾರ್ವಜನಿಕ ಕೆಲಸಗಳಲ್ಲಿ ಮನಸ್ಸು ಹಾಕಿ ಯಥಾಶಕ್ತಿಯವಾಗಿ ಅದನ್ನು ನಿರ್ವಹಿಸುವದು ಇವರಿಗೆ ಹುಟ್ಟು ಗುಟ್ಟು ಹತ್ತಿತ್ತೆಂದರೂ ಸಲ್ಲುವದು. ವಿಲಾಯತಿಯಲ್ಲಿರುವಾಗ ಕೂಡ ಹಿಂದುಸ್ಥಾನದ ರಾಜಕಾರಣದಲ್ಲಿ ಮನಸ್ಸು ಹಾಕುತ್ತಿದ್ದರು ಹಿಂದುಸ್ಥಾನಕ್ಕೆ ಬಂದನಂತರ ನಾಮದಾರ ಗೋಖಲೆಯವರ ಸರ್ವಂಟ ಆಫ್ ಇಂಡಿಯಾ ಸೊಸಾಯಿಟಿಗೆ ೪೦ ಸಾವಿರ ರೂಪಾಯಿಗಳನ್ನು ಕೂಡಿಸಿಕೊಟ್ಟರು. ಇಂಥ ಕೆಲಸಗಳಲ್ಲಿಯೇ ಮನಸ್ಸು ಹಾಕಿದಂಲ್ಲದೆ, ದ್ರವ್ಯಸಂಪಾದನೆಯಲ್ಲಿ ಮನಸ್ಸೇ ಹಾಕಲಿಲ್ಲ ೧೯೨೧ರಲ್ಲಿ ನಾನ-ಕೋ-ಆಪರೇಶನ ಪ್ರಾರಂಭವಾದ ಕೂಡಲೆ ಅದರಲ್ಲಿ ಸೇರಿದರು ಸರಕಾರದವರು ಎರಡು ಸಾರೆ ಶಿಕ್ಷೆ ಮಾಡಿದರು ಎರಡೂ ಸಾರೆ ಶಿಕ್ಷೆ ಮುಗಿಯುವದರೊಳಗಾಗಿ ಬಿಡುಗಡೆ ಮಾಡಿದರು ನಾಭಾದಲ್ಲಿ ಇವರಿಗೆ ಬರಲು ಪ್ರತಿಬಂಧವಾಯಿತು ಆದರೂ ಅಲ್ಲಿ ಹೋದರು. ಈ ಅಪರಾಧಕ್ಕಾಗಿ ಎರಡೂವರೆ ವರ್ಷದ ಶಿಕ್ಷೆಯಾಯಿತು. ಶಿಕ್ಷೆ ಹೇಳಿದ್ದು ನಾಭಾದಲ್ಲಿ, ಇವರು ಇದನ್ನು ಪ್ರಯಾಗದಲ್ಲಿ ಶಿಕ್ಷೆ ಅನುಭವಿಸಲು ವಾರಂಟಿನಿಂದ ಇವರನ್ನು ಹಿಡಿದೊಯ್ಯಲೇ ಇಲ್ಲ. ಆ ಶಿಕ್ಷೆಯು ಹಾಗೇ ಉಳಿದಿದೆ ೧೦ ವರ್ಷಗಳ ಹಿಂದೆ ಕಾಬೂಲ ಮತ್ತು ಹಿಂದುಸ್ಥಾನ ಸರಕಾರದ ನಡುವೆ ರಾಜಿಯ ಸಂಧಾನ ನಡೆದಾಗ-ಕಾಬೂಲದ ವಕೀಲರನ್ನು ಕಾಣಲಿಕ್ಕೆ ಹೋಗಕೂಡದೆಂದು ಸರಕಾರದವರು ಇವರಿಗೆ ಬಂದುಬಸ್ತು ಮಾಡಿದ್ದರು.

ಈ ಸಂಗತಿಯಿಂದ ಇವರ ಮೇಲೆ ಸರಕಾರದ ಎಷ್ಟು ಕೃಪೆ ಮತ್ತು ಪ್ರೀತಿ ಇರುತ್ತದೆಂಬದು ಧ್ವನಿತವಾಗುತ್ತದೆ. ಕಳೆದಾರು ವರ್ಷಗಳಿಂದ ಇವರು ಕಾಂಗ್ರೆಸದ ಸೇಕ್ರೇಟರಿಯಾಗಿದ್ದರು. ಆಗಿನಿಂದ ಇವರು ರಾಷ್ಟ್ರಕಾರ್ಯದಲ್ಲಿ ಓರ್ವ ಪ್ರಮುಖ ಗೃಹಸ್ಥರಾದರು ಈ ಸಾರೆ ಇವರು ಕಾಂಗ್ರೆಸದ ಅಧ್ಯಕ್ಷರಾದದ್ದು ಅಯಾಚಿತವಾದದ್ದು ಏಕೆಂದರೆ ತಾವು ಅಧ್ಯಕ್ಷರಾಗಬೇಕೆಂದು ಅಪೇಕ್ಷಿಸಲಿಲ್ಲ ಮಹಾತ್ಮರ ಒತ್ತಾಯದಿಂದ ಇವರನ್ನು ಕಾಂಗ್ರೆಸದ ಅನಭಿಷಿಕ್ತರಾಜರಾಗಿ ಮಾಡಿದರೆಂಬದು ಸರ್ವಶ್ರುತವದೆ ರಶಿಯಾಕ್ಕೆ ಹೋಗಿ, ಅಲ್ಲಿಯ ಸ್ಥಿತಿಗತಿಯನ್ನು ನೋಡಿದ್ದಾರೆ. ತಾವು ಸ್ವತಃ ಸೋಶಿಯಾಲಿಸ್ಟ ಮತ್ತು ಪ್ರಜಾ ತಂತ್ರವಾದಿ ಎಂಬ ಮರೆಮಾಜದೆ ಸ್ಪಷ್ಟ ರೀತಿಯಿಂದ ಸಾರುವರು ಇವರು ಮಾಡಿದ ಭಾಷಣವು ಮಹಾತ್ಮರ ದೋರಣದಂತೆಯುಂಟು. ಒಂದು ವರ್ಷದಲ್ಲಿ ಸ್ವರಾಜ್ಯ ಕೊಡದಿದ್ದರೆ- ಸ್ವಾತಂತ್ರ್ಯದ ಕೇಪು ನಿಶಾನೆ ಹಚ್ಚುವನೆಂದು ಮಹಾತ್ಮರು ಆಡಿದ ನುಡಿಯನ್ನು ಇವರು ನಿಜಮಾಡಿ ತೋರಿಸಿದರು. ಹಿಂದುಸ್ಥಾನಕ್ಕೆ ಸಂಪೂರ್ಣವಿಲ್ಲದಿದ್ದರೂ ವಸಾಹತಿನ ಸ್ವರಾಜ್ಯ ದೊರೆತರೂ, ಹಿಂದೆ ಕೊಟ್ಟ ಸಾಲ ಮುಣುಗುವದು ಮುಂದಂತೂ ಸಾಲ ಕೊಡಬೇಡಿರೆಂದು ವಿಲಾಯತಿಯ ಪತ್ರಗಳು. ಒಂದು ತಿಂಗಳ ಹಿಂದೆ ಬೊಬ್ಬೆ ಹೊಡೆದದ್ದನ್ನು ವಿಜಯದಲ್ಲಿ ಬರೆದಿದ್ದೇವೆ ಅವು ಮತ್ತಿಷ್ಟು ಗಾಬರಿಯಾಗುವಂತೆ ಪಂಡಿತರು ಈ ವಿಷಯವನ್ನು ಎತ್ತಿ ಹಿಡಿದಿದ್ದಾರೆ ಆ ಭಾಗವು ಮುಂದೆ ಕೊಟ್ಟಿರುತ್ತದೆ.

ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೆಂದರೆ-ಬ್ರಿಟಿಶ ಸ್ವೇಚ್ಛಾತತ್ವದ ತಳಹದಿಯಾಗಿಯೂ ತಮ್ಮ ಪ್ರಭುತ್ವಕ್ಕೆ ಸೇರಿದಂಥ ಪಂಕ್ತಿಯರ ರಕ್ತ ಹೀರುವದೂ ಆಗಿರುತ್ತದೆ. ಇಂಥ ಸಾಮ್ರಾಜ್ಯದ ಭಾಗವಾಗಿರುವದು ಘಾತಕವೇ ಸರಿ. ಸ್ವಾತಂತ್ರ್ಯದ ಹೋರಾಟದಲ್ಲಿ ನಮಗೆ ಇಂದೇ ಜಯದೊರೆಯಲಿಕ್ಕಿಲ್ಲ. ಮುಂದೆ ನಿಶ್ಚಯವಾಗಿ ದೊರೆಯುವದು. ಹಿಂದುಸ್ಥಾನವನ್ನು ಯಾವಾಗಲೂ ತಮ್ಮ ಸಾಲದ ಹಂಗಿನೊಳಗಿಟ್ಟು ಅದನ್ನು ಕೊಳೆ ಹಾಕಬೇಕೆಂದು ಬ್ರಿಟಿಶರ ರಾಜನೀತಿಯ ತತ್ವವು ಆದ್ದರಿಂದ ನಾವು ಈ ಸಾಲವನ್ನೇ ಕೊಡುವದಿಲ್ಲೆಂದು ಸಾರಿಸಾರಿ ಹೇಳತಕ್ಕದ್ದು. ಗುಪ್ತಸಂಚಿನ ಕಾಲ ಹಿಂದಾಯಿತು. ಸ್ವಾತಂತ್ರ್ಯಕ್ಕಾಗಿ ಜಾಹೀರ ರೀತಿಯಿಂದ ಉದ್ಯುಕ್ತರಾಗಬೇಕು.

ಪಂಡಿತ ಜವ್ಹಾರಲಾಲರ ಮೇಲೆ ವಿಲಾಯತಿಯ ಪತ್ರಿಕೆಗಳು ಅತ್ಯಂತವಾಗಿ ಕೋಪಗೊಂಡಿವೆ ಇವರ ಮೇಲೆ ರಾಜದ್ರೋಹ ಮತ್ತು ರಾಜ್ಯಕ್ರಾಂತಿಯ ಆರೋಪ ಹೊರಿಸಿ, ಖಟ್ಲೆ ಮಾಡಬೇಕೆಂದೂ ಒಂದು ಪತ್ರವು ಅಂದಿರುತ್ತದೆ ಸ್ವಾತಂತ್ರ್ಯದ ಜಾಹೀರನಾಮೆಯನ್ನು ಹಚ್ಚುವಾಗ ತಮ್ಮ ಮೇಲೆ ಯಾವ ಜವಾಬದಾರಿಯುಂಟು. ಅದಕ್ಕಾಗಿ ಯಾವ ಸಂಕಟ ಬರುವದೆಂಬದನ್ನು ಪಂಡಿತರು ಅರಿತೇ ಇದ್ದಾರೆ

ಅಧ್ಯಕ್ಷ ಜವ್ಹಾರಲಾಲರ ಭಾಷಣದಿಂದ ಜೋರಟ ಆರ್ಕವು

ಸ್ವಾಗತಾಧ್ಯಕ್ಷರಾದ ಡಾಕ್ಟರ ಕಿಚಲೂ ಸಾಹೇಬರು ಸಭಾಧ್ಯಕ್ಷ ಪಂಡಿತ ಜವ್ಹಾರಲಾಲರನ್ನು ಪೂರ್ವಾಲಯಿಂದ ಸನ್ಮಾನಿಸುತ್ತಿದ್ದಾಗ ಜಾಸದರು ಪ್ರಚಂಡ ಜಯಘೋಷ ಮಾಡಿದರು. ಅಧ್ಯಕ್ಷ ಮಹಾಶಯರು ಭಾಷಣ ಮಾಡಲು ವ್ಯಾಸಪೀಠದ ಹತ್ತರ ಬರಲು- ಹಿಂದೀ, ಹಿಂದೀ ಎಂದು ಜನರು ಕೂಗೆಬ್ಬಿಸಿದರು. ಇವರು ಹಿಂದಿಯಲ್ಲಿಯೇ ಭಾಷಣಮಾಡಿದರು. ಒಂದುವರೀ ತಾಸಿನವರೆಗೆ ಭಾಷಣ ನಡೆದಿದ್ದರೂ, ಜನರು ಶಾಂತಚಿತ್ತದಿಂದ ಕೇಳಿದರು ನಾನು ಸೋಸಿಯಾಲಿಸ ಮತ್ತು ಪ್ರಜಾಸತ್ತಾತ್ಮಕವಾದಿಯು ಇದ್ದೇನೆಂದು ಪಂಡಿತರು ಉದ್ಗಾರ ತೆಗೆದಾಗ ಜನರು ಜಯಘೋಷ ಮಾಡಿದರು. ಹಿಂದೀ ಸಂಸ್ಥಾನಿಕರು ಇಂಗಿಷರಂತೆ ತಾಳ ಬಾರಿಸುತ್ತಾರೆಂದಕೂಡಲೆ, ಶೇಮ ಶಬ್ದಗಳ ಕೋಲಾಹಲವಾಯಿತು. ಸ್ವಜನದ್ರೋಹ ಮಾಡತಕ್ಕಂಥ ಸಂಸ್ಥಾನಿಕರು ಇಂಗ್ಲಿಷರ ಅಥವಾ ಅಮೇರಿಕನ್ನರ ಆಗಿದ್ದರ ಅವರ ಅವಸ್ಥೆ ಏನಾಗುತ್ತಿತ್ತೆಂದು ಪ್ರಶ್ನೆ ಮಾಡಲು- ಇವರ ತಲೆ ಹೊಡಿಸುತ್ತಿದ್ದರೆಂದು ಪ್ರೇಕ್ಷಕಗಣದಿಂದ ಉತ್ತರ ಬಂತು ಬ್ರಿಟಿಶರನ್ನು ಹಿಂದುಸ್ಥಾನದ ಹೊರಗೆ ಹಾಕುವ ಸಂಚು ಗುಪ್ತವಾಗಿಲ್ಲ. ಹೇಳಿಕೇಳಿ ಬಹಿರಂಗವಾದದ್ದಿರುತ್ತದೆಂಬಾಗ ಜನರು ಆನಂದೋದ್ಗಾರ ತೆಗೆದರು. ರಾಜ್ಯಕ್ರಾಂತಿಯು ಜಿರಾಯುವಾಗಲೆಂದು ಭಾಷಣ ಮುಗಿಂದಾಗ ಜನರು ಇದೊಂದು ಸತ್ಯವೆಂದು ಭಾವಿಸಿ, ಮೂರಾವರ್ತಿ ರಾಜ್ಯಕ್ರಾಂತಿ ಚಿರಾಯುವಾಗಲೆಂದು ದಿಶಾಮಂಡಲ ಪ್ರತಿಧ್ವನಿಸುವಂತೆ ಕೂಗಿದರು. ಭಾಷಣ ಮುಗಿಸಿ ಅಧ್ಯಕ್ಷರು ತಮ್ಮ ಸ್ಥಳಕ್ಕೆ ಹೋದನಂತರ- ಒಬ್ಬ ಸ್ವಯಂಸೇವಕನು ವ್ಯಾಸಪೀಠದ ಮೇಲೆ ಬಂದು, ನಾಡಗುಡಿಯು ಬೆಳೆಯಲಿ, ಉನ್ನತವಾಗಲಿ ಬ್ರಿಟಿಶ ಯೂನಿಯನ್ನ ಜಾಕ ನಿಶಾನೆಯು ಅಧಃಪತವಾಗಲೆಂದು ಕೂಗಿದನು

ಸ್ವಾತಂತ್ರ್ಯದ ನಿಶಾನೆ ಏರಿತು.

—(೦)—

ಲಾಹೋರಿನಲ್ಲಿ ದಿಶಂಬರ ಒಗನೆಯ ತಾರೀಖಿನ ಮಧ್ಯರಾತ್ರಿಯು ಸರಿದು ಒಂದು ಮಿನಿಟಾಗಿ ಒನವರಿಯ ಹೊಸ ದಿವಸ ಪ್ರಾರಂಭವಾದ ಕೂಡಲೆ- ಕಾಂಗ್ರೆಸದಲ್ಲಿ ನೆಲೆಸಿದ್ದ ರಾಷ್ಟ್ರೀಯ ನಿಶಾನೆಯು ಸ್ವಾತಂತ್ರ್ಯದ ನಿಶಾನೆಯಾಯಿತೆಂದು ಭೇರಿ ಹೊಡೆಯಲ್ಪಟ್ಟಿತು. ಆಗ ಪುರುಷ ಮತ್ತು ಸ್ತ್ರೀ ಹ್ವಾಲಂಟಿಯರರು ಸ್ವಾತಂತ್ರ್ಯದ ರಾಷ್ಟ್ರಗೀತವನು ಹಾಡಿ, ನಿಶಾನೆಗೆ ವಂದನೆಯಿತ್ತರು ಒಳಿಕ ಸ್ವಾತಂತ್ರ್ಯದ ಮತ್ತು ರಾಜ್ಯಕ್ರಾಂತಿಯ ಜಯಜಯಕಾರವಾಗಲೆಂದೂ, ಬ್ರಿಟಿಶ ನಿಶಾನೆಯ ಅಧಃಪಾತವಾಗಲೆಂದೂ ರಣಘೋಷ ಮಾಡಿದರು.

ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರದು.

—೦—

ಹಿಂದುಸ್ಥಾನವು ಏಕೆ ಸ್ವಾತಂತ್ರ್ಯದ ನಿಶಾನೆ ಹಚ್ಚಬೇಕೆಂಬದನ್ನು ಕುರಿತು ಮಹಾತ್ಮರು ಮುಂದೆ ಕಾಣುವ ಭಾಷಣ ಮಾಡಿದ್ದಾರೆ.

ಪಂಡಿತ ಮಾಲವೀಯಾ ಮಿ ಕೇಳಕರ ಹಾಗು ಬೇರೆ ಕೆಲವರಿಗೆ ಇನ್ನೊಮ್ಮೆ ಪಂಡಿತ ಮೋತಿಲಾಲರ ವಸಾಹತಿನ ಸ್ವರಾಜ್ಯ ಕಮೀಟಿಯಂಥ ಕಮೀಟಿಯನ್ನು ನೇಮಿಸಬೇಕೆಂಬ ಅಪೇಕ್ಷೆಯಾಗಿದೆ. ಪಂಡಿತರ ಕಮೀಟಿಯು ಮುಸಲ್ಮಾನರನ್ನೂ ಶಿಖರನ್ನೂ ನಮಗೆ ಸನಿಹವಾಗಿ ಮಾಡಿ ಪರಸ್ಪರ ಹೆಚ್ಚು ತಿಳುವಳಿಕೆಯನ್ನುಂಟುಮಾಡಿದ್ದು ನಿಜ. ಬ್ರಿಟಿಶರು ನಮ್ಮ ರಾಷ್ಟ್ರೀಯ ಬೇಡಿಕೆಯನ್ನು ಪೂರೈಸುವಂತೆ ನಾವು ಒಟ್ಟಾಗಿ ಕೆಲಸ ಮಾಡಿದವು. ಆದರೆ ಅದು ನಮಗೆ ದೊರೆಯದೆಂದು ತಿಳಿದ ಬಳಿಕ ನಾವು ನಮ್ಮ ಜವಾಬದಾರಿಯ ವಿಚಾರವನ್ನೂ ಮಾಡತಕ್ಕದ್ದು. ಈ ಪ್ರಸಂಗದಲ್ಲಿ ಮವಾಳರು ನಮ್ಮನ್ನು ಬಿಟ್ಟರೂ ನಾವು ಪರಿವೆ ಮಾಡತಕ್ಕದ್ದಲ್ಲ. ನಮಗೆ ಬೇಕಾದ ಪದ ಥವು ದೊರೆಯುವತನಕ ನಮ್ಮ ಸಭೆಗೆ ರಾಜರು ಮಹಾರಾಜರು ಬರದಿದ್ದರೂ ಸರಿಯೇ. ಸ್ವಾತಂತ್ರ್ಯದ ಸಂಗ್ರಾಮ ಸಾರಲಿಕ್ಕೆ ಎರಡು ವರ್ಷದ ಅವಧಿ ಬೇಕೆಂದು ನಾನು ಹೋದ ವರ್ಷವೇ ಹೇಳಿದೆನು ಅದನ್ನು ನೀವು ಒಂದೇ ವರ್ಷ ಮಾಡಿದಿರಿ ಅದನ್ನು ಒತ್ತರ ಮಾಡಬೇಕೆಂದು ಹೇಳುವದರಲ್ಲಿ ಪಾಪವೇನೂ ಇರುವದಿಲ್ಲ ಸದ್ಯ ನಮ್ಮ ಮಾನದ ಪ್ರಶ್ನೆಯು ಆದಕವಾಗಿದೆ ನಮ್ಮ ಸಿದ್ಧಾಂತದಂತೆ ನಡೆಯದಿದ್ದರೆ- ಅದಕಕಿಗಾಗಿ ಮಾನ ಹೋದಂತಾಗುವದುಂಟು. ತನ್ನ ವಚನದ ಪ್ರಕಾರ ನಡೆಯದಂಥ ದೇಶವು ಅಧಃಪಾತ ಹೊಂದುವದು. ಆದ್ದರಿಂದ ಕಲಕತ್ತೆಯ ಕಾಂಗ್ರೆಸದಲ್ಲಿ ಸ್ವಾತಂತ್ರ್ಯದ ಠರಾವು ಮಾಡಿದ್ದನು ಧ್ಯಾನಕ್ಕೆ ತನ್ನಿರಿ. ಮತ್ತು ಸ್ವಾತಂತ್ರ್ಯಸಂಪಾದನೆಗಾಗಿ ಉದ್ಯೋಗಿಸಿರಿ. ಕೋಟಿ ಜನರು ಹಿಂಬಾಲಿಸಿದರೂ ಒಂದೇ ಒಬ್ಬನೇ ಹಿಂಬಾಲಿಸಿದರೂ ಒಂದೇ.

ಕೌನ್ಸಿಲ ಮತ್ತು ಅಸೆಂಬ್ಲಿಯ ರಾಜೀನಾಮೆಗೆ ಪ್ರಾರಂಭ.

—(೦)—

ಕಾಂಗ್ರೆಸದ ಕೌನ್ಸಿಲ ಮತ್ತು ಅಸೆಂಬ್ಲಿಗೆ ಸ್ವರಾಜ್ಯ ಪಕ್ಷೀಯರು ರಾಜೀನಾಮೆ ಕೊಡಬೇಕೆಂದು ಠರಾವಾದ ಪ್ರಕಾರ ಶ್ರೀ. ಪ್ರಕಾಶಮರು ರಾಜೀನಾಮೆ ಕೊಟ್ಟು, ಕಳಿಸಿದರು. ಲಾಲಾ ರಾಜಹಂಸರು ರಾಜೀನಾಮೆ ಕೊಟ್ಟು, ಈ ನಂತರ ಗ್ಯಾರು ಹೇಳಿದರೂ- ಪ್ರಸಂಗವಿದ್ದರೆ- ಮುಂದೆ ಚುನಾವಣೆಯಲ್ಲಿ ಉಮೇದವಾರರಾಗುವದಿಲ್ಲೆಂದು ಹೇಳಿದ್ದಾರೆ. ೧೮ನೆಯ ತಾರೀಖಿನ ವರೆಗೆ ತಡೆಯಿರೆಂದು ಪಂಡಿತ ಮಾಲವಿಯಾ, ಕೇಳಕರ ಮೊದಲಾದವರು ಒಂದು ವಿನಂತಿ ಪತ್ರವನ್ನು ಜಾಹೀರ ಮಾಡಿದ್ದಾರೆ. ಕರ್ನಾಟಕದ ಪತಿಯಿಂದ ಶ್ರೀ. ಜೋಗ ಮತ್ತು ಕರ್ಕಿಯವರು ಸ್ವರಾಜ್ಯ ಪಕ್ಷೀಯರಿದ್ದು, ಇವರೂ ರಾಜೀನಾಮೆ ಕೊಡಬಹುದಾಗಿದೆ.

ಪರದೇಶಗಳಿಂದ ಕಾಂಗ್ರೆಸಕ್ಕೆ ಬಂದ ಸಂದೇಶಗಳು.

—(೦)—

ಕಾಬೂಲದಿಂದ ಮಹೇಂದ್ರ ಪ್ರತಾಪರು ಕಳಿಸಿದ ತಾರು-

ಅಫಗಾಣಿಸ್ಥಾನದ ಬಗ್ಗೆ ಸಹಾನುಭೂತಿಯುಳ್ಳವರಾಗಿರಿ. ಹಿಂದುಸ್ಥಾನವು ಸ್ವತಂತ್ರವಾಗಲಿ, ರಶಿಯಾದ ಕೂಡ ಬಹಿರಂಗವಾಗಿ ಸ್ನೇಹ ಬೆಳೆಸಬೇಕು. ಆಶಿಯಾಖಂಡವೆಲ್ಲ ಒಂದೆಂಬ ತತ್ವವನ್ನು ಅಂಗೀಕರಿಸಬೇಕು ಜಗತ್ತಿನ ಎಲ್ಲ ಗುಲಾಮ ದೇಶಗಳಿಗೆ ಸ್ವಾತಂತ್ರ್ಯ ದೊರೆಯುವಂತೆ ಯತ್ನಿಸಬೇಕು.

ಇದೇ ಪ್ರಕಾರ ಅಮೇರಿಕೆ, ಫೀಜಿ ದಕ್ಷಿಣ ಆಫ್ರಿಕೆ ಮುಂತಾದ ದೇಶಗಳಲ್ಲಿ ವಾಸವಾಗಿರುವ ಹಿಂದೀ ಜನರಿಂದ ಸಂದೇಶಗಳು ಬಂದಿರುತ್ತವೆ.

ಸ್ವಾತಂತ್ರ್ಯವೆಂದರೆ ಪೊಳ್ಳು ವಿಜಯ-

ಮಹಾತ್ಮರ ಕಾಯದೆಭಂಗದ ಬಗ್ಗೆ ನಡೆಸಿದ ವಿಚಾರದಲ್ಲಿ ಉಪ್ಪಿನ ಕರ ಕೊಡಬಾರದೆಂದಿರುವದಾಗಿದೆ ಇದನ್ನು ಒಮಲಿನಲ್ಲಿ ತಂದು ಕಾಯದೆಭಂಗ [illegible] ಅದು ವಿಚಾರವು [illegible] ವರ್ಕಿಂಗ ಕಮೀಟಿಯ ಮುಂದೆ ಈ ಪ್ರಶ್ನ ಬರುವದು. ಅಲ್ಲಾಗುವ ನಿರ್ಣಯದ ಮೇಲೆ ಮುಂದಿನ ಕೆಲಸ ನಡೆಯುವದು

ಬೆಳಗಾವಿಯ ಹಾಯಸ್ಕೂಲಿನಲ್ಲಿ ವಿದ್ಯಾರ್ಥಿಗಳ ಕೂಡ ವಿದ್ಯಾರ್ಥಿನಿಯರೂ ಕಲಿಯುವರು ವಿದ್ಯಾರ್ಥಿನಿಯರು ಶಾಲೆ ಬಿಡುವದಕ್ಕಿಂತ ಒಳಿಕ ಶಾಲೆಯಲ್ಲಿರಬಾರದು ತಂದೆತಾಯಿಗಳ ಅಪ್ಪಣೆಯ ಹೊರತು ಶಿಕ್ಷಕರ ಮನೆಗೆ ಹೋಗಬಾರದೆಂದು ಶಾಲೆಯಲ್ಲಿ ನೋಟೀಸು ಹಚ್ಚಿದ್ದಾರೆ ಇದರಿಂದು ನಾಗರಿಕರಿಗೆ ಗುಂಭ ಬಿದ್ದು, ಊರೊಳಗೆ ಕಲ್ಪನಾತರಂಗಗಳು ನಡೆದಿರುತ್ತವೆ

ಮಾಲ ಮಿಲ್ಲದ ಮೆಂಬರರಾದ ಶಮ್ಯಾಂಡರ ಶ್ಲಮರ್ ಸಾಹೇಬರು [illegible] ಒಂದು ಮೂರು ತಾಸುಗಳ ಪರ್ಯಂತರ ಮಹಾತ್ಮರ ಕೂಡ ಮಾತಾಡಿ ಅಲಹಾಬಾದಕ್ಕೆ ಹೋದರು.

ವಿಜಾಪೂರದಲ್ಲಿ ಕೂಡಿದ್ದ ಮುಸಲ್ಮಾನರ
ಶಬ್ಲಿಗೆಯ ವಿಶೇಷ ಸಂಗತಿಯು

—:(o):—

ಸಾಯಂಕಾಲದ ೩ ಘಂಟೆಗೆ ಸರಿಯಾಗಿ ಸಭೆಗಳಿಗೆ ಪ್ರತಿನಿಧಿಗಳು ಆಸನಗಳನ್ನು ಮಂಡಿಸಿದರು. ಇದೇ ಮ. ಸಿ ಸಭೆಯ ವಿಶೇಷ ಅಧಿವೇಶನವು! ಸಭೆಯ ಸಮಾಧಿಯನ್ನು ಕಟ್ಟುವಂಥ ಕೆಲಸಗಳ ಸದಗೆ ನೆರೆತ್ತು ಇದರಲ್ಲಿಯೇ ವಿಚಾರವಾಗತಕ್ಕದ್ದಿತ್ತು. ಕೆಲ್ಲ ಜಗಳಗಳೆಲ್ಲಯೂ ತಮ್ಮ ಮತ್ತು ತಮ್ಮ ಸ್ನೇಹಿತರಿಂದ ಎರವು ತಾದ ಆಯುಧಗಳನ್ನು (ಮತಗಳನ್ನು) ತೋರಿಸುತ್ತ ಯಾವಾಗ್ಗೆ ಸಭೆಗೆ ಎಸೆದೇವೆಂದು ಆತುರಗೊಂಡಿದ್ದರು. ಆದರೆ ಅವರಿಗೆ ತಮ್ಮ ಬಾಹುಪರಾಕ್ರಮವನ್ನು ತೋರಿಸುವಂಥ ಪ್ರಸಂಗವು ಜಾರಿಹೋಯಿತು. ಯಾಕೆಂದರೆ ಸಭೆಯ ಪ್ರಾರಂಭಕ್ಕೆ ಅಧ್ಯಕ್ಷರಾದ ಶ್ರೀ ಗುಡಿ ವಕೀಲರು ಸ್ಥಾನಾಪನ್ನರಾದ ಕೂಡಲೆ ಬೆಳಗಾವಿಯ ಶ್ರೀ [illegible] ರಾವ ಶೇಷಗಿರಿರಾಯರು ಸಭೆಯ ಮುಂದೆ ಬಂದ ಈ ಪ್ರಾಚೀನ ವಿಚಾರವನ್ನು ಮುಂದೆ ಹಾಕಬೇಕೆಂದು ಸೂಚನೆಯನ್ನು ತಂದರು. ಅದಕ್ಕೆ ಮುದ್ರಾಸಿನ ಶ್ರೀ [illegible] ಮೂರ್ತಿರಾಯರು ಅನುಮೋದಿಸಿದರು. ಸೂಚನೆಯು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಇವ್ಯಾಗವರೊಳಗೆ ಗದುಗಿನ ಶ್ರೀ [illegible] ಅನಂತರಾಯರು ಕಾರ್ಯದರ್ಶಿಗಳಿಗೆ [illegible] ಕಾರ್ಯದರ್ಶಿಗಳ [illegible] ಸಭೆಯು [illegible] ಅವ್ಯವಸ್ಥೆಯು [illegible]

ಅದೇ ರೀತಿ ಮೂರೂ ಮತದವರಿಗೂ ಸಮ್ಮತವಾಗುವಂಥ ಒಂದು ಯೋಜನೆಯನ್ನು ಹುಡುಕುವದಕ್ಕಾಗಿ ೩೦-೪೦ ಪ್ರಮುಖರ ಉಪಮಂಡಲವನ್ನು ನೇಮಿಸಿ ಮುಂದೆ ಬರುವ ಎಪ್ರೀಲ ತಿಂಗಳೊಳಗೆ ಬೆಂಗಳೂರಲ್ಲಿ ಒಟ್ಟಿಗೆ ಕಲೆತು ದೀರ್ಘವಾಗಿ ಆಲೋಚಿಸಿ ತಮ್ಮ ವರದಿಯನ್ನು ಅರ್ಪಿಸಬೇಕೆಂದು ಗೊತ್ತಾಯಿತು. ಈ ವರದಿಯು ಬಂದ ಮೇಲೆ ಮುಂದೆ ಮೇ ತಿಂಗಳಲ್ಲಿ ಮತ್ತೆ ಮ ಸಿ ಸಭೆಯ ವಿಶೇಷ ಅಧಿವೇಶನವು ತಿರುಪತಿಯಲ್ಲಿ ಕೂಡತಕ್ಕದ್ದೆಂದೂ ಅಲ್ಲಿ ಕೊನೆಯ ನಿರ್ಣಯವನ್ನು ಕೈಕೊಳ್ಳಬೇಕೆಂದೂ ಗೊತ್ತಾಗಿದೆ. ಇಂತು ಸಭೆಯು ಸಮಾಪ್ತಿ ಹೊಂದಿತು.

ಮುದ್ರಾಸದಿಂದ ಆಗಮಿಸಿದ ರಾಮಚಂದ್ರ [illegible] ರಾಜಾಚಾರ್, ಮೂರ್ತಿರಾವ, ವ್ಯಾಸರಾವ, [illegible] ಸುಬ್ರಾವ, [illegible] ಶಂಭಾಚಾರಿ, [illegible] ಜಾಲಿಹಾಳ, ಕಾತ್ರೇಲ, ಸಿರೋಳಕರ ಮೊದಲಾದ ನಮ್ಮ ಭಾಗದ ಪ್ರತಿಷ್ಠಿತರು ಉಪಹಾರಕ್ಕೆಂದು ಎದ್ದು ಒಳಗೆ ನಡೆಯಲು, "ಕನ್ನಡಿಗ" ಪತ್ರದ ಸಂಪಾದಕರು ಸಭೆಯಲ್ಲಿ ನಡೆದ ವೃತ್ತಾಂತದ ಮತ್ತು ಉಪಮಂಡಲದಲ್ಲಿರುವವರ ಹೆಸರುಗಳನ್ನು ತಿಳಿಯಬೇಕೆಂದು [illegible] ಸಭೆಯ ಕಾರ್ಯದರ್ಶಿಯ ಹತ್ತರ ಹೋಗಿ ತಮಗೆ ಬೇಕಾದದ್ದನ್ನು ಬರೆಕೊಳ್ಳಹತ್ತಿದರು. ಆ ವೇಳೆಯನ್ನು ಸಾಧಿಸಿ ಅವರ ಅಪ್ರಿಯವಾದ ಸ್ವಭಾವದ ಬರಹದಿಂದ ಉದ್ವಿಗ್ನರಾದ ಪತಿತ ಆಚಾರ ವರ್ಗವು ಅವರ ಮೇಲೆ ಹರಿಹಾಯ್ದು ಅಪಹಾಸ್ಯಕ್ಕೀಡಾದರು. ವಿಶೇಷವಾಗಿ ಪಂಡಿತರು ವೇದಮೂರ್ತಿಗಳಾದ ಪಾಂಡುರಂಗಿ ಕೃಷ್ಣಾಚಾರ್ಯರು ಅಗ್ನಿ ವಿವಾಹದ [illegible] ಶ್ರೀಗಳಿಗೆ ಪ್ರೀತ್ಯಾಸ್ಪದರು. [illegible] ಕೆಲವರ ಹೇಳಿಕೆ ಇಂಥವರು ಕೆಲವರಿಗೆ ಸಂಪಾದಕರ [illegible] "ನೀವು ಸುಳ್ಳು ಬರೆಯುವವರು" ನೀವೇಕೆ ನಮಗೆ ಕಳ್ಳು [illegible] ನಿಮಗೆ ಇಲ್ಲಿ ಬರಲಿಕ್ಕೆ ಅಧಿಕಾರವಿಲ್ಲ. ಹಾರಾಯಣ ಇವರ ಕೈಯೊಳಗಿನ ಕಾಗದಗಳನ್ನು ಕಸಿದುಕೊ, ಇವರಿಗ್ಯಾಕೆ ಕೊಟ್ಟಿ..........ಇವರೇ ಮೊದಲಾಗಿ ಗದರಿಸಹತ್ತಿ, ತಮ್ಮ ಅಂಗಾಂಗದಲ್ಲಿ ಬೇರಿಸಿದ "ದಬ್ಬು" ವೃತ್ತಿಯನ್ನು ಪ್ರಕಟಿಸಿದರು. ಇದಕ್ಕೆಲ್ಲ ಸಂಪಾದಕರು ಸೌಮ್ಯದಿಂದ "ಸ್ವಾಮಿಗಳೇ ಸುಳ್ಳು ಬರೆದದ್ದೇನು ತಾವು ತೋರಿಸಬಲ್ಲಿರಾ ? ಎಂದು ಕೇಳಿದರು. ಇದಕ್ಕಂತೂ ಆಚಾರ್ಯರ ಮತ್ತು ಅವರ ಶಿಷ್ಯರ ಸಿಟ್ಟಿಗೆ ಪಾರವೇ ಇಲ್ಲದಾಯಿತು. "ಆಹೋ ಪ್ರತಿ ಮಾತಾಡುತ್ತೀಯಾ ?" ಎಂದು ಎಲ್ಲರೂ ಸಂಪಾದಕರನ್ನು ಮುತ್ತಿದರು. ಅಷ್ಟರಲ್ಲಿಯೇ ಶ್ರೀ. 'ಕರ್ಮವೀರ' ತಿರುಮಲರಾಯರು ತಮ್ಮ ಕೈಯಲ್ಲಿ ಸಂಪಾದಕರನ್ನು ಅವಚಿಕ್ಕೊಂಡು ಕರೆದು ದೂರ ಬಿಟ್ಟರು. ಸಭಾ ದಳದ ಮೇಲಿನ ಸಂಕ್ರಾಂತಿಯು ಮುಗಿಯಿತು. ನೆರೆದ ಜನಕ್ಕೆಲ್ಲ ಏನ್ನರಾದರು? ಆಚಾರ್ಯರ ಈ ವರ್ತನದ ಬಗ್ಗೆ ಅನೇಕರು ಅನೇಕ ರೀತಿಯ ಉದ್ಗಾರಗಳನ್ನು ತೆಗೆದರು. ಅದರಲ್ಲಿ ಒಂದು "ವ್ಯಾಸರ ಶಿಷ್ಯರಾ ? [illegible]"

[illegible] ಕನ್ನಡಿಗ

THE ANKALIGI BANK LTD.

Head Office—
Kamankatta Dharwar
Branches
Ranebennur & *Hirekerur*

5%

Interest allowed on
ANNA SAVINGS BANK
DEPOSIT.

Dharwar 3-1-1927 } K B ANKALIGI Managing Director

ಧಾರವಾಡದಲ್ಲಿ
ಮೋಟಾರ ನಡೆಸುವದನ್ನು
ಕಲಿಯುವ ಸೋಯಿಯು.



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯವರ ವಿದ್ಯಾರ್ಥಿಯು ಜನರು ಈವರೆಗೆ ಪುಣೆ, ಬೆಳಗಾವಿ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವದು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಆಗಾಗಲೇ ಎಷ್ಟೋ ಜನರು ಶಿಕ್ಷಣ ಪಡೆಯುತ್ತಿದ್ದಾರೆ. ಪ್ರತಿ [illegible] ಕ್ಲಿಯೂ ನಿಯಮಿತ ಜನರನ್ನು ತಕ್ಕೊಳ್ಳಬೇಕಾಗಿದ್ದರಿಂದ ಕಲಿಯುವವರ ಹಿರಿಕಿರಿಯರಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಶೀಘ್ರವಾಗಿ ಅರ್ಜಿದಾರರಿಗಾಗಿ ಹತ್ತು ಜನರನ್ನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ವರುಷವು ಆ ಘಟಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು

ಪ್ರೊ. ಪ್ರಿ. ಎಸ ಇಟಗಿ.
ಮುನಸಪ ಕೋರ್ಟಿನ ಹತ್ತರ, ಧಾರವಾಡ.

ಶೀರೆ ಪತ್ತಲ! ಶೀರಿ!!

ಶ್ರೀದತ್ತ ವೀವ್ಹಿಂಗ್ ಮಿಲ್
ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಒಣ್ಣದ ನವಾಗಿ ಸುಂದರ ಶೀರೆಗಳು ಜಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಒಣ್ಣ ಪಕ್ಕಾ, ಒಣ್ಣ ಹೊಸದು. ಮಾಲ! ಶಿರಿ ತಕ್ಕೊಳ್ಳುವೆವು.

ಮಾಲಕ:— ಡಿ. ಜಿ. ಕಾಳೆ ಬ್ರದರ್.
ಕೊಪ್ಪಿಕರ ರೋಡ ಹುಬ್ಬಳ್ಳಿ

ಮೈಸೂರು ಊದುಬತ್ತಿ

ಇದ್ದ ಅಂಬರಬತ್ತಿ ಇದು ಒಳಗೆ ಸುವಾಸನೆಯುಳ್ಳದ್ದು. ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ. ಅಗ್ನೆ ಮುಹೂರ್ತಗಳಲ್ಲಿಯೂ ಮತ್ತು ಪ್ರತಿ ದಿವಸ ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ಕಡ್ಡಿಯ ನೇರು ೧ ಕ್ಕೆ ೨-೦-೦
ಕೃಷ್ಣದಾರಬಾಹ ಅಸ್ತರು ಹೋಲಿ ೧ ಕ್ಕೆ ೪-೦-೦

೧೯-೧೧-೨೬ ಮೈಸೂರ ಸ್ಟೋರ್,
ಬೆಳಗಾವಿಯವರಗಲ್ಲಿ,
ಹುಬ್ಬಳ್ಳಿ.

THE UNITED KARNATAK INSURANCE COMPANY LTD.
DHARWAR

ಸುಸಂಧಿ ಸ್ವರಿಮಾಡಿರಿ ಕಳೆದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ
ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ತಾನದ ಕಂಪನಿಯ ೭ನೇ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಜೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್‌ಎಲ್ ಬಿ ಸರಕಾರಿ ವಕೀಲ ಮತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಚೇರಮನ್

೨ ಡಾ|| ವಾಸುದೇವರಾವ ಶ್ರೀನಿವಾಸರಾವ ಉಮಚಗಿ ಎಲ್ ಎಮ್ ಆ್ಯಂಡ ಎಸ್ ಗದಗ
೩ ಮಿ|| ಶ್ರೀನಿವಾಸರಾವ ಕೆ ಹನಿರಾವ ಮುತಾಲೀಕದೇಸಾಯಿ ಬಿ ಎ ಅಣ್ಣಿಗೇರಿ
೪ ಮಿ|| ರಾಮಚಂದ್ರ ರಂಗೇಲ [illegible] ವರ್ತನದಾರ ಹಳೆ ಹುಬ್ಬಳ್ಳಿ
೫ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳ ಬಿ ಎ ಎಲ್‌ಎಲ್ ಬಿ ವಕೀಲ ಗದಗ
೬ ರ ನರಸಿಂಗರಾವ ದಾಸ ಕೃಷ್ಣರಾವ ಗಡದಹುಬ್ಬಳ್ಳಿ ವಕೀಲ ಮೈಲಹೊಂಗಲ
೭ ಮಿ|| ಅನಂತರಾವ ವೆಂಕಟೇಶ ದೇಸಾಯಿ ಬಿ ಎ ಎಲ್‌ಎಲ್ ಬಿ ವಕೀಲ ಹುಬ್ಬಳ್ಳಿ

ಕರ್ನಾಟಕದಲ್ಲಿ ಹೊರಟ ಇನ್‌ಶ್ಯೂರನ್ಸ ಕಂಪನಿಯಿಂದರೇ ಇದೇ ಮೊದಲನೆಯ ಈ ಕಂಪನಿಯ ಡಾಯರೆಕ್ಟರರೂ ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ ಪರದೇಶಿ ಕಂಪನಿಗಳಿಗೆ ಏಜಂಟರಾಗಿಯಾಗಲಿ ವಿಮಾ ಇಳಿಯಾಗಲಿ ನಮ್ಮ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಹುಟ್ಟಿ ಹೆಚ್ಚು ಪಡೆಯಬೇಕೆಂಬ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು

ಕಂಪನಿಯ ಶೇರುಗಳು ಮಾರಾಟಕ್ಕೆ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಮಾರ್ಚ ತಿಂಗಳ ೧ನೇ ತಾರೀಖಿನಿಂದ ಪ್ರಾರಂಭವಾಗುವದು ಶೇರುಗಳನ್ನು ಮಾರುವದಕ್ಕೂ ಮತ್ತು ವಿಮೆಯ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲಾ ದೊಡ್ಡ ದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು ಎಜನ್ಸಿ ಕರಾರುಗಳು ಸುಲಭ ಸವಲತ್ತುಗಳು ವಿಪುಲ ಮತ್ತು ಕಮಿಶನ ದರಗಳು ಲಾಭಕಾರಕವಾಗಿರುವವು ಏಜಂಟರಾಗಲಿಚ್ಛಿಸುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬೇಕು

ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು
ಕಟಿಂಗ ಸ್ಕೂಲ ಮುನವಳ್ಳಿ

ನಾವು ಬೆಳಗಾವಿ ಜಿಲ್ಲಾ ಸವದತ್ತಿ ತಾಲೂಕ ಮುನವಳ್ಳಿಯಲ್ಲಿ ಅಂದಿನವರ ಮತ್ತು ಇಂಗ್ಲಿಷ ಪದ್ಧತಿಯಂತೆ ಸಮಸ್ತ ಕಟಿಂಗ ಮತ್ತು ಟೇಲರಿಂಗ ಶಿಕ್ಷಣಕೊಡುವ ವರ್ಗ ತೆರೆದ್ದೇವೆ ಎರಡು ತಿಂಗಳಲ್ಲಿ ಕಟಿಂಗ ಅಂದರೆ ಅರುವೆ ಕತ್ತರಿಸುವದನ್ನು ಕಲಿಸುವೆವು ಕಟಿಂಗ ಮತ್ತು ಟೇಲರಿಂಗ ಎರಡೂ ನಾಲ್ಕು ತಿಂಗಳಲ್ಲಿ ಕಲಿಸುವೆವು ಕಟಿಂಗಕ್ಕೆ ೪೦, ಟೇಲರಿಂಗಕ್ಕೆ ೧೦ ರೂಪಾಯಿ ಫೀ ಬೀಳು ವದು. ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲಿಷ ಈ ಮೂರೂ ಬೇಕಾದ ಭಾಷೆಯಲ್ಲಿ ಕೊಡುವೆವು ವಿದ್ಯಾರ್ಥಿಯು [illegible] ವಿದ್ಯಾರ್ಥಿಯು ಸ್ಪಂತಕ್ಕಾಗಿ [illegible] ತಿಂಗಳಿಗೆ ಕನಿಷ್ಠ ೩೦ ರೂಪಾಯಿ ಗಳಿಸಬಲ್ಲನು ವಿಶೇಷ ಮಾಹಿತಿ [illegible] ಅರ್ಧ ಆಣೆಯ ಟಿಕೇಟ ಹಚ್ಚಿ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು

ಆರ್ ಬಿ ಮುಧೋಳಕರ
ಪ್ರಿನ್ಸಿಪಾಲ ಟೇಲರಿಂಗ ಸ್ಕೂಲ
ಮುನವಳ್ಳಿ

ಜಾಹೀರ ವಿನಂತಿಯು

——(o)——

ಕೆಳಗೆ ಸಹಿ ಮಾಡಿದವನು ಜನರಿಗೆ ಅಂದರೆ ಶೀರೆ, ಖಣ, ಉಪರಣೆ (ಸೇತ್ಯ ಕೋಯಿಂಬೋ ಮೇಡಿ) ಜರಿಯ ಶೀರೆಗಳಿಗೆ ಕಂಡು ಪಟ್ಟಿಗೆ ಪ್ಯಾವಾರದಲ್ಲಿ ೫೦-೬೦ ವರ್ಷಗಳಿಂದ ಅನುಭವಿಕರಿದ್ದು ಮೂಲಕ ಅವುಗಳನ್ನು ಖರೀದಿ ಮಾಡುವವರು ಧಾರಣೆಗಳಲ್ಲಿ ಒಣ್ಣಗಳಲ್ಲಿ ಇರುವ ಅಂತರಗಳನ್ನು ಅರಿಯದೆ ಮೋಸಹೋಗಿ ಹಿಂದುಗಡೆ ದುಃಖಿಸುವದು ಕಂಡುಬರುತ್ತದೆ. ಅದ್ದರಿಂದ ನಮ್ಮ ಮುಖಾಂತರ ಬೇಕಾದ ಜನರೆ ಪಟ್ಟಿಗೆ ಖರೀದಿ ಮಾಡಿ ಕೊಟ್ಟು ಯೋಗ್ಯ ಧಾರಣೆಯ ಚಿತಾವು ಮತ್ತು ಪಕ್ಕಾ ಒಣ್ಣದ ಜವಳಿ ಖರೀದಿ ಮಾಡಿದರೆ ಸುಲಭವಾಗಿ ದೊರೆಯುವು ಮತ್ತು ವೇಳೆಯು ಸಹ ಉಳಿಯುವದು. ತಿಳಿಯುವದು.

ತಾ|| ೧೧-೧ ೧೯೩೭ನೇ ಇಸ್ವಿ

ಸಹಿ ಗುರುರಾಯರಾವ ಕೃಷ್ಣರಾವ ಅದ್ದಾ,
ಜವಳಿ ಕಮಿಶನ ಏಜಂಟ್ಸ ಗದಗ
೧೯೩೦ ೧೯೩೭

ಬಾಲರಂಜನ

(ಶ್ಯಾಮ್ಮಣ್ಣದು ಬರೆದದ್ದು)

ದ್ವಿತೀಯ ಆವೃತ್ತಿ ಇದರ ಕನ್ನಡದ ಸುರಸ ಸ್ಪಷ್ಟ ಕಥೆಗಳ ಪುಸ್ತಕ ! ಚಿಕ್ಕ ಮಕ್ಕಳಿಗೆ ಹಿಮದ ಆಭರಣ ಮಾಡಿದಂತೆ ! ! ! ಶೀಘ್ರವಾಗಿ ಎಲ್ಲರೂ ಖರೀದಿ ಮಾಡಿರಿ ಒಂದು ಪ್ರತಿ ಬೆಲೆಯ ಹನ್ನೆರಡು ಆಣೆ ಟಪಾಲದ ಖರ್ಚು ಬೇರೆ ೩-೩-೩೦ರಂದು ಪ್ರಕಟವಾಗುವದು.

ಲಕಮನಹಳ್ಳಿ ಓಣಿ } ಆರ್ಡರಗಳಿಗಾಗಿ ವಿದ್ಯಾರ್ಥಿಗಳ ಗುಂಪಿನ ಹಾದಿ.
ಧಾರವಾಡ

ದಿ ಧಾರವಾಡ ಅರ್ಬನ ಕೋ
ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಿಯ ವಿಮೆ ಲಕ್ಷದ ಮೇಲುಂಟು, ಆಕ್ಷರ ಹುಂಡಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರಹ ಡಿಪಾಜಿಟಗಳಿಗೆ ಅನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದ್ದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

—(o)—

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಠರಾಯಿಸಿದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಮಕ್ಕಿಟ್ಟುಕೊಳ್ಳ [illegible] ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಲಟ್ಟೆ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿಕ್ಕ ಪತ್ರಕ್ಕೆ

೧೨ ತಿಂಗಳಿಗೆ	ರೂ.	೧-೨-೦
೬ ,,		೦-೬-೦
೪ ,,		೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ		೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವರ್ಗಣೀದಾರರಿಗೆ ಸೂಚನೆ

——X(o)X——

ಫೆಬ್ರುವರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಕ್ಕ ಮತ್ತು ವಾರ ಪತ್ರದ ವರ್ಗಣೀದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ವರ್ಗಣೀದಾರರು ವ್ಹಿ. ಪಿ. ಸ್ವೀಕರಿಸುವಾಗ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಲಿಯೇ ಹಿಂದೂಸ್ಥಾನದ ವಾತಾವರಣವನ್ನು ಗ್ರಾಹಿಸುವರೆಂದು ಕಂಡರು. ಸ್ವಾತಂತ್ರ್ಯ ದಿನದ ಉತ್ಸವದಲ್ಲಿ ಎಷ್ಟು ಪ್ರಕಾರದಿಂದ ಜನರು ಸೇರುವರು ಆದು ಕಾಂಗ್ರೆಸದವರನ್ನು ನಿರಾಶ ಪಡಿಸುವಂತೆ, ನಾಶ, ವಿನಾಶವಾಗ ಪಡೆಂದು ಆಳರಸರು ಧ ಪಿಸಿ, ಅದನ್ನು ಪ್ರಾತಃಕಾಲಟ್ಟರು. ಆದು ಪಾಮರಮೂರ್ಖರು ಊಂತೆ ಸ್ವರ್ಗ, ದ್ಯುತ್ಯ ಮತ್ತು ಪಾತಾಳಲೋಕಗಳನ್ನು ವ್ಯಾಪಿಸಿದ್ದನ್ನು ಕಣ್ಣಾರೆ ಕಂಡರು. ನಾಗಪೂರದ ನಾಗಗುಡಿಯು ದಬ್ಬಾಳಿಕೆಯು ದೊಡ್ಡ ದೊಡ್ಡ ಪಟ್ಟಣಗಳನ್ನಷ್ಟೇ ವ್ಯಾಪಿಸಿತ್ತು ಈ ಸ್ವಾತಂತ್ರ್ಯ ದಿನೋತ್ಸವವು ಹಳ್ಳಿಗಳನ್ನು ಸಹ ಬಿಡಲಿಲ್ಲ. ಮೆರವಣಿಗೆ ಮತ್ತು ಸಭೆಗಳಲ್ಲಿ ಸೇರಿದ ಜನರ ಸಂಖ್ಯೆಯು ಸಹಜವಾಗಿ ಕೋಟಿಯ ಸ್ವ...ರಿ ದಿವದು. ಸಭೆಗೆ ಹೋಗಲಿಕ್ಕಾಗದೆ, ಪೂರ್ಣ ಸಹಾನುಭೂತಿಯುಳ್ಳ ಜನರು ಎರಡು ಕೋಟಿಗಿಂತ ಹೆಚ್ಚಾಗಬಹುದು. ಸುಶಿಕ್ಷಿತರಾದಂಥ ಕೋಟಿ ನು ಕೋಟಿ ಜನರು ಸಕ್ಷದ ದಿನೆಯಿಂದ ಬ್ರಿಟಿಶರ ಪ್ರತಿರೋಧ ಬೆಳೆಸುವದೆಂದರೆ ಬ್ರಿಟಿಶರ ಈ ಬಡಿವಾರಕ್ಕೆ ಸಮ್ಮತಿಗೆ ಎಳ್ಳಷ್ಟು ಸಮ್ಮತವಿಲ್ಲೆಂದು ಸ್ಪಷ್ಟವಾಗಿ ಹೇಳಿದಂತಾಗುತ್ತದೆ.

ಮೂವತ್ತು ವರ್ಷಗಳ ಹಿಂದೆ ಲೋಕಮಾನ್ಯ ಟಿಳಕರ ಮೇಲೆ ರಾಜದ್ರೋಹದ ಮೊಕದ್ದಮೆ ಹಾಕಿದಾಗ ಪ್ರೀತಿಯ ಅಭಾವವೇ ರಾಜದ್ರೋಹವೆಂದು ಜಡ್ಜರಾಗಿದ್ದ ಸ್ಟ್ರ್ಯಾಚೀಸಾಹೇಬರು ರಾಜದ್ರೋಹದ ಅರ್ಥ ಮಾಡಿದರು. ಆ ಅರ್ಥ ಮತ್ತು ಈಗಿನ ಬಹಿರಂಗವಾದ ಸ್ವಾತಂತ್ರ್ಯದ ಕೋಲಾಹಲವನ್ನು ತಾಳನೆ ಮಾಡುವಂತೆ ಕೂಡ ಇರುವದಿಲ್ಲ. ತಾವು ಸ್ವತಂತ್ರರಾಗಬೇಕೆಂದು ಮನಸ್ಸಿನಲ್ಲಿ ನೆನೆದರೆ ಆ ಪ್ರಕಾರ ಭಾಷಣ ಮಾಡಿದರೆ ರಾಜದ್ರೋಹವಾಗುವದಿಲ್ಲೆಂದು ಬ್ರಿಟಿಶ ವಕೀಲರು ವಿರಾಟದ ಪ್ರಕರಣದಲ್ಲಿ ಉಸುರಿದ್ದಾರೆ. ಹಿಂದೀ ಜನರು ಸ್ವಾತಂತ್ರ್ಯಪ್ರಿಯರಾಗಿ, ಆ ಪ್ರಕಾರ ಸಭೆ ಮಾಡಿ, ವ್ಯಾಖ್ಯಾನ ಕೊಡುವದನ್ನು ರಾಜದ್ರೋಹವೆಂದೆಣಿಸಿ, ಅವರನ್ನು ನ್ಯಾಯಾಸನದ ಮುಂದೆ ನಿಲ್ಲಿಸಿ, ಕಾರಾಗೃಹಕ್ಕೆ ಕಳಿಸುವದಾದರೆ ನಾವು ನಿಮ್ಮ ಸಂಬಂಧವನ್ನೇ ಕಡಕೊಳ್ಳುವೆವೆಂದು ಅದೇ ಪಕ್ಷದ ಓರ್ವ ಪ್ರಬಲ ಮುಂದಾಳಾದ ವಿ. ಬ್ರಾಕವೇಸಾಹೇಬರು ಮಂತ್ರಿಗಳಿಗೆ ಭಯ ಹಾಕಿದ್ದಾರೆ. ಕಾಲಿಕಾರರಲ್ಲಿ ಸ್ವತಂತ್ರ ಪಕ್ಷವೆಂದೊಂದು ಪಂಗಡವಿದ್ದು, ಇವರು ಮಂತ್ರಿಗಳಿಗೆ ನೆರವಾಗದಿದ್ದರೆ ಮಂತ್ರಿಗಳ ಪಿಠಾಸನಗಳಿಂಗೇ ಎಷ್ಟೊ...ಬರುವದು. ಲೋಕಮಾನ್ಯ ಟಿಳಕರು ವಸಾಹಾತಿಕ ಸ್ವರಾಜ್ಯವೆಂದರೆ ಹೋಮರೂಲ ಬೇಕೆಂದರೆ. ಪುಣೆಯ ಕಲೆಕ್ಟರರು ಅವರ ಬಾಯಿಗೆ ಬೀಗ ಹಾಕಿದರು. ಈಗ ಸ್ವಾತಂತ್ರ್ಯ ಬೇಕೆಂದು ಸಂಗೂಂ ಸಾರಿದಂತೆ ಸಾವಿರಾರು ಜನರು ಸೇರಿ ಘೋಷುಗಳನ್ನು ಮಾಡುತ್ತಿದ್ದರೂ ರಾಜದ್ರೋಹವಾಗುವದಿಲ್ಲ. ಅವರ ಬಾಯಿಗೆ ಬೀಗ ಹಾಕುವಂಥ ಪುಣ್ಯಾತ್ಮರಾದ ಒಬ್ಬ ಕಲೆಕ್ಟರನೂ ಇಲ್ಲವಲ್ಲ!! ಆಕಾಶಕ್ಕೆ ಗೌಣಿ ಯನ್ನು ಹಾಕುವ ವಸಾಹಾತಿಕವನ್ನು ಯಾರು ನಡಸುವರು? ಹೀಗೆ ಮೂವತ್ತು ವರ್ಷಗಳಲ್ಲಿ ರಾಜದ್ರೋಹವೆಂಬುದು ಧೃತ್ತದ ಹುಳದಂತೆ ಸತ್ವಹೀನವಾಗಿರುತ್ತದೆ. ೧೨೪ ಎ ಕಲಮಿನ ಪ್ರಕಾರ ಅಲ್ಲಿಲ್ಲಿ ಜನರನ್ನು ಕಾರಾಗೃಹಕ್ಕೆ ಕಳಿಸುತ್ತಿದ್ದರೂ, ಅದು ಸಮುದ್ರದಲ್ಲಿಯ ಜಲಬಿಂದುವಿನಂತಾಗಿ, ದೇಶದ ತುಂಬ ಸ್ವಾತಂತ್ರ್ಯದ ಮತವೇ ದೀಪ್ತೋದಕ್ಕಾ ಹುಟ್ಟಿಕೊಳ್ಳಲಿದೆ. ಇದನ್ನು ತಡೆಯುವದೆಂದರೆ ಸಮುದ್ರದ ತೆರೆಗೆ ಒಡ್ಡು ಹಾಕುವಂಥ ಹುಚ್ಚುತನವೇ ಸರಿ.

ಮೈಸೂರವಾಸಿ ನೆಲವಡಿ ಫಕೀರಪ್ಪನವರ

ತೈಲಚಿತ್ರದ ಅನಾವರಣ ಸಮಾರಂಭವು.

——(೦)——

ಇಲ್ಲಿಯ ರಡ್ಡೀ ಸಹಕಾರೀ ಸಂಘದ ಚೇರಮನ್ನರೂ, ರಡ್ಡೀ ಜನಾಂಗದ ಉನ್ನತಿಗಾಗಿ ಹಗಲಿರುಳು ಪ್ರಯತ್ನಿಸಿದವರೂ ಆಗಿದ್ದ ಮೈಸೂರವಾಸಿ ಶ್ರೀ ಫಕೀರಪ್ಪ ನೆಲವಡಿ ಇವರ ತೈಲಚಿತ್ರದ ಅನಾವರಣ ಸಮಾರಂಭವು ಇದೇ ತಿಂಗಳ ೧೬ನೇ ತಾರೀಖು ಆದಿತ್ಯವಾರ ದಿವಸ ಇಲ್ಲಿರುವ ರಡ್ಡೀ ಬ್ಯಾಂಕಿನ ಉಪ್ಪರಿಗೆಯ ವೇಳಾಗುವದು. ಒಕ್ಕಲಿಗರ ಕಮಿಟಿಯ ಚೇರಮನ್ನರಾದ ಮಿ. ಮದನಸಾಹೇಬರು ಚಿತ್ರದ ಅನಾವರಣ ಮಾಡುವರು.

ಮರುದಿವಸ ಪ್ರಾತಃಕಾಲದಲ್ಲಿ ಬ್ಯಾಂಕಿನ ಸಾಂವತ್ಸರಿಕ ಸಭೆಯು ಕೂಡುವದು.

ಅಸೆಂಬ್ಲಿಯ ಜುನಾವಣಿ.

ಕಾಟ್ಟೆರ. ಲಿಂಗಾಯತ ಉಮೇದವಾರರು.

—)((೨) —)(—

ಒಬ್ಬರು ನಾಸ್ತಿಕ...ಒಬ್ಬರು ಆಸ್ತಿಕರು.

——(೦)——

ನಾಮುದಾರ ಬೆಳವಿ ಎಂಬ ರಾಜೇಸಾಹೇಬರಿಂದ ಕಿಂವಾದ ಅಸಿಸ್ಟಂಟ್ ಸ್ಥಳಕ್ಕಾಗಿ ಮಿ. ಸಂಕಾರ ವಕೀಲ ಧಾರವಾಡ, ಮಿ. ಕಳಕರವಕೀಲ ಬೆಳಗಾವಿ, ರಾ. ಬ. ಪಾಟೀಲ ದಾರವಾಡ ಮತ್ತು ಮಿ. ಹಿಪ್ಪರಗಿ ಪಾಟೀಲ ಬೆಳಗಾವಿ ಈ ಪ್ರಕಾರ ನಾಲ್ವರು ಉಮೇದವಾರರಾಗುವರೆಂದು ವರ್ತಮಾನವಾಗಿತ್ತು. ಮೊದಲು ಸಾಮುಂತಕರ ಮತ್ತು ಕಳಕರರು ತಮ್ಮ ಉಮೇದವಾರಿಯನ್ನು ರಹಿತ ಪಡಿಸಿದ್ದರಿಂದ, ಉಳಿದವರಿಬ್ಬರೇ ಉಮೇದವಾರರಾದರು. ಜನಾವನೆಯು ಒದವ ೧೧ನೆಯ ತಾರೀಖಿನ ದಿವಸವಾಗುವದು. ರಾ. ಬ. ಪಾಟೀಲರು ಬ್ರಾಹ್ಮಣೇತರ ಪಕ್ಷದವರಾಗಿದ್ದು, ಮಿ. ಹಿಪ್ಪರಗಿ ಪಾಟೀಲರು ರಾಷ್ಟ್ರೀಯ ಪಕ್ಷದವರಾಗಿ, ಪಂಡಿತ ಮಾಲವೀಯರವರ ಪಂಗಡದವರಾಗಿ ಅಸೆಂಬ್ಲಿಯಲ್ಲಿ ಕೆಲಸ ಮಾಡಸಲ್ಲವರು. ಈ ಬಗ್ಗೆ ಬೇಗನೆ ವಿಶೇಷವಾಗಿ ಬರೆಯುವೆವು.

ಯಾರು ಸುಳ್ಳು?

ಕ್ರೆರಾರರೋ? ಪಟೇಲರೋ?

—(೦)—

ಅಸೆಂಬ್ಲಿಯಲ್ಲಿ ಪೋಲಿಸ ಕಾವಲವಿಡುವ ವಿಚಾರವನ್ನು ತಾವು ದಿಲ್ಲಿಗೆ ಬರುವ ತನಕ ವ್ಯವಸ್ಥಾ ನಡಿಲ್ಲಿಡರೆಂದು ಲಾರ್ಡ ಆಯುರ್ವಿನಸಾಹೇಬರು ಹೋಂ ಮೆಂಬರರಾದ ಮಿ. ಕ್ರೆರಾರಸಾಹೇಬರಿಗೆ ತಾರು ಮಾಡಿದರು. ಈ ಬಗ್ಗೆ ನಿಮ್ಮ ಕೂಡ ಮಾತಾಡುವದದೆ. ಸಮಯ ಫ್ಯೂಟೀ ಎಂದು ನಾನು ಅಧ್ಯಕ್ಷ ಪಟೇಲರಿಗೆ ಟೆಲಿಫೋನಿನಿಂದ ಕೇಳಿದರೆ ಇದಕ್ಕೆ ನಿಮ್ಮ ಭೆಟ್ಟಿ ತಕ್ಕೊಳ್ಳಲಿಚ್ಛಿಸುವದಿಲ್ಲೆಂದು ಅವರು ಉತ್ತರ ಕೊಟ್ಟರು ನನ್ನದೇನು ತಪ್ಪೆಂದು ಕ್ರೆರಾರಸಾಹೇಬರು ಅಸೆಂಬ್ಲಿಯಲ್ಲಿ ಹೇಳಲು ಅವರ ಪಕ್ಷದ ಮೆಂಬರರು ಅಧ್ಯಕ್ಷರ ಫಜೀತಿಯಾಯಿತೆಂದು ಚಪ್ಪಾಳೆ ಹೊಡೆದು ಹಾಸ್ಯ ಮಾಡಿದರು. ಇದಕ್ಕೆ ಉತ್ತರ ಕೊಡುವದು ಶ್ರೀ. ಪಟೇಲರಿಗೆ ಅನಿವಾರ್ಯವಾಯಿತು. ಇವರು ಅಂದದ್ದೇನಂದರೆ

ಕ್ರೆರಾರಸಾಹೇಬರು ನನಗೆ ಟೆಲಿಫೋನ ಮಾಡಲೇ ಇಲ್ಲ ಕ್ರೆರಾರಸಾಹೇಬರ ಆಡಿಕೆಯು ತಪ್ಪಿನದೂ ಅಪೂರ್ಣವೂ ಆಗಿದೆ. ಅಧ್ಯಕ್ಷರಾದವರು ಯಾವನೊಬ್ಬ ಸಭಾಸದನಿಗೆ ಪಾಟಿ ಸವಾಲು ಹಾಕುವದು ಯೋಗ್ಯವಲ್ಲವಾದ್ದರಿಂದ ಇಂದು ನಾನು ಹೆಚ್ಚಿಗೆ ಹೇಳುವದಿಲ್ಲ. ಯೋಗ್ಯ ಸಮಯದಲ್ಲಿ ನಾನು ಈ ಬಗ್ಗೆ ವಿಶದವಾಗಿ ಹೇಳುವೆನು.

ಈ ಪ್ರಕಾರ ಶ್ರೀ ಪಟೇಲರು ಮಾಡಿದ ಭಾಷಣ ಕೇಳಿ, ಸಭೆ ತುಂಬ ನಗೆಯೂ ಚಪ್ಪಾಳೆಯ ಧ್ವನಿಯೂ ಆಗಿ, ಮೊದಲು ಚಪ್ಪಾಳೆ ಹೊಡೆದವರ ಮೋರೆ ನೋಡುವಂತಾಯಿತು.

ಲಂಡನದ ವಿವಿಧ ವಸ್ತು ಸಂಗ್ರಹಾಲಯದಲ್ಲಿ

ಬಾಂಬು

—(೦)—

ಲಂಡನದಲ್ಲಿರುವ ವಿವಿಧ ವಸ್ತು ಸಂಗ್ರಹಾಲಯವು ಜಗತ್ತಿನಲ್ಲಿ ದೊಡ್ಡದು. ಇದರಲ್ಲಿ ಅಪ್ರತಿಮ, ಅದ್ವಿತೀಯ ಮತ್ತು ಅಮೂಲ್ಯವಾದ ಅನೇಕಾನೇಕ ಪದಾರ್ಥಗಳುಂಟು. ಇದರಲ್ಲಿ ಹಿಂದುಸ್ಥಾನದಿಂದ ನೈಸ ಪದಾರ್ಥಗಳ ದೆಸೆಯಿಂದ ಸ್ವತಂತ್ರವಾದ ಭಾಗವುಂಟು. ಈ ಭಾಗದಲ್ಲಿ ಹೋದ ಶನಿವಾರದ ದಿವಸ ಯಾರೋ ಬಾಂಬು ಇಟ್ಟರು. ಹಿಂದೀ ವಿದ್ಯಾರ್ಥಿಗಳು ಬಾಂಬಿನ ಮಾತಾಡುತ್ತಿದ್ದದ್ದನ್ನು ಒಬ್ಬ ಸಾಹೇಬನು ಕೇಳಿ, ಕೂಡಲೆ ಈ ಸಂಗತಿಯನ್ನು ಅಲ್ಲಿಯ ಅಧಿಕಾರಿಗಳಿಗೆ ತಿಳಿಸಿದನು. ಅವರು ಒಂದು, ಬಾಂಬಿನ ಬತ್ತಿಯನ್ನು ತೆಗೆದು, ಅದು ಹಾರದಂತೆ ಮಾಡಿದರು. ಪೋಲಿಸರೂ ಒದರು ಯಾರು ಇಟ್ಟಿರಬಹುದೆಂದು ತಪಾಸು ನಡೆಸಿದ್ದಾರೆ. ಲಂಡನದಲ್ಲಿ ಓದುವದಕ್ಕಾಗಿರುವ ವಿದ್ಯಾರ್ಥಿಗಳು ಸ್ವಾತಂತ್ರ್ಯದ ಭಾಷಣ ಮಾಡುತ್ತಿದ್ದು, ಇವರ ವಿಚಾರಗಳು ತೀರ ರಾಜ್ಯಕ್ರಾಂತಿಯವಾಗಿರುತ್ತವೆಂದೂ ಇವರೇ ಬಾಂಬು ಇಟ್ಟಿರಬೇಕೆಂದೂ ಅಲ್ಲಿಯ ವರ್ತಮಾನಪತ್ರಗಳು ಕೂಗಾಡ ಹತ್ತಿವೆ.

ಮಸ್ತಾಗಿರಿ! ಸ್ವರಿಮಾಡಿ!! ನೋಡಿ ಆನಂದಪಡಿರಿ!!! ಮೋಸ ಹೋಗಬೇಡಿರಿ!!!!

ನವೀನ ತರದ ಬಯಲಾಟಕ್ಕೆ ಮರುಳಾಗಬೇಡಿರಿ.

ಮಹನೀಯರೇ!

ನೀವು ನಿಜವಾಗಿಯೂ ಗಂಧದ ಕಡ್ಡಿ ಸುಗಂಧ ದ್ರವ್ಯಗಳಿಂದ ಆನಂದ ವಿಲಾಸಗಳನ್ನು ಹೊಂದಬೇಕೆಂದಿರುವಿರೇನು? ಹಾಗಾದರೆ ಈಗಿನ ಪೇಟೆಂಟ್ ಚಕ್ರಕ್ಕೂ ಮತ್ತು ಮೇಲ್ಮಾಸನೆಗೂ ತವರುಮನೆಯೆಂದು ಪ್ರಸಿದ್ಧಿಪಡೆದಿರುವ ಬೂಟಾಟಿಕೆಯ ನವೀನ ತರದ ಗಂಧದಕಡ್ಡಿ ಸುಗಂಧ ದ್ರವ್ಯಗಳಿಂದ ದೂರಾಗಿರಿ. ಸುವಾಸನೆಯೆಂಬ ಸಾಗರದಲ್ಲಿ ಆನಂದಪಡಲು ಅಪೇಕ್ಷೆ ಇದ್ದರೆ, ನಮ್ಮಲ್ಲಿ ಪೂರ್ವದಿಂದಲೂ ಪ್ರಸಿದ್ಧವಾಗಿ ರಾಜಾಸ್ಥಾನಗಳಿಂದಲೂ ದೊಡ್ಡ ದೊಡ್ಡ ಸದ್ಗೃಹಸ್ಥರಿಂದಲೂ ಮೆಡಲ್, ಸರ್ಟಿಫಿಕೇಟುಗಳನ್ನು ಪಡೆದು ಹೆಸರುವಾಸಿಯಾಗಿರುವ ನಮ್ಮ ಗಂಧದಕಡ್ಡಿ ಸುಗಂಧ ದ್ರವ್ಯಗಳನ್ನು ಒಮ್ಮೆ ತರಿಸಿ ಪರೀಕ್ಷಿಸಿ ನೋಡಿದರೆ ನಿಮಗೇ ವ್ಯಕ್ತವಾಗುವುದು.

ಮತ್ತು ನಾವು ಸರ್ವ ಶಿರೋವೇದನೆಗೂ ಮತ್ತು ಪ್ರತಿದಿನದ ಉಪಯೋಗಕ್ಕೂ ಕಾಮಧೇನುವಿನಂತಿರುವ ಹೊಸ ತರಹದ ಸುವಾಸನೆಯುಳ್ಳ ತೈಲಗಳನ್ನೂ ಮತ್ತು ಸರ್ವ ಚರ್ಮರೋಗಗಳನ್ನು ನಿವಾರಿಸುವ ರಾಜಾತೈಲವೆಂಬುದನ್ನೂ ಹೊಸದಾಗಿ ಬಹು ಶ್ರಮದಿಂದ ಕಂಡುಹಿಡಿದು ಎಷ್ಟೋ ಸದ್ಗೃಹಸ್ಥರಿಗೆ ಸಪ್ಲೈ ಮಾಡುತ್ತಾ ಅವರಿಂದ ಹೆಸರನ್ನು ಪಡೆದಿರುತ್ತೇವೆ. ಪ್ರಯುಕ್ತ ಈ ಸುಸಮಯವನ್ನು ಕಳೆದುಕೊಳ್ಳದೆ, ಸ್ವರಿತವಾಗಿ ತರಿಸಿ ಆನಂದವನ್ನು ಹೊಂದುವದಲ್ಲದೆ, ಸರ್ವರೋಗದಿಂದಲೂ ಮುಕ್ತರಾಗಲು ಧಾವಿಸಿ ಬನ್ನಿ.

ಹೆಚ್ಚು ವಿಚಾರಗಳನ್ನು ಕಂಪನಿಯಿಂದಾಗಲಿ ಇಲ್ಲವೆ ನಮ್ಮ ಹರಿಹರ ಏಜಂಟರಾದ ದ್ಯಾಮಪ್ಪ ಪುರಾಣಿಕ ಇವರಿಂದಾಗಲಿ, ತಿಳಿದುಕೊಳ್ಳಬಹುದು.

ಮೈಸೂರ ಅಂಬರ ಫ್ಯಾಕ್ಟರಿ ಸಂತೇಪೇಟೆ ನಂ ೯೯೩. ಎಂ ಎಸ್ ಮಹಮದಸಾಹೇಬ ಅತ್ತಾರಸಾಹೇಬ ಗೋಲ್ಡ ಮೆಡಲಿಸ್ಟ ಮೈಸೂರ

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ವಾಗೀಜನ ಮೇಲೆ

ಗಿರಣಿಯ (ಶೇರ್ಸು) ಮತ್ತು ದಿ ಬ್ಯಾಂಕ ಆಫ್ ಬರೋಡಾ ಲಿಮಿಟೆಡ್ (ಶೇರ್ಸು) ಸಿಗುವವು. ಪ್ರತಿ ತರದ ಸಲುವಾಗಿ ಬಂದು ಆಗಿಯ ಪೋಸ್ಟ ಸ್ಟ್ಯಾಂಪು ಕಳಿಸಿ ಕೊಡಿರಿ. ದೊಡ್ಡ ದೊಡ್ಡ ಶಹರಗಳಲ್ಲಿ ಪಗಾರ ಮತ್ತು ಕಮೀಶನ್‌ದ ಮೇಲೆ ಕೆಲಸ ಮಾಡುವವರು ಬೇಕು.

ಬೊಂಬೆ ತಂತಿಯ ಪತ್ತೆ "ಮನಿಲೆಂಡ"

ಟೆಲಿಫೋನ, ಫೋನ ನಂಬರ

ಪಿ. ಡಿ ಘಾಟಪಾಂಡೇ (ಬೆಂಕರ)
ಕೇಸರ ಬಾಗ ಗೋಲ್ಡ ಮೋಹರ ಮಡಿವ
ಪೋಸ್ಟ ಬೋಕ್ಸ ನಂಬರ ೯೫೫೧,
ದಾದರ, ಬೊಂಬೈ

(೧) ರಾಣೆಬಿನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಬಗ್ಗೆ ಗಣೇಶ ಶಂಕರ ಜೋಶಿ ಇವರನ್ನು ನಾವು ಏಜಂಟರನ್ನಾಗಿ ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ನಮ್ಮ ವ್ಯವಹಾರವನ್ನು ಇವರ ಹತ್ರ ಮಾಡುವದಕ್ಕೆ ಹರಕತ್ತು ಇಲ್ಲಾ.

ಪೂರ್ಣ ಗುಣ ಕೊಡುವಂಥ ಡಬ್ಬಿಯ ಬೆಲೆ ೫ರೂ ಟ ಖ ೧|| ಆಣೆ

ರಜಿಸ್ಟರ್ಡ ಸ್ತ್ರೀಧರ್ಮ ಸಂಜೀವಿನಿ ಚೂರ್ಣ:— ರಜೋದೋಷ ಎಲ್ಲ ತರದ ಪ

ಸಂಜೀವನೀ ಔಷಧಾಲಯದಲ್ಲಿ ತಯಾರಿಸಿದ

ಸ್ತ್ರೀಪುರುಷರ ಎಷ್ಟೋ ರೋಗದ ಮೇಲೆ ಅತ್ಯುತ್ತಮ ಗುಣ ಕೊಡುವಂಥ ಔಷಧಗಳು

ರಜಿಸ್ಟರ್ಡ ಪುರುಷತ್ವ ಸಂಜೀವನೀ ಚೂರ್ಣ:— ಈ ಚೂರ್ಣವು ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಇದ್ದು ಬಹಳ ತೆಳ್ಳಗಿದ್ದ ಧಾತುವನ್ನು ಕೂಡಲೇ ಘಟ್ಟಿ ಮಾಡುತ್ತದೆ ಸ್ವಪ್ನಾವಸ್ಥೆ ಮತ್ತು ಲಘವಿಯಲ್ಲಿ ಹೋಗುವಂಥ ಧಾತುಕ್ಕೆ ತತ್ಕಾಲಕ್ಕೆ ಪ್ರತಿಬಂಧ ಆಗುತ್ತದೆ ಹಸ್ತಕ್ರಿಯೆಯಿಂದ ಮತ್ತು ಬಹಳ ಸ್ತ್ರೀಲಂಪಟದಿಂದ ಉಂಟಾದ ನಾಮರ್ದತನವು ಶಕ್ತಿ ಕ್ಷೀಣತೆಯು ಕಾವೆ (ಚ್ಚೆ) ಆದ ಕೂಡಲೆ ಧಾತು ಪತನವಾಗೋಣ ಧಾತುಸ್ಥಾನದಲ್ಲಿಯ ಉಷ್ಣತೆಯು ಅಶಕ್ತತೆಯು ಮುಂತಾದ ದೋಷಗಳು ಸಮೂಲ ನಾಶವಾಗಿ ಕರಶುದ್ಧಿಯಾಗುತ್ತದೆ ಹಸಿವಿ ಶಕ್ತಿ ಮತ್ತು ಶರೀರದ ತೂಕವು ಹೆಚ್ಚುತ್ತದೆ ಮತ್ತು ಶರೀರವು ವಜ್ರದಂತೆ ಸದೃಢವಾಗಿ ಗರ್ಭಧಾರಣಕ್ಕೆ ಯೋಗ್ಯವಾದಂಥ ವೀರ್ಯವನ್ನುಂಟುಮಾಡುತ್ತದೆ ೨೧ ದಿವಸಗಳವರೆಗೆ ಪೂರೈಸುವಷ್ಟು ದರ ಟೊಂಕದಲ್ಲಿ ಕಳ ಬರೋಣ ಉಷ್ಣತೆ ಮುಟ್ಟಾದಿಕೆ ಸೂಲಿ ಕ್ಷೀಣತೆ ಮುಂತಾದ ರೋಗಗಳಿಂದ ಅಥವಾ ಅನ್ಯಕಾರಣದಿಂದ ಗರ್ಭಾಶಯದಲ್ಲಿ ದೋಷವಿದ್ದರೆ ಸ್ತ್ರೀಯರ ಸ್ವಾಭಾವಿಕ ಧರ್ಮವು ಕೆಟ್ಟು ಮುಟ್ಟಾಗುವದು ನಿಂತು ಅಥವಾ ಅನಿಯಮಿತವಾಗೋಣ ಗರ್ಭವು ಉಳಿಯದಿರೋಣ ಗರ್ಭ ಪತನವಾಗೋಣ ಅಶಕ್ತ ಸಂತತಿಯಾಗೋಣ ಅಥವಾ ಆಗಿ ಸಾಯೋಣ ಮುಂತಾದ ಪ್ರಕಾರಗಳಾಗುತ್ತವೆ ಆದರೆ ಅತ್ಯುತ್ತಮ ಗುಣಕೊಡುವಂಥ ಸ್ತ್ರೀಸಂಜೀವಿನಿಯ ೨೧ ದಿವಸಗಳವರೆಗೆ ಪೂರೈಸುವಷ್ಟು ಒಂದೇ ಡಬ್ಬಿಯನ್ನು ಮೇಲ್ಕಾಣಿಸಿದ ದೋಷಗಳಿದ್ದ ಸ್ತ್ರೀಯರಿಗೆ ಕೊಟ್ಟರೆ ಗರ್ಭಾಶಯದಲ್ಲಿಯ ಮತ್ತು ಶರೀರದಲ್ಲಿಯ ಎಲ್ಲ ದೋಷಗಳು ಕಡಿಮೆಯಾಗಿ ಮುಟ್ಟಾಗುವದು ನಿಯಮಿತವಾಗುವದು ಗರ್ಭಪಾತವಾಗದೆ ಹುಡುಗರು ಸಶಕ್ತ ನಿರೋಗಿ ಮತ್ತು ದೀರ್ಘಾಯುಗಳಾಗುತ್ತಾರೆ ೪೦ ವರ್ಷದ ಸ್ತ್ರೀಯರಿಗೆ ಸಹ ಖಾತ್ರಿಯಿಂದ ಗರ್ಭಧಾರಣವಾಗುತ್ತದೆ ಡಬ್ಬಿಯ ಕ್ರಯ ೩ ರೂ ಟ ಖ ೦||

ಯಾವದೇ ಡಬ್ಬಿಗಳನ್ನು ಬೇಡುವರಿಗೆ ಅಂಚೆವೆಚ್ಚವನ್ನು ತಕ್ಕೊಳ್ಳಲಿಕ್ಕಿಲ್ಲ ಪಥ್ಯ ಇಲ್ಲ ಶಾಸ್ತ್ರಮತ್ತು ಪವಿತ್ರ ರೀತಿಯಿಂದ ಎಷ್ಟೋ ವನಸ್ಪತಿಗಳಿಂದ ತಯಾರ ಮಾಡಿದ ಈ ಔಷಧಗಳು ಖಾತ್ರಿಯಿಂದ ಗುಣ ಕೊಡುವಂಥವು ಇರುತ್ತವೆ. **ಬೇರೆ ಎಷ್ಟೋ ನಕಲೀ ಔಷಧಗಳನ್ನು ಸೇವಿಸಿ ಮೋಸಗೊಂಡವರು ವಿಶ್ವಾಸವಿಟ್ಟು ಒಂದು ವೇಳೆ ಅವಶ್ಯವಾಗಿ ಈ ಔಷಧವನ್ನು ತರಿಸಿಕೊಂಡು ಅನುಭವವನ್ನು ಪಡೆಯಿರಿ** ಬೇಕಾದಂಥ ರೋಗದ ಸವಿಸ್ತರ ಹಕೀಕತ ಪತ್ರದ್ವಾರದಿಂದ ಪೂರ್ಣ ಮಾಹಿತಿಯನ್ನು ಕೊಟ್ಟರೆ ರಾಮಬಾಣ ಔಷಧದ ಯೋಜನೆಯನ್ನು ಮಾಡುವದರಲ್ಲಿ ಬರುವದು ನಮ್ಮ ಅಥವಾ ನಿಮ್ಮ ವಿಳಾಸವನ್ನು ಸ್ವಚ್ಛವಾಗಿ ಬರೆಯಿರಿ.

ಸಂತತಿ ಪ್ರತಿಬಂಧಕ ಚೂರ್ಣ.

ಸ್ತ್ರೀಯರು ಮೇಲಿಂದಮೇಲೆ ಹಡೆಯುವದರಿಂದ, ಅವರಲ್ಲಿ ಭಯಂಕರವಾದ ಅಶಕ್ತತೆಯುಂಟಾಗುತ್ತದೆ ಬಡತನ ಅಥವಾ ಸಾಕಷ್ಟು ಮಕ್ಕಳಾದವು ಇನ್ನು ಸಾಕೆನ್ನುವಂಥವರು ಈ ಚೂರ್ಣ ತರಿಸಿಕೊಳ್ಳಬೇಕು ಈ ಚೂರ್ಣದಿಂದ ಸಂಸಾರ ಸುಖಕ್ಕೂ ಶರೀರಕ್ಕೂ ಯಾವತರದ ಆತಂಕ ಹತ್ತದೆ, ಕೂಡಲೆ ಗರ್ಭಧಾರಣೆಯು ನಿಂತುಹೋಗುತ್ತದೆ ಅನಂತ ಏನು ಮಾಡಿದರೂ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಬರುವ ಡಬ್ಬಿಗೆ ನಾಲ್ಕು ರೂಪಾಯಿ ಬೆಲೆ ಬೀಳುವದು ವ್ಹಿ. ಪಿ. ಹಾಸಲು ಎಂಟಾಣೆ

ಪತ್ತೆ:— ಮ್ಯಾನೇಜರ ಸಂಜೀವನೀ ಔಷಧಾಲಯ ಪೋಸ್ಟ ಮಿರಜ— S. M. C.

ಜಾಹಿರಾತ.

ತಿವಾರಿ ಮತ್ತು ಕಂಪನಿಯ ನೀಲಿ ಕಪ್ಪು ಮಸಿ ಪುಡಿಗಳು ೧೩ ಆಣೆಗೆ ೧೨೦ ಪುಡಿ ೧ ಡಝನ ಸೀಸಕೆಲಿ ಇನಾಮು ೬|| ರೂಪಾಯಿಗೆ ೫೦೦ ಪುಡಿ ೧ ದಿ ಟೈಂಪೀಸ ಇನಾಮು ೫|| ರೂಪಾಯಿಗೆ ೫೦೦ ಪುಡಿ ೧ ... ಇನಾಮು ೭ ರೂಪಾಯಿಗೆ ೧೦೦೦ ಪುಡಿ ೧ ರಸ್ಟವಾಚ ಸಿಸ್ಟಿಮ ಲಿವ್ಹರ ವಾಚ ಇನಾಮು ಬೇಡಾವರೆ ೮ ಆಣೆಗೆ ೧೨೦ ಪುಡಿ ಕೊಡುವೆವು ಟಪಾಲು ಖರ್ಚ ಬೇರೆ ಬೀಳುವದು ೫೦೦ ಅಥವಾ ೧೦೦೦ ಪುಡಿ ಬೇಡುವವರು ೧ ರೂಪಾಯಿ ಅಡ್ವಾನ್ಸ ಕಳಿಸಬೇಕು ವ್ಯಾಪಾರಸ್ಥರಿಗೆ ಭರ್ಪೂರ ಕಮಿಶನ್ನ ಕೊಡುವೆವು.

ಪತ್ತೆ— ಯಚ್. ಬಿ ತಿವಾರಿ ಮತ್ತು ಕಂಪನಿ ಧಾರವಾಡ.

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಮಾಧ್ವರ ಸಭೆಯ ತಹಕೂಬಿ.

ಈಸ್ಟರಲ್ಲಿ ಬೆಂಗಳೂರಲ್ಲಿ ಕಮಿಟಿ.

ಮಂಗಳವೇಡೆಯ ಶ್ರೀನಿವಾಸರಾಯರಿಗೆ ಒಡೆತ.

—)(—(೦)—)(—

ವಿಜಾಪೂರದಲ್ಲಿ ಆದಿತ್ಯವಾರ ದಿವಸ ಕೂಡಿದ ಮಾಧ್ವರ ಕಮಿಟಿಯಲ್ಲಿ ಬಹುವಾಗಿ ಚರ್ಚೆ ನಡೆದು, ರಾಜಿಗಾಗಿ ವಿಶೇಷ ವಿಚಾರವು ಬೆಂಗಳೂರಲ್ಲಿ ಈಸ್ಟರ ರಜೆಯಲ್ಲಿ ಸೇರಬೇಕೆಂದು ಗೊತ್ತಾಗಿ, ಸದ್ಯ ತಹಕೂಬ ಮಾಡಲ್ಪಟ್ಟಿತು ಮತ್ತು ಈ ಬಗ್ಗೆ ಒಂದು ಉಪಮಂಡಲವೂ ನೇಮಿಸಲ್ಪಟ್ಟಿತು.

ಸಭೆಯ ತಹಕೂಬಿಯ ನಿರ್ಣಯದ ನಕಲನ್ನು ಬರಕೊಳ್ಳುವದಕ್ಕೆ ಮೂಲಪ್ರತಿಯನ್ನು ಇಸಗೊಳ್ಳುವದಕ್ಕೆ ಸಭೆಯ ಕಾರಕೂನರ ಕಡೆಗೆ ಕನ್ನಡಿಗದ ಸಂಪಾದಕರಾದ ಶ್ರೀ ಮಂಗಳವೇಡೆ ಶ್ರೀನಿವಾಸರಾಯರು ಹೋಗಲು- ಈಗಿನ ಸ್ವಾಮಿಗಳು ದೇಹವಿಟ್ಟನಂತರ ಮುಂದೆ ಸ್ವಾಮಿಗಳಾಗುವರೆಂದು ಅನ್ನಲ್ಪಟ್ಟ ಪಾಂಡುರಂಗಿ ಕೃಷ್ಣಾಚಾರ್ಯರು ನೀವು ಮಠದ ವಿರುದ್ಧ ಸಿಕ್ಕಂತೆ ಬರಿಯುತ್ತೀರೆಂದು ಮುಂದಿನ ಕಂಪು ಶಾಟಿಯ ಒದಲಾಗಿ ಈಗಿನ ಬಿಳೇ ಶಾಟಿಯನ್ನಪ್ಪಳಿಸಿ, ರಾಯರಿಗೆ ಬಾಯಿಗೆ ಬಂದಂತೆ ಬೈದು, ಹೊಡೆಯಲುದ್ಯುಕ್ತರಾದರು. ಸಿಕ್ಕ ಸಿಕ್ಕ ಹಾಗೆ ಆರೋಪ ಹೊರಿಸಬೇಡಿರಿ ನನ್ನದಾವದೂ ಸಟಿಯಿಲ್ಲ. ದಿಟವಾಗಿರುತ್ತದೆಂದು ರಾಯರು ಆಚಾರ್ಯರಿಗೆ ಉತ್ತರ ಕೊಟ್ಟು ಅವರನ್ನು ನಿರುತ್ತರ ಮಾಡುತ್ತಿರುವಾಗ, ಹಾನಗಲ್ಲಿನ ಮಾಮಲೇದಾರರಾಗಿ ರಜೆಯ ಮೇಲಿರುವ ಮಿ ಕಡಕೋಳ ತ್ರಿಮಲರಾಯರು ಶ್ರೀ ಶ್ರೀನಿವಾಸರಾಯರನ್ನು ಆ ಮಾತನೆಗವಿ ದಬ್ಬಿಹಾಕಿದರು ಶ್ರೀಮಂತರು ದೊಡ್ಡ ಮನೇತನದವರು, ಪ್ರಸಿದ್ಧ ವರ್ತಮಾನಪತ್ರಕಾರರು ಆದಂಥ ಶ್ರೀ ಶ್ರೀನಿವಾಸರಾಯರ ಮೇಲಾದ ಈ ಹಲ್ಲೆಯು ಹೇಯವಾದದ್ದಿರುತ್ತದೆ ಎಲ್ಲ ವರ್ತಮಾನಪತ್ರಕಾರರು ಆಚಾರ್ಯರ ವರ್ತನವನ್ನು ನಿಷೇಧಿಸಬೇಕೆಂದು ನಿನ್ನಿನ ದಿವಸಕ್ಕೆ ವಿಜಯಕ್ಕೆ ಬಂದ ತಾರಿನ ವರ್ತಮಾನವಾಗಿರುತ್ತದೆ

ಜನರಲ್ಲಿ ಸರಕಾರದ ವಿರುದ್ಧ ಅಪ್ರಿಯ ಮತ್ತು ತಿರಸ್ಕಾರವನ್ನು ಹುಟ್ಟುವಂಥ ಕೃತಿ ಮಾಡುತ್ತೀರಿ. ಆದ್ದರಿಂದ ನಿಮ್ಮ ಮೇಲೇಕೆ ಕಲಸನಡಿಸಬಾರದೆಂದು ಪಾಟಣಾ ಕೌನ್ಸಿಲ ಮೆಂಬರರಾಗಿದ್ದ ಶ್ರೀ ಕೃಷ್ಣವಲ್ಲಭ ಶಾಹಿ ಇವರ ಮೇಲೆ ನೋಟೀಸು ತೆಗೆದಿದ್ದಾರೆ.

———

ರೇಲ್ವೆಯಿಂದ ಗಿರಣಿ ಬಟ್ಟೆಗಳ ಪ್ರದರ್ಶನ.

———(೦)———

ಮುಂಬಯಿಯ ಗಿರಣಿಗಳ ವ್ಯಾಪಾರಕ್ಕೆ ಬಂದ ಮಂದಿಯನ್ನು ತಪ್ಪಿಸುವದಕ್ಕಾಗಿ ಗಿರಣಿಗಳ ಒಡೆಯರು ಉತ್ತರ ಹಿಂದುಸ್ಥಾನದಲ್ಲಿ ತಮ್ಮ ಬಟ್ಟೆಗಳ ಪ್ರದರ್ಶನವನ್ನು ರೇಲ್ವೆಯ ಮುಖಾಂತರ ನಡೆಸಿದ್ದಾರೆ ಇದಕ್ಕಾಗಿ ಜಿ ಆಯ. ಪಿ ರೇಲ್ವೆಯಲ್ಲಿ ಸ್ಪೇಶಲ ಬಂಡಿಯನ್ನು ಮಾಡಿಸಿದ್ದು, ಇದಕ್ಕೆ ನಾಲ್ವತ್ತು ಸಾವಿರ ರೂಪಾಯಿ ವೆಚ್ಚ ಬಂದಿದೆ. ಈ ಬಂಡಿಯು ಈಗ ಪ್ರವಾಸಕ್ಕೆ ಹೊರಟಿದ್ದು, ಇದನ್ನು ನೋಡಲು ದಿಲ್ಲಿಯಲ್ಲಿ ಲಾರ್ಡ ಆಯರ್ವಿನಸಾಹೇಬರೇ ಮೊದಲಾಗಿ ಮುನಸ್ಸು ಜನ ಪ್ರತಿಷ್ಠಿತರು ಬಂದಿದ್ದರು. ಚಮತ್ಕಾರವೇನಂದರೆ- ಗಿರಣಿಗಳ ಒಡೆಯರು ಅಂಗಾಲಿನಿಂದ ತಲೆಯತನಕ ಧರಿಸಿದ ಬಟ್ಟೆಗಳೆಲ್ಲ ವಿಲಾಯತಿಯವಾಗಿರುತ್ತವೆ. ಖಾದಿಯಂತಿರಲಿ, ತಮ್ಮ ಅರಿವೆಯನ್ನೇ ತಾವುಗೆ ಉಡತೊಡಲಿಕ್ಕೆ ನಾಚಿಕೆಪಡುವಂಥವರು ಪರರ ಸಹಾಯವನ್ನು ಹೇಗೆ ಅಪೇಕ್ಷಿಸುವದು?

———

ಮುಂಬಯಿಯಲ್ಲಿ ಗಿರಣಿಗಳ ಹುಟ್ಟುವಳಿಗೆ ಬಂದ ಮಂದಿಯು

–(೦)—

ಮುಂಬಯಿಯಲ್ಲಿಯ ಗಿರಣಿಗಳಲ್ಲಿ ಹುಟ್ಟುವ ಬಟ್ಟೆಗಳಿಗೆ ಗಿರಾಕಿಯಿಲ್ಲದ್ದರಿಂದ ಪೆಟಿಟ ಮನೇತನದವರು ತಮ್ಮ ನಾಲ್ಕು ಗಿರಣಿಗಳನ್ನು ಮಾರ್ಚತಿಂಗಳ ೧ನೆಯ ತಾರೀಖಿನಿಂದ ಬಂದುಮಾಡುವಂತೆ ನೋಟೀಸು ಹಚ್ಚಿದ್ದಾರೆ. ಈ ಗಿರಣಿಗಳಲ್ಲಿ ೧೫೦೦೦ ಕೂಲಿಕಾರರಿದ್ದು, ಅವರೆಲ್ಲರೂ ಒಂದೇ ದಿವಸ ಇಂದ್ರಾಯತಕ್ಷೆ ಕಾಯ ಸ್ವಾಹಾಃ ಎಂಬಂತೆ ಅನ್ನಕ್ಕೆ ಎರವಾಗುವರು ಉಳಿದ ಗಿರಣಿಯವರು ತಿಂಗಳಲ್ಲಿ ಒಂದುವಾರ ಬಂದಿಡುವರು ಬಂದಿಡುವದಕ್ಕೆ ಹಬ್ಬದ ರಜೆ ಎಂಬ ಬಹುದೊಡ್ಡ ಹಸರು ಕೊಟ್ಟಿದ್ದಾರೆ.

———

ರಶಿಯದ ಕೂಡ ದ್ವೇಷವೂ ಇಲ್ಲ
ರಶಿಯದ ತತ್ವಗಳಿಗಾಗಿ ವಿರೋಧವೂ ಇಲ್ಲ

—[](೦)[]—

ಮೀರತದ ಆರೋಪಿಗಳ ವಿಚಾರಣೆಯು ಸೆಶನ ಕೋರ್ಟಿನಲ್ಲಿ ಪ್ರಾರಂಭವಾಯಿತು ಕೋರ್ಟಿಗೆ ವಿಚಾರಣೆಯ ಅಧಿಕಾರ ಹುಟ್ಟುವದಿಲ್ಲೆಂದು ಆರೋಪಿಗಳ ವಕೀಲರು ಪ್ರಾರಂಭದಲ್ಲಿ ತೆಗೆದ ಆಕ್ಷೇಪಣೆಯನ್ನು ಜಡ್ಜರು ತೆಗೆದುಹಾಕಿದರು ಆ ನಂತರ ಸರಕಾರೀ ವಕೀಲರು ಆರೋಪದ ಸ್ವರೂಪ ಹೇಳುವಾಗ ಇಂಗ್ರೇಜಿ ಸರಕಾರಕ್ಕೆ ರಶಿಯಾದ ಕೂಡ ದ್ವೇಷವಿಲ್ಲ; ಬೊಲ್ಸೆವಿಕ ತತ್ವಗಳ ಬಗ್ಗೆ ವಿರೋಧವೂ ಇಲ್ಲ. ಆರೋಪಿಗಳು ಬಾದಶಹರ ಹಿಂದುಸ್ತಾನದಲ್ಲಿಯ ದೊರೆತನವನ್ನು ಬುಡಮೇಲು ಮಾಡಲಿಕ್ಕೆ ಪ್ರಯತ್ನಿಸಿದ್ದರಿಂದ ಈ ವಿಚಾರಣೆ ಇರುತ್ತದೆಂದು ಹೇಳಿ, ರಶಿಯಾ ಮತ್ತು ರಶಿಯಾದ ಬೊಲ್ಸೆವಿಕ ತತ್ವಗಳ ಬಗ್ಗೆ ಆದರ ತೋರಿಸಿ, ರಶಿಯರ ಪ್ರೀತಿ ಸಂಪಾದಿಸುವಂಥ ಕೃತ್ಯ ಮಾಡಿದರೆಂದು ಸ್ಪಷ್ಟವಾಗುತ್ತದೆ.

———

ಬೋಲ್ಸೆವಿಕರ ರಾಷ್ಟ್ರೀಯ ವ್ಯಾಪಾರ.

ರಾಷ್ಟ್ರದ ಸಂಪತ್ತಿನ ಉಪಯೋಗವು ಸಾಮಾನ್ಯವಾಗಿ ರಾಷ್ಟ್ರಕ್ಕೆ ಆಗಬೇಕೆಂಬ ಉದ್ದೇಶದಿಂದ ರಶಿಯಾ ಸರಕಾರದವರು ಈ ಕೆಳಗೆ ಹೇಳಿದ ಪದಾರ್ಥಗಳ ವ್ಯಾಪಾರವನ್ನು ಖಾಸಗೀ ವ್ಯಾಪಾರಸ್ಥರಿಂದ ತಮ್ಮ ಕಯ್ಯಲ್ಲಿ ತಕ್ಕೊಳ್ಳುವಂತೆ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

೧ ಧಾತು, ೨ ಗಿರಣಿಗಳ ಬಟ್ಟೆ, ೩ ರಸಾಯನ ದ್ರವ್ಯಗಳು ೪ ವಿದ್ಯುತ್ತಿನ ಯಂತ್ರಸಾಮಗ್ರಿಗಳು, ೫ ರೆಡಿಯೋ ೬ ಉಪಕರಣಗಳು, ೭ ಕಲ್ಲೆಣ್ಣೆ, ೮ ಸಕ್ಕರೆ, ೯ ಉಪ್ಪು ೧೦ ದೀಪದ ಕಡ್ಡಿ ೧೧ ತಂಬಾಕ, ೧೨ ಸಿಗರೇಟು

ಇವನ್ನು ಸರಕಾರದವರು ಮತ್ತು ಸಹಕಾರೀ ಸಂಘದವರು ಮಾತ್ರ ಮಾರತಕ್ಕದ್ದು.

———

ಸ್ವಾತಂತ್ರ್ಯದ ವಿರುದ್ಧ ಮವಾಳ ಮುಸಲಮಾನರ ಚಳವಳಿಯು

—(೦)—

ಸ್ವಾತಂತ್ರ್ಯದ ಕಾಯದೆಭಂಗದಿಂದ ದೇಶದಲ್ಲಿ ಅನಾಯಕತನವಾಗಿ, ರಕ್ತಪಾತವಾಗುವದೆಂದೂ, ಇದು ರಾಷ್ಟ್ರದ ಹಾನಿಗೆ ಕಾರಣವಾಗುವದೆಂದೂ ಮುಂಬಯಿಯ ಮವಾಳ ಮುಸಲಮಾನರು ಹೇಳಿ, ಅದರ ವಿರುದ್ಧ ಇಲಾಖೆಯ ತುಂಬ ಚಳವಳಿ ಮಾಡಬೇಕೆಂದು ಒಂದು ಕಮಿಟಿ ಕೂಡಿಸಿದ್ದಾರೆ. ಇವರಿಗೆ ವಿರುದ್ಧವಾಗಿ ರಾಷ್ಟ್ರೀಯ ಪಕ್ಷದವರೂ ಹೊರಡುವರು.

ಸಾಯಮನ್ನ ಕಮೀಶನದ ರಿಪೋರ್ಟ ಪ್ರಸಿದ್ಧವಾದ ನಂತರ ಮುಸಲಮಾನರ ಹಕ್ಕು ಬಾಧ್ಯತೆಗಳ ವಿಚಾರ ಮಾಡಲೋಸುಗ ಲಾಹೋರಿನಲ್ಲಿ ತಮ್ಮದೊಂದು ಸಭೆ ಕೂಡಿಸಬೇಕೆಂದು ಉತ್ತರ ಹಿಂದುಸ್ಥಾನದ ಮುಸಲಮಾನರು ಈಗಿನಿಂದಲೇ ಏರ್ಪಾಡು ಮಾಡುತ್ತಲಿದ್ದಾರೆ ಮುಂಬಯಿಯ ಸರ್ ಇಬ್ರಾಹಿಮ ರಹಿಮತುಲ್ಲಾಸಾಹೇಬರು ಇದರ ಅಧ್ಯಕ್ಷರಾಗುವರು.

———

ಪ್ಲೇಗಿನಂತೆ ವೈಲಿಯಿಂದ ಭಯಂಕರ ಮರಣಗಳು.

—)೦)—

ಮುಂಬಯಿ ಇಲಾಖೆಯಲ್ಲಿ ಪ್ಲೇಗಿನಂತೆ ವೈಲಿಯಿಂದ ಮರಣಗಳಾಗುತ್ತಿರುವವು. ಹೋದವಾರದಲ್ಲಿ ಈ ಇಲಾಖೆಯಲ್ಲಿ ೩೬೫ ಜನರಿಗೆ ವೈಲಿ ಎದ್ದು, ೭೧೬ ಜನರು ಸತ್ತರು. ಕರ್ನಾಟಕ ಭಾಗದ ಅಂಕಿಗಳು ಮುಂದೆ ಕೊಟ್ಟಂತಿರುತ್ತವೆ.

ಜಿಲ್ಲೆ-	ಬಂದದ್ದು-	ಸತ್ತದ್ದು-
ಧಾರವಾಡ-	೭೦	೬
ಬೆಳಗಾವಿ-	೫೮	೧
ವಿಜಾಪೂರ-	೯೧	೪
ಕಾರವಾರ-	೧೦	೧

ಧಾರವಾಡ ಜಿಲ್ಹೆಯಲ್ಲಿ ರಾಣೇಬಿನ್ನೂರ, ಬೆಳಗಾವಿಯಲ್ಲಿ ಚಿಕ್ಕೋಡಿ, ವಿಜಾಪೂರದಲ್ಲಿ ಇಂಡೀ ತಾಲೂಕಿನಲ್ಲಿ ವೈಲಿಯ ಉಪಟಳವು ಹೆಚ್ಚಿರುತ್ತದೆ

ಹಪ್ತೆಯ ವಸೂಲಿ ತಹಕೂಬಿ

ಕಾಯದೇಭಂಗದ ಭಯ

—(೦)—

ಗುಜರಾಥದಲ್ಲಿ ಮಮದಾಬಾದ ತಾಲೂಕಿನಲ್ಲಿ ಕಾಯದೆಭಂಗ ಮಾಡಬೇಕೆಂದು ಸರದಾರ ಪಟೇಲರು ನಡೆಸಿದ ಪ್ರಯತ್ನಕ್ಕೆ ವಿಘ್ನ ತರಬೇಕೆಂದು ಸರಕಾರದವರು ಉದ್ಯೋಗ ನಡೆಸಿದ್ದಾರೆ. ಈಗಾದ ರಿವ್ಹಿಜನವನ್ನು ರಹಿತಪಡಿಸಿ, ಡಿಪುಟಿಕಲೆಕ್ಟರರಿಗೆ ಪುನಃ ಸ್ವತಂತ್ರ ವಿಚಾರದಿಂದ ರಿವ್ಹಿಜನ ಮಾಡಲು ಹುಕುಮ ಮಾಡಿದ್ದು, ಅವರು ಈ ತೆರವಾಗಿ ವಿಚಾರಮಾಡಿ, ರಿಪೋರ್ಟು ಬರೆಯುತ್ತಿದ್ದಾರೆ. ಸರಕಾರದಲ್ಲಿ ಇದರ ವಿಚಾರಣೆಯಾಗುವತನಕ, ಹಪ್ತೆಯ ವಸೂಲಿಯನ್ನು ತಹಕೂಬ ಮಾಡಬೇಕೆಂದು ಕಲೆಕ್ಟರರು ಗ್ರಾಮಸ್ಥರಿಗೆ ಹುಕುಮು ಮಾಡಿದ್ದಾರೆ.

ಪುನಃ ಅನ್ನವರ್ಜ-

ತುರಂಗದಲ್ಲಿಯ ತಮ್ಮ ಬೇಡಿಕೆಯನ್ನು ಒಂದು ವಾರದಲ್ಲಿ ಪೂರ್ಣ ಮಾಡದಿದ್ದರೆ- ಪುನಃ ಅನ್ನ ಬಿಟ್ಟು ಪ್ರಾಯೋಪವೇಶನೆಯನ್ನು ಮಾಡುವಂತೆ ಭಗತಸಿಂಗನು ಸರಕಾರಕ್ಕೆ ತಿಳಿಸಿದ್ದಾನೆ ಇವರ ವಿಚಾರಣೆಯಲ್ಲಿ ನಾಲ್ಕು ನೂರು ಸಾಕ್ಷಿಗಳುಂಟು ಕೆಲ ಸಾಕ್ಷಿಗಳನ್ನು ತೆಗೆದು ಹಾಕಬೇಕೆಂದು ಸರಕಾರ ಪಕ್ಷೀಯರು ಹಾಯಕೋರ್ಟಿಗೆ ಅರ್ಜಿ ಕೊಟ್ಟಿದರು ಆದರೆ ಜಡ್ಜರು ಇದಕ್ಕೆ ಒಪ್ಪಲಿಲ್ಲ ವಿಚಾರಣೆಯು ಒಂದು ವರ್ಷದತನಕ ನಡೆಯುವದೆಂದು ಹೇಳುತ್ತಾರೆ,

ಇಂಗ್ರೇಜಿ ಮತ್ತು ರಾಷ್ಟ್ರೀಯ ನಿಶಾನೆಯ ಜಗಳದ ದೆಸೆಯಿಂದ ಇಂಜನಿಯರಿಂಗ ಕಾಲೇಜ ಹಾಳು ಬಿತ್ತು.

ಲಾಹೋರದಲ್ಲಿರುವ ಇಂಜನಿಯರಿಂಗ ಕಾಲೇಜದ ವಿದ್ಯಾರ್ಥಿಗಳು ತಮ್ಮ ಅಂಗಿಗೆ ರಾಷ್ಟ್ರೀಯ ನಿಶಾನೆಯ ಲಾಕೆಟ ಹಚ್ಚಿ ಅದರ ಬುಡದಲ್ಲಿ ರಾಷ್ಟ್ರೀಯ ನಿಶಾನೆಯು ಜಯವಾಗಲಿ, ಬ್ರಿಟಿಶ ನಿಶಾನೆಯು ಅಧಃಪಾತವಾಗಲೆಂಬ ಉಕ್ತಿಯನ್ನು ಬರೆದಿದ್ದರು. ನೀವು ರಾಷ್ಟ್ರೀಯ ಲಾಕೇಟು ಹಚ್ಚಿರಿ; ಯುನಿಯನ್ನ ಜಾಕದ ಅಧಃಪತನವಾಗಲೆಂಬ ವಾಕ್ಯ ಮಾತ್ರ ತೆಗೆಯಿರೆಂದು ಪ್ರಿನ್ಸಿಪಾಲರು ಇವರಿಗೆ ಉಪದೇಶ ಮಾಡಿದರು ವಿದ್ಯಾರ್ಥಿಗಳು ಇದಕ್ಕೆ ಒಪ್ಪಲಿಲ್ಲ. ಹಿಂದೀ ವಿದ್ಯಾರ್ಥಿಗಳಿಗೆ ಮುಯ್ಯವೆಂದು ಯುರೋಪಿಯನ್ನ ವಿದ್ಯಾರ್ಥಿಗಳು ತಮ್ಮ ಟೊಪ್ಪಿಗೆಗೆ- ಯುನಿಯನ್ನ ಜಾಕದ ನಿಶಾನೆ ಹಚ್ಚಿಕೊಂಡು ಬರಲಾರಂಭಿಸಿದರು ಇದು ಎರಡೂ ಜನಾಂಗಗಳ ದ್ವೇಷಕ್ಕೂ ರೋಷಕ್ಕೂ ಅಸೂಯಕ್ಕೂ ಕಾರಣವಾಯಿತು. ಹಿಂದೀ ವಿದ್ಯಾರ್ಥಿಗಳಿಗೆ ಶಿಕ್ಷೆ ಎಂದು ಯುರೋಪಿಯನ್ನರಾದ ಪ್ರಿನ್ಸಿಪಾಲರು ಒಬ್ಬನನ್ನು ಹೊರಗೆ ಹಾಕಿದರು. ಈ ಅನಾಹುತ ಕಂಡು ಎಲ್ಲ ವಿದ್ಯಾರ್ಥಿಗಳು ಸಂಪು ಮಾಡಿ, ಕಾಲೇಜವನ್ನು ಹಾಳಗೆಡವಿದ್ದಾರೆ. ಸರಕಾರವು ಮಧ್ಯಸ್ಥಿಮಾಡಿ, ಸಂಪು ಸತ್ಯಾಗ್ರಹವನ್ನು ನಿಲ್ಲಿಸದಿದ್ದರೆ- ಪಂಜಾಬ ಇಲಾಖೆಯಲ್ಲಿರುವ ಎಲ್ಲ ಕಾಲೇಜಗಳಲ್ಲಿ ಸಂಪು ಮಾಡಿಸುವಂತೆ ವಿದ್ಯಾರ್ಥಿಗಳ ಸಂಪದ ಅಧ್ಯಕ್ಷರು ಸರಕಾರಕ್ಕೆ ತಿಳಿಸಿದ್ದಾರೆ

ಗಿರಣಿಯಲ್ಲಿ ಯುರೋಪಿಯನ್ನ ಮೇನೇಜರನು ಬೇಡ.

—(೦)—

ಖಂಡಾಳೆಯ ಘಟ್ಟದಲ್ಲಿ ಬಿದ್ದು ಸತ್ತಂಥ ನರೋತ್ತಮ ಮುರಾರಜಿಯವರ ಗಿರಣಿಯು ಸೊಲ್ಲಾಪೂರದಲ್ಲುಂಟು. ಇದರ ಪಾರಪತ್ಯಗಾರಿಕೆಗಾಗಿ ಒಬ್ಬ ಗೌರಕಾಯಸ್ಥನನ್ನು ನೇಮಿಸಬೇಕೆಂದು ವಿಚಾರ ನಡೆದಿದೆ. ಸ್ವರಾಜ್ಯ ಸ್ವಾತಂತ್ರ್ಯದ ದಿವಸಗಳಲ್ಲಿ ನಮ್ಮ ತಲೆಯ ಮೇಲೆ ಪರಕೀಯನು ಬೇಕಾಗಿರುವದಿಲ್ಲೆಂದು ಗಿರಣಿಯ ಕೂಲಿಕಾರರು ಸಂಪು ಮಾಡಿದ್ದಾರೆ. ಮಿ. ಭೋಪಲೆಯವರ ಅಧ್ಯಕ್ಷತೆಯಲ್ಲಿ ಕೂಲಿಕಾರರ ಸಭೆಯಾಗಿ ಎಂಟು ಗೊತ್ತುವಳಿಗಳು ಮಾಡಲ್ಪಟ್ಟವು. ಮುರಾರಜಿ ಕಂಪನಿಯೇ ಗಿರಣಿಯ ವ್ಯವಸ್ಥಾಪಕರಾಗಬೇಕು. ಮಾಲೀಕರು ಈ ರಾಷ್ಟ್ರೀಯ ವ್ಯವಸಾಯವನ್ನು ಪರಕೀಯರ ವಶ ಮಾಡಬಾರದು ಗಿರಣಿಯ ಸಂರಕ್ಷಣೆಗಾಗಿ ಸ್ವಾರ್ಥತ್ಯಾಗ ಮಾಡಲು ಕೂಲಿಕಾರರು ಸಿದ್ಧರಿದ್ದಾರೆ ಗಿರಣಿಯನ್ನು ಪರಕೀಯರ ಕಯ್ಯಲ್ಲಿ ಕೊಡುವದು ರಾಷ್ಟ್ರದ್ರೋಹವಾಗುತ್ತದೆಂದು ಠರಾವಿನ ಮುಖ್ಯ ಸಂಗತಿಗಳಾಗಿವೆ.

ಹುಬ್ಬಳ್ಳಿಯ ಶಿವಜಯಂತ್ಯುತ್ಸವವು

—(೦)—

ವಾಡಿಕೆಯ ಪದ್ಧತಿಯಂತೆ ಈ ವರ್ಷ ಮಾರ್ಚ ತಿಂಗಳ ೧೫ ರಿಂದ ೧೮ ರ ತನಕ ಶ್ರೀ ಶಿವಾಜಿ ಮಹಾರಾಜರ ಜಯಂತ್ಯುತ್ಸವದ ಬಗ್ಗೆ ಅಂಗಸಾಧನೆಯ ಪಂದ್ಯಗಳೂ, ಉಪನ್ಯಾಸಗಳೂ ನಡೆಯುವವು. ಇದರಲ್ಲಿ ಕರ್ನಾಟಕದಲ್ಲಿಯ ಎಲ್ಲ ಜಿಲ್ಹೆ ಮತ್ತು ದಕ್ಷಿಣ ಮಹಾರಾಷ್ಟ್ರದ ಎಲ್ಲ ಸಂಸ್ಥಾನಗಳ ವಿದ್ಯಾರ್ಥಿಗಳು ಸೇರಬೇಕೆಂದು ಪ್ರಕಟನೆಯು ಪ್ರಸಿದ್ಧವಾಗಿದೆ ಕರ್ನಾಟಕ ಬೇರೆ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು ಬೇರೆ ಎಂದು ಭೇದ ಮಾಡುವ ಮರಾಟಿಯ ಅಭಿಮಾನವನ್ನು ಕನ್ನಡ ನಾಡಿನಲ್ಲಿರುವ ದುರಭಿಮಾನಿ ಮರಾಟಿಗರು ಬಿಟ್ಟುಬಿಡಬೇಕೆಂದು ನಾವು ಸೂಚಿಸುತ್ತೇವೆ. ಸಾಂಗಲಿ, ಮಿರಜಿ, ಜಮಖಂಡಿ, ಕುರುಂದವಾಡ, ಮುಧೋಳ ಇವೆಲ್ಲ ಕನ್ನಡ ನಾಡಿನಲ್ಲಿದ್ದು, ಇವಕ್ಕೆ ದಕ್ಷಿಣ ಮಹಾರಾಷ್ಟ್ರವೆಂದು ಹೇಳಿ, ಸಂಸ್ಥಾನಗಳ ಕನ್ನಡತ್ವವನ್ನು ನಷ್ಟ ಪಡಿಸಿ, ಮರಾಟಿಯ ಮೇಲ್ಮೆ ಮಾಡಲೆಣಿಸುವ ಈ ಅರಭ್ಯ ಪಂಡಿತರಿಗೆ ದೂರಿಂದಲೇ ಶರಣು!! ಬೇಕೆಂದು ಕೆದರಿ ಜಗಳ ತೆಗೆಯುವದೇಕೆ ?

ಸ್ವದೇಶದ ಬಟ್ಟೆಗಳನ್ನೇ ಕೊಳ್ಳಬೇಕು.

——)(೦)(——

ಕೆಮಾಲ ಪಾಶ್ಯಾನ ಪ್ರಶಂಸನೀಯವಾದ ವರ್ತನವು

—(೦)—

ತುರ್ಕಸ್ಥಾನದಲ್ಲಾಗುವ ಬಟ್ಟೆಯನ್ನೇ ಧರಿಸಬೇಕು ಪರದೇಶದ ಅರಿವೆಯನ್ನು ಮುಟ್ಟಬಾರದೆಂದು ಕೆಮಾಲ ಪಾಶ್ಯಾನು ನಿಶ್ಚಯಿಸಿ, ತಪ್ಪ ಕಾರ ತನ್ನ ದೇಶದಲ್ಲಾದ ಬಟ್ಟೆಯನ್ನೇ ಧರಿಸಲಾರಂಭಿಸಿದ್ದಾರೆ ದರಬಾರಿಗಳು ಇವನನ್ನು ಅನುಸರಿಸಿದ್ದಾರೆ ಹಿಂದುಸ್ಥಾನದ ಸಂಸ್ಥಾನಿಕರೆಂತು?

ಜಿ. ಆಯ ಪಿ. ರೇಲ್ವೆಯ ಕೂಲಿಕಾರರ ಸಂಪು ಮೊನ್ನಿನಿಂದ ಪ್ರಾರಂಭವಾಗಿದ್ದು ಮುಂಬಯಿ ಮತ್ತು ಕಲ್ಯಾಣದ ಎಲ್ಲ ಬಂಡಿಗಳು ಬಂದಾದವು ಮದ್ರಾಸ ಮತ್ತು ಪುಣೆಯ ಬಂಡಿಗಳು ಇಲ್ಲಿಯೋ ಗೋತೀ ಹೊಡೆಯುತ್ತಿರುವವು ಈ ಬಗ್ಗೆ ನಾಳಿನ ಸಂಚಿಕೆಯಲ್ಲಿ ವಿಶೇಷವಾಗಿ ಬರೆಯುವೆವು.

ಜಾಹೀರ ನೋಟೀಸು

— (?) —

ರಾ|| ರಾ|| ಆಕ್ಷಿವ್ವಾ ಸಣ್ಣ ಹುರವ್ವಾ ಜಾಗೀರ ಸಾ|| ಗದಗ ಇವರಿಗೆ—

ತಮಗೆ ಸಹಿ ಮಾಡಿದವರಿಂದಾ ತಿಳಿಸುವದೇ ನಂದರೆ— ನೀನು ನನ್ನ ಲಗ್ನದ ಗಂಡಸಿದ್ದು ಅಲ ವಾಸ ಹುಗ ೧ ವರುಷ ಆಗಾಯಿತ ನೀನು ದು ಶ್ವ್ಯಸನಕ್ಕೆ ಬಿದ್ದು ನನ್ನನ್ನು ತವರಮನೆಯಲ್ಲಿ ಬಿ ಟ್ಟು ಗದಿಗ್ಗೆ ಹೋಟೆ.ಗೋದಿ ನನಗೆ ತವರಮನಿ ಯಲ್ಲಿಯೂ ನನ್ನ ಅಣ್ಣನು ನಿನ್ನ ಮಾತು ಕೇಳಿ ಹೊಡಿದು ಬಡಿದು ಹೊರಗೆ ಹಾಕಿದನು ಅದ್ದರಿಂ ದಾ ನಿನಗೆ ಪಳಗಡಿಗೆ ನಾಲ್ಕು ಮಂದಿ ಸಂಭಾ ವಿತರ ಕೂಡ ಹೇಳಿ ಕಳಿಸಿದನು ಅದಕ್ಕೆ ನೀನು ಏನೇಟುವದನ್ನು ಹೇಳಿ ಕಳಿಸಲಿಲ್ಲಾ ಇದು ಅ ಲ್ಲದೆ ಪಳಗಡಿಗೆ ನಿನ್ನ ಹೆಸರಿಗೆ ೧ ಪಾಕಿಟಿನಲ್ಲಿ ರಜಿಸ್ಟರದಿಂದ ನೋಟೀಸು ಬರೆದು ಕಳಿಸಿದೆನು ಅ ದನ್ನು ನೀನು ಸ್ವೀಕಾರ ಮಾಡಲಿಲ್ಲಾ ಅದ್ದರಿಂದಾ ಈಗ ಜಾಹೀರ ನೋಟೀಸು ಕೊಡುವ ಭಾಗವಿನ್ನು ತುತ್ತು ಇದು ಅಲ್ಲದೆ ಇಲ್ಲಿ ನನ್ನ ಹೊಟ್ಟೆಯ ಸ ಲುವಾಗಿ ಸಾವುಕಾರರಲ್ಲಿ ೧೫೦ ರೂಪಾಯಿ ಸಾಲಾ ಮಾಡಿರುತ್ತೇನೆ ಆ ಸಾವಕಾರರ ತ್ರಾಸ ಬಹಳ ಆಗುವದು ಅದ್ದರಿಂದಾ ಮೇಲೆ ಕಾಣಿಸಿದ ರೂ ಪಾಯಿಗಳನ್ನು ತೆಗೆದುಕೊಂಡು ಬಂದು ಸಾಲಾ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ನನ್ನ ಸಾಲಾ ಪಗ್ಗರೆ ತೀರಿಸಿ ಕರಕೊಂಡು ಹೋಗಬೇಕು ಬರ ನೀನು ಮುದ್ದತಕ್ಕೆ ಬಾರದಿದ್ದರೆ ನಾನು ಬೇರೊ ಬ್ಬನನ್ನು ಉಡಕಿ ಮಾಡಿಕೊಳ್ಳುತ್ತೇನೆ ಈ ವೇಳೆ ನನ್ನ ಮೇಲೂ ವ ನನ್ನ ಉಡಕಿ ಗಂಡನ ಮೇಲೂ ನಿನ್ನದು ಯಾವ ತಂಟೆ ಹಕ್ಕು ಉಳಿಯಲಿಕ್ಕಿಲ್ಲಾ ಇದೇ ಸೋಡಚೀಟಿ ಅಂತಾ ತಿಳಿಯಬೇಕು ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲಿರುತ್ತದೆ

ತಾ|| ೮-೨-೧೯೩೦ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಬಸಲಿಂಗ ವ್ವಾ ಕೋಮ ಆಕ್ಷಿವ್ವಾ ಜಾಗೀರ ಇಕಿದು ಇರು ತ್ತದೆ

ಕಂಪೋಜಿಟರನು

—X—(೧)—X—

ಬೇಕಾಗಿದ್ದಾನೆ. ಇಂಗ್ಲಿಷ ಮತ್ತು ಕನ್ನ ಡ ಬಲ್ಲವನಿದ್ದರೆ— ಹಲೋಲು. ಸಂಬಳ ಮೊ ದಲಾದ್ದರ ಬಗ್ಗೆಯಿಂದ ಸಮಕ್ಷಮ ಅಥವಾ ಪತ್ರ ದ್ವಾರದಿಂದ ತಿಳಕೊಳ್ಳಬೇಕು.

ಬೀದರಾಬಾದ ಮಹೀಂದ್ರಕರ ಫೋಟೋಗ್ರಾಫರ, ಹುಬ್ಬಳ್ಳಿ

ಅನೇಕ ಔಷಧಗಳನ್ನು ಸೇವಿಸಿ ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಗಂಟು, ಬಿಳಿ, ಅಥವಾ ಯಾವುದೇ ಬಣ್ಣದ ಸೆರಗು ಹೋಗುವ ರೋಗಗಳಿಗೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇಗನೆ ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ಮನಸ್ಸಿ ಗಳ ಅದ್ಭುತ ಪ್ರಭಾವ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾ ಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಶಾಂತಾಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

☞ ಅತಿ ಶೀಘ್ರ ಗುಣವಾಗ್ಗೆ ಬೇಕಾದ ಪಥ್ಯ... ... ಈ ಔಷಧವನ್ನು ... ...

ನೋಟೀಸು

—(೧)—

ನಿಂಬವ್ವಾ ಕೋಮ ನೀಲವ್ವಾ ಅಣ್ಣಿಗೇರಿಯ ವರ ಸಾಕೀನ ಪುಮಹಗಿ ತಾಲ್ಕು ಹುಬ್ಬಳ್ಳಿ ಇವ ನಿಗೆ—

ನಾನು ಹುಲ್ಲವ್ವಾ ಗಂಡಾ ನಿಂಬವ್ವಾ ಅ ಣ್ಣಿಗೇರಿ ಹಾಲಿವಸ್ತಿ ಜಿಕೇನಕಟ್ಟಿ ಸಂಸ್ಥಾನ ಸವ ಣೂರ ನಾನು ಕೊಡುವ ನೋಟೀಸು ಏನಂದರೆ— ನೀನು ನನ್ನ ಲಗ್ನದ ಗಂಡಸಿದ್ದು ನನ್ನನ್ನು ಲಗ್ನ ಮಾಡಿಕೊಂಡು ಅಜಮಾಸು ನಾಲ್ಕು ವರ್ಷ ಆದೀ ತು ಆದರೆ ನನಗೆ ನಿನಗೆ ತಂಟೆ ಬಂದು ನೀನು ನನ್ನನ್ನು ನನ್ನ ತವರಮನಿಗೆ ಕಳಿಸಿಕೊಟ್ಟು ನನ್ನ ಮೈಮೇಲೆ ಇದ್ದ ಯಾವತ್ತು ದಾಗೀನೆಗಳನ್ನು ಕಸ ಗೊಂಡಿರುತ್ತೀರಿ ನನ್ನನ್ನು ಬಿಟ್ಟು ಎರಡು ವರ್ಷ ಆಯಿತು ಇವರೆಗೂ ಕರಕೊಂಡು ಹೋಗಿಲ್ಲಾ ಆದರೆ ನನ್ನ ಹೊಟ್ಟೆಯ ದಶಿಯಿಂದ ಎರಡುನೂರು ರೂಪಾಯಿ ಸಾಲಾ ಮಾಡಿ ತಿಂದಿರುತ್ತೇನೆ ಇನ್ನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನಾ ನು ಮಾಡಿದ ಎರಡುನೂರು ರೂಪಾಯಿ ವ ನನ್ನ ತವರಮನಿಯವರು ಕೊಟ್ಟ ದಾಗೀನೆ ಸಹಿತ ತಂದು ಕೊಟ್ಟು ಯೋಗ್ಯ ಜಾಮೀನು ಕೊಟ್ಟು ಕರಕೊಂ ಡು ಹೋಗಬೇಕು ಬರ ಇದಕ್ಕೆ ತಪ್ಪಿದರೆ ನಾನು ಎಂದನೇ ಕಡಿಗೆ ವುಡಕಿ ಪಗ್ಗರೆ ಮಾಡಿಕೊಂಡು ಹೋಗುತ್ತೇನೆ ಅನಂತರ ವುಡಕಿ ಗಂಡನ ಮೇಲೆ ವ ನನ್ನ ಮೇಲೆ ಯಾವ ತರದ ಹಕ್ಕು ವಗೈರೆ ನಡಿಯಲಾರದು ಇದೇ ಸೋಡಚೀಟಿ ಎಂದು ತಿಳಿ ಯತಕ್ಕದ್ದು ಅಂತಾ ಬರಕೊಟ್ಟ ನೋಟೀಸು

ತಾ|| ೯ ಫೇಬ್ರುವರಿ ೧೯೩೦ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಹುಲ್ಲವ್ವಾ ಕೋಮ ನಿಂಬವ್ವಾ ಅಣ್ಣಿಗೇರಿ ಇಕಿ ಕೈದು ಇರು ತ್ತದೆ

ಕನ್ನಡ ಬಾಂಧವರೇ

ಸ್ವಲ್ಪ ವೇಳೆಯಲ್ಲಿ! ಸ್ವಲ್ಪ ಖರ್ಚಿನಲ್ಲಿ!!

ಮೋಟಾರ ಡ್ರಾಯವಿಂಗ

ಮತ್ತು

ಮೆಕೆನಿಕಲ್ ಟ್ರೇನಿಂಗ.

ಹತ್ತು ವರ್ಷದ ಅನುಭವಪಡೆದ ಮಾಲಿಕ ರು ಸ್ವತಃ ಶಿಕ್ಷಣ ಕೊಡುತ್ತಾರೆ. ವಿಶೇಷ ಮಾ ಹಿತಿಗಾಗ್ಗೆ ನಮ್ಮ ಮಾಹಿತಿ ಪತ್ರ ತರಿಸಿಕೊಳ್ಳಿರಿ.

ಕೋರ್ಸ ಬೇಕಾದ ವೇಳೆಯಲ್ಲಿ ಸುರುವು ಮಾಡಬಹುದು.

ಪತ್ತೆ ಡಿ. ಎಸ್. ಇಟಗಿ,

ಲೆನಬಝಾರ ಧಾರವಾಡ.

ಈ ಪತ್ರವನ್ನು ಅಂಣ್ಣಾರಾಯ ಬಾಳಾಚಾ ರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿ ದರು

R. N. B.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಬುಧವಾರ ತಾರೀಖು ೧೨ ನೇ ಫೆಬ್ರುವರಿ ೧೯೩೦ (ಸಂಚಿಕೆ ೬೭

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES **GUARANTEED BONUS PLANS**

AGENTS WANTED ON LIBERAL TERMS

For further particulars apply to:-

Chief representative for Karnatak and South Karna.

N. T. **Khona** P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರ ಮಾಡಿದ್ದು.

ದಿ ಗ್ರೇಟ ಈಸ್ಟರ್ನ ಲಾಯಿಫ ಅಶುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ ತನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ	ಖಂಡಿತವಾದ ಬೋನಸಗಳ ಯೋಜನೆಗಳು
ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಬಂಡವಲವು	ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ.
ಇವರಿಗೆ ಬರೆದುಕೊಳ್ಳಿರಿ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಶೇರು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಸೇವಿಂಗ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದ್ದರಿಂದ ತಿಳಕೋಬೇಕು.

ಮಧ್ವರಾವ ಬಿ. ಜಳಾಕಿ.
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ತಕ್ಕೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ „	೭-೦-೦
೩ „	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೧೨-೨-೩೦ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಗಬ್ಬೆಯ
ಆ ಸತ್ಯವುಳಿಯ ನರಸಿರ ಸುಕೃತಯರಿಕೆಗಳಂ ।
ಈ "ವಿಜಯಂ" ಶ್ರೀಕರಮ ।
ಆ ವಿಷಯಂಗಳ ವಿವರಿಸಿನಲಿತ್ತವು ಸಾರ್ಜಾಗಿ

ಉತ್ತರಾದಿ ಮಠದ ಭಾವೀ ಸ್ವಾಮಿಗಳಾದ ಶ್ರೀ ಪಾಂಡುರಂಗೀ ಕೃಷ್ಣಾಚಾರ್ಯರು.

ಈಗಿನ ಶ್ರೀ. ಸತ್ಯಧ್ಯಾನತೀರ್ಥರು ವೃಂದಾವನಸ್ಥರಾಗುವಾಗ ಅಥವಾ ಬಹಳ ವೃದ್ಧರಾದಾಗ, ಶ್ರೀ ಪಾಂಡುರಂಗೀಕೃಷ್ಣಾಚಾರ್ಯರು ಅವರ ಸ್ಥಳದಲ್ಲಿ ಗುರುಪೀಠಾಲಂಕಾರ ಮಾಡುವರೆಂದು ಹೇಳುವರು ಮತ್ತು ಹೀಗೆ ಹೇಳುವಾಗ ಅವರ ಮಹಿಮೆಯನ್ನು, ಕಲಿಧರ್ಮಕ್ಕನುಸರಿಸಿ, ವಿಜಾಪುರದಲ್ಲಿ ನಡೆದ ಪ್ರಮುಖ ಮಾಧ್ವರು ಚೆನ್ನಾಗಿ ನೋಡಿದರು. ಕರ್ನಾಟಕ ವೈಭವಕಾರರು ಅವರ ಖ್ಯಾತಿಯ ವರ್ಣನೆಯನ್ನು ಮುಂದೆ ಕೊಟ್ಟಂತೆ ಮಾಡಿದ್ದಾರೆ:-

"ಮುಂದೆ ಸ್ವಾಮಿಗಳಾಗತಕ್ಕ ಪಾಂಡುರಂಗಿ ಕೃಷ್ಣಾಚಾರ್ಯರು ಇವನೇಕೆ ಇಲ್ಲಿ ಬಂದನು. ಇವನಿಗೆ ಇಲ್ಲಿ ಯಾಗು ಬಂಗೊಟ್ಟರು. ಸುಳ್ಳು ಬಿದ್ದೀ ಬರೆಯುತ್ತಾನೆಂದು ಕನ್ನಡಿಗರ ಸಂಪಾದಕರಿಂದ ಶ್ರೀನಿವಾಸರಾಯರ ಧುಮಕಟ್ಟಿದರು. ಅಷ್ಟರಲ್ಲಿ ಕಾಕೋಳ ತಿರುಗಿ ರಾಯರು ಮುಂದಿನ ಪ್ರಸಂಗವನ್ನು ತಪ್ಪಿಸುವ ಸಲುವಾಗಿ ಶ್ರೀನಿವಾಸರಾಯರನ್ನು ಅಲ್ಲಿಂದ ಕರೆಕೊಂಡು ಹೋದರು. ಈ ಪ್ರಕಾರ ಬುದ್ಧಿ ಕಳಕೊಂಡ ಆಚಾರ್ಯರನ್ನು ನೋಡಿ, ಎಲ್ಲರೂ ಹಳಹಳಿಸಿದರು.

ಆಚಾರ್ಯರು ಕೇವಲ ದಬ್ಬಾಳಿಕೆಯ ಪ್ರದರ್ಶನವನ್ನು ಮಾಡಿ ಮತ್ತಷ್ಟು ಅಪಹಾಸ್ಯಕ್ಕೀಡಾದರು. ಶಿಷ್ಯರ ವಂತಿಕೆಯಿಂದಲೇ ಉಪಜೀವಿಸುವ ಮಠದಲ್ಲಿ ಪಂಪುಷ್ಯರಾಗಿ ಶಿಷ್ಯರ ಮೇಲೆಯೇ ಹಂಚಾಯಿಸುವದನ್ನು ನೋಡಿದರೆ, ನಮಗೆ ನಗೆಬರುತ್ತದೆ. ಮುಂದೆ ಪೀಠಾಧಿಕಾರಿಗಳಾಗುವ ಸಂಭವವಿರುವ ಜನರ ಪ್ರವೃತ್ತಿಯನ್ನು ಎಲ್ಲ ಶಿಷ್ಯರು ನಿರೀಕ್ಷಿಸಿ, ಇನ್ನು ಮುಂದೆ ಬರುವ ಈ ಸಾಧುವಿನ ರಾಜ್ಯವು ನಡೆಯದೆಂದೂ ಲೋಕಮತಕ್ಕೆ ಅವರು ಬಗ್ಗಬೇಕೆಂದೂ ಚನ್ನಾಗಿ ತಿಳಿಸಿ ಕೊಡಬೇಕು."

ಮುಂದಾಗಿ ಪೀಠಾಧಿಕಾರಿಗಳಾಗುವದು ಶ್ರೀ ಕೃಷ್ಣಾಚಾರ್ಯರ ಕೈಯಲ್ಲಿಲ್ಲ. ಇವರಿಗೆ ಕ್ಯಾವಿಯ ಕ್ಯಾಟ ತೊಡಿಸಿ ಲಂಗೋಟಿ ಹಾಕುವದೂ ಈಗಿನ ಶ್ರೀಗಳ ಕೈಯಲ್ಲಿಲ್ಲ. ತಾವು ಒಪ್ಪಿದಂಥವರನ್ನೇ ಗುರುಪೀಠದಲ್ಲಿ ಕೂಡ್ರಿಸಬೇಕೆಂದು ಮೈಸೂರ ದರಬಾರಿನ ಕಾಯದೆ ಹೇಳುತ್ತಿರುತ್ತದೆ. ಹಿಂದಕ್ಕೆ ಮೈಸೂರ ಸರಕಾರದ ಒಪ್ಪಿಗೆಯನ್ನು ಪಡೆಯದೆ ಪೀಠಾಧಿಕಾರವನ್ನು ಕೊಟ್ಟಬಗ್ಗೆ, ಪಶ್ಚಾತ್ತಾಪ ರ ನ ದೆ ದು ಆ ದೋಂ ದು ಸಾ ರೆ ದರಬಾರದಿಂದ ಅಂಥಾ ಇಂಥಾ ಅಂಗೀಕರಿಸಲ್ಪಟ್ಟಿತು. ಶ್ರೀ. ಕೃಷ್ಣಾಚಾರ್ಯರಂಥ ಕಾಮುಕ ವೃತ್ತಿಯವರು ಗುರುಪದಾರೂಢರಾದರೆ ಮಠವು ದಿಡೆಯರ ಸಾಮ್ರಾಜ್ಯವಾಗುವದೇ ನಿಜವೆಂದು ಈಗಿನ ಇವರ ಲಕ್ಷಣಗಳಿಂದ ಹೇಳಬಹುದು. ಆದ್ದರಿಂದ ಇಂಥವರಿಗೆ ಗುರುವಾಗಲಿಕ್ಕೆ ಸಮ್ಮತಿ ಕೊಡಕೂಡದೆಂದು ಅಲ್ಲಲ್ಲಿಯ ಮಾಧ್ವರು ಸಭೆಮಾಡಿ, ಶ್ರೀಮನ್ಮಹಾರಾಜರಿಗೆ ವಿನಂತಿ ಅರ್ಜಿಯನ್ನು ಈಗಿನಿಂದಲೇ ಕಳಿಸಬೇಕು. ಇಲ್ಲದರೆ ಕೃಷ್ಣಾಚಾರ್ಯರಿಗೂ, ಅವರ ಜೊತೆ. ಗುರುವಾಗತಕ್ಕವರಿಗೂ, ಗುರುಮಾಡತಕ್ಕವರಿಗೂ ಯೋಗ್ಯ ತಿಳುವಳಿಕೆಯುಂಟಾಗುವದು. ಸಾತ್ವಿಕತನ ಸದಾಚಾರ, ಭಗವದ್ಭಕ್ತಿ, ತಪಸ್ಸು ಮುಂತಾದ ಗುಣಗಳಲ್ಲಿ ಪಾಂಡುರಂಗೀ ಮನೆತನದವರಲ್ಲಿಯೇ ಕೃಷ್ಣಾಚಾರ್ಯರಿಗಿಂತ ಹೆಚ್ಚು ಯೋಗ್ಯತೆಯವರಿದ್ದಾರೆಂದು ಶ್ರೀಗಳವರೇ ಮೊದಲಾಗಿ ಎಲ್ಲ ಮಾಧ್ವರು ಹೇಳುವಂತಿದೆ.

ರಾ. ಬ. ಬಿ ಎಲ್. ಪಾಟೀಲರ ಅಸೆಂಬ್ಲಿಯ ಉಮೇದವಾರಿಯು

—(ಖರಾ)—

ರಾ. ಬ. ಬಿ ಎಲ್. ಪಾಟೀಲರು ಅಸೆಂಬ್ಲಿಗೆ ಉಮೇದವಾರರಿದ್ದಾರೆಷ್ಟೇ; ಅವರು ಆರಿಸಿ ಬರಬೇಕೆಂದು ೧ ಸರದಾರ ಎಲ್.-ಬಿ. ದೇಸಾಯಿ ಶಂಬ್ಳೂರ, ೨ ಶ್ರೀ. ಶಿವಲಿಂಗಶಾಸ್ತ್ರಿ ಕನವಳ್ಳಿ ಕರ್ನಾಟಕ ಟಾಯಿಮ್ಸ್, ೩ ರಾ. ಬ. ಕಂಬಳಿ ೪ ಶ್ರೀ. ಶಂಕರೆಪ್ಪ ಸುಳ್ಳ ೫ ದೇಸಾಯಿ ವಿಜಾಪೂರ ೬ ಶ್ರೀ. ಮುರಿಗೆಪ್ಪಾ ಅಣ್ಣಾ ಶೆಟ್ಟಿ ಪ್ರೆಸಿಡೆಂಟ ಮ್ಯುನಿಸಿಪಾಲಿಟಿ ಬ್ಯಾಡಗಿ, ೭ ರಾ. ಸಾ. ತಿವಲಿಂಗರಾವ ದೇಶಮುಖ ಅಲಮೇಲ, ೮ ರಾವಸಾಹೇಬ ಪಂಪಪ್ಪಾ ದೇಸಾಯಿ ಅಸ್ಸಿನಭಾವಿ, ೯ ಖಾನಸಾಹೇಬ ಮಾಣೆಕಿ ಕರಾಚಿ ೧೦ ರಾ. ಸಾ ಫಕ್ಕೀರಪ್ಪಾ ಹಳ್ಳಿಕಟ್ಟಿ ವಿಜಾಪೂರ, ೧೧ ರಾವಸಾಹೇಬ ಲಿಂಗನಗೌಡಾ ಪಾಟೀಲ ಹುಬಕೋಟಿ, ೧೨ ಮಿ. ಟಿ. ಟಿ. ಮುದರಡ್ಡಿ ಧಾರವಾಡ, ೧೩ ಕೋಟಪ್ಪಾ ಕೋಟಿ ವಕೀಲ ಗದಗ, ೧೪ ಬೆಳಗಾವಿಯ ದಳವಿ ಮತ್ತು ಚೌಗುಲೆ ವಕೀಲರು ಇಂದು ವಿನಂತಿ ಪತ್ರ ತೆಗೆದಿದ್ದು, ಅದರಲ್ಲಿ "ಕೂಡಲೆ ಹಿಂದುಸ್ಥಾನಕ್ಕೆ ಡೊಮಿನಿಯನ್ನ ಸ್ಟೇಟ್ಸವೆಂದರೆ". ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ದೊರೆಯಬೇಕೆಂಬ ರಾಜಕೀಯ ಧ್ಯೇಯವುಳ್ಳವರಾಗಿದ್ದಾರೆಂದು ಸಿಫಾರಸ್ಸು ಮಾಡಿದ್ದಾರೆ.

ಪೈರವುಂದ ಕೈದಖಾನೆಯಲ್ಲಿ ಕೈದಿಗಳ ಸತ್ಯಾಗ್ರಹ

—:(೦):—

ಪೈರ್ವೂರದ ತುರಂಗದಲ್ಲಿರುವ ೧೨೫ ಕೈದಿಗಳು ಅಧಿಕಾರಿಗಳ ವಿರುದ್ಧ ಸತ್ಯಾಗ್ರಹ ನಡೆಸಿದರು. ಅಲ್ಲಿ ಈ ಪರ್ಯಂತರ ಕೈದಿಗಳಿಗೆ ಅವರವರ ಬಟ್ಟೆಗಳನ್ನೇ ಕೊಡುತ್ತಾ ಇದ್ದರು. ಮತ್ತು ಆದಿತ್ಯವಾರ ಹಾಗು ಹಬ್ಬದ ದಿವಸಗಳಲ್ಲಿಯೂ ದುಡಿಸಿಕೊಳ್ಳುತ್ತಿದ್ದರು ಆದರೆ ಅಧಿಕಾರಿಗಳು ಇವರಿಗೆ ತುರಂಗದ ಕಂಬಳಿಯ ಅಂಗಿ ಮತ್ತು ಲಂಗ ಚಣ್ಣ ಕೊಡಹೋದರು. ವಾರದಲ್ಲಿ ಒಮ್ಮೆ ಕಷ್ಟ ಮಾಡಿಸಿಕೊಳ್ಳಬೇಕೆಂದು ಒತ್ತಾಯಪಡಿಸಿದರು. ಇದರ ವಿರುದ್ಧ ಕೈದಿಗಳು ಸತ್ಯಾಗ್ರಹ ನಡೆಸಿದರು. ಕೊನೆಯಲ್ಲಿ ಕೈದಿಗಳು ತುರಂಗದ ಬಟ್ಟೆ ಹಾಕಬೇಕು. ಕಲಿಮಾಡಿಸಿಕೊಳ್ಳಬೇಕು. ಇಂಗ್ರೇಜಿ ತುರಂಗಗಳಂತೆ ಆದಿತ್ಯವಾರ ಮತ್ತು ಹಬ್ಬದ ದಿವಸಗಳಲ್ಲಿ ದುಡಿಸಿಕೊಳ್ಳಬಾರದೆಂದು ಎರಡೂ ಪಕ್ಷಗಳ ನಡುವೆ ಒಡಂಬಡಿಕೆಯಾಗಿ ಸತ್ಯಾಗ್ರಹ ನಿಂತಿತು.

ಇಳೀ ಮುಣಗಿದವರಿಗೆ ಚಳಿಯ ಅಂಜಿಕೆಯೇ!

—(೨)—

ಶಾಹಪೂರದ ಕೊಲೆಯ ಪ್ರಕರಣದಲ್ಲಿ ಖ್ಯಾರಿಸ್ಟರ ಲಾಲಾ ಧುನಿಚಂದನನ್ನು ಕೋರ್ಟಿನಿಂದ ಹೊರಗೆ ಕಳಿಸಿ, ಅವರ ಅಪಮಾನ ಮಾಡಿದ ಕಾರಣದಿಂದ ಆರೋಪಿಗಳು ಕೋರ್ಟಿನ ಬಹಿಷ್ಕಾರ ಹಾಕಿ; ವಿಚಾರಣೆಗೆ ಹಾಜರಾದರ. ಮತ್ತು ಜೇಲಿನಲ್ಲಿ ತಮ್ಮನ್ನು ನಡಿಸಿಕೊಳ್ಳುವ ವಿಚಾರದಲ್ಲಿ ಕಂಡಾಬಂಡ ಸಪ್ತವಾಸರಕ್ಕಾಗಿ ಅನ್ನತ್ಯಾಗ ಮಾಡಿದ್ದಾರೆ. ಇವರ ಈ ದಿಟ್ಟತನದ ಕೃತ್ಯಕ್ಕಾಗಿ ಮ್ಯಾಜಿಸ್ಟ್ರೇಟರು ಇವರ ಮೇಲೆ ಕೋರ್ಟಿನ ಅಪಮಾನ ಮಾಡಿದ ಬಗ್ಗೆ ಕೆಲಸ ನಡಿಸಬೇಕೆಂದಿದ್ದಾರೆ. ಇದಕ್ಕಾಗಿ ದಂಡ ಅಥವಾ ಶಿಕ್ಷೆ ಮಾಡಬಹುದು. ಗಲ್ಲು, ಕರೇನೀರು, ಹತ್ತು ವರ್ಷದ ಭಯಂಕರ ಶಿಕ್ಷೆಯು ತಮ್ಮದಾಗಿ, ದುಃಖದಿಂದ ನಿಂತಿರುವಾಗ, ಇಂಥ ಅಲ್ಪ ಶಿಕ್ಷೆಗಳಿಗೆ ಇವರು ಹೆದರುವರೇ!

ಕಾಯದೆಭಂಗ ಮತ್ತು ಸತ್ಯಾಗ್ರಹಕ್ಕೆ
ಹತ್ತು ಸಾವಿರ ರೈತರ ಬೆಂಬಲ.

—(೦)—

ಡಾ|| ಮರ್ದನಸಾಹೇಬರು ಕಾಯದೆಭಂಗದ ವಿ[illegible] ಶಸ್ತ್ರ ಹಿಡಿದು, ಅದನ್ನು ಹಣಿಯು ಹಾಕು[illegible] ರ್ಥಗರ್ಭಿತ ಭಾಷಣ ಮಾಡುತ್ತಿದ್ದಾಗ, ಜನ್ನೆರಿಕಾಲರು ಕಾಯದೆಭಂಗಕ್ಕೆ ರೈತರ ಸಹಾಯ ಮತ್ತು ಸಹಾನುಭೂತಿ ಸಂಪಾದಿಸಲು ತಮ್ಮ ಇಲಾಖೆಯಲ್ಲಿ ಪ್ರವಾಸ ಮಾಡುತ್ತಿದ್ದಾರೆ. ರಾಯಚೂರೇಲಿಯಲ್ಲಿ ರೈತರದೇ ಸಭೆಯಾಯಿತು. ಹತ್ತು ಸಾವಿರ ಜನರು ಕೂಡಿದ್ದರು. ಇವರು ಪಂಡಿತರಿಗೆ ಕಾಯದೆಭಂಗದಲ್ಲಿ ಕಾಯಾ-ವಾಚಾ-ಮನಸಾ ಸಹಾಯ ಮಾಡುವಂತೆ ವಚನ ಕೊಟ್ಟಿದ್ದಾರೆ.

ಮ್ಯಾಜಿಸ್ಟ್ರೇಟರೇ ಫಟಕೀ ಹೊಡಿಸಿಕೊಂಡು
ನೋಡಬೇಕು

—೦—

ಇಂಗ್ಲಂಡದಲ್ಲಿ ಸ್ಮಾಯ ನೆಂಬ ಸಾಹೇಬನಿಗೆ ಮ್ಯಾಜಿಸ್ಟ್ರೇಟರು ಫಟಕಿಯ ಶಿಕ್ಷೆ ಕೊಟ್ಟರು ಶಿಕ್ಷೆಯ ಪ್ರಕಾರ ಅವನಿಗೆ ಫಟಕೀ ಹೊಡೆದರು. ಸಾಹೇಬನು ಬವಳಿಬಂದು, ಎಚ್ಚರ ತಪ್ಪಿದನು. ಫಟಕಿಯು ಅತ್ಯಂತ ಕ್ರೂರ ಶಿಕ್ಷೆಯು. ಅವಮಾನಪ್ರದವಾದದ್ದು. ಮ್ಯಾಜಿಸ್ಟ್ರೇಟರು ಫಟಕಿಯ ಶಿಕ್ಷೆ ಹೇಳುವ ಮೊದಲು ಸ್ವತಃ ಹೊಡಿಸಿಕೊಂಡು ಅದರಿಂದಾಗುವ ವೇದನೆಯ ಅನುಭವ ತಕ್ಕೊಂಡರೆ- ಅವರೆಂದಿಗೂ ಇಂಥ ರಾಕ್ಷಸೀಪಣದ ಶಿಕ್ಷೆ ವಿಧಿಸಲಾರರೆಂದು ದೊಡ್ಡದೊಡ್ಡ ಕಾಯದೆ ಪಂಡಿತರು ಉದ್ಗಾರ ತೆಗೆದಿದ್ದಾರೆ. ಹಿಂದುಸ್ಥಾನದ ಮ್ಯಾಜಿಸ್ಟ್ರೇಟರೂ ತಾವು ಹೊಡಿಸಿಕೊಂಡು, ಅದರ ಫಲ ತಿಳಕೊಂಡು, ಶಿಕ್ಷೆ ವಿಧಿಸಬೇಕೆಂದು ಪರ್ಯಾಯದಿಂದ ಅನ್ನಬೇಕಾಗುತ್ತದೆ.

ಜೈನರ ಸಭೆಯ ಮೇಲೆ ಕಲ್ಲಿನ ಮಳೆ!!

ಕೃಷ್ಣ ಜಿಲ್ಹೆಗೆ ಸೇರಿದ ಜನ್ನದಲ್ಲಿ ಜೈನರ ಪರಿಷತ್ತು ಕೂಡಿದೆ. ಇದು ಸುಧಾರಕರೆಂಬ ಪ್ರಾಗತಿಕರು ಕರೆದ ಸಭೆಯು. ಧರ್ಮಾಭಿಮಾನಿಗಳು ಈ ಸಭೆಯ ವಿರುದ್ಧ ಗೊಂದಲವೆಬ್ಬಿಸಿದರು. ಪರಿಷತ್ತು ಪ್ರಾರಂಭವಾದಾಗ ಟಿಕೀಟಿಲ್ಲದೆ ಒಳಗೆ ಹೋಗಬೇಕೆಂದರು. ಸ್ವಯಂಸೇವಕರು ಬಾಕೀ ಬಿಟ್ಟಿಲ್ಲ- ಮಂಟಪದ ಮೇಲೆ ಕಲ್ಲು ಗುಂಡಿಗಳ ಮಳೆಗರೆದರು. ಶಸ್ತ್ರಧಾರಿಗಳಾದ ಪೋಲೀಸರು ಬರಲು ಇವರು [illegible] ಸಲ್ಲಿಸಿದರು. ಬಳಿಕ ಸಭೆಯ ಕೆಲಸವು ಸುರಕ್ಷಿತವಾಗಿ ನಡೆಯಿತು.

ನಾದಿರಖಾನನ ವಿರುದ್ಧ ಬಂಡಾಯದ ಪ್ರಯತ್ನ.

—)(೦)(—

ಪೇಶಾವರದಲ್ಲಿ ಕಾಬೂಲದ ವ್ಯಾಪಾರಖಾತೆಯ ಮುಖ್ಯಾಧಿಕಾರಿಯಾಗಿರುವ ಸರದಾರ ಅಬ್ದುಲ ಹಕೀಮಖಾನ ಮತ್ತು ಅವನ ತಮ್ಮನಾದ ಅಮೀರುಲ್ಲಾ ಇವರೀರ್ವರು ನಾದಿರಖಾನನ ವಿರುದ್ಧ ಬಂಡಾಯವೆಬ್ಬಿಸಲು- ಶಿನವಾರಿ ಕುಲದವರ ಸಹಾಯ ಪಡಕೊಳ್ಳುವ ಸಂಚು ಮಾಡಿ, ಹೋದ ಶುಕ್ರವಾರ ದಿವಸ ಕತ್ತಲೆ ಬಿದ್ದ ಕೂಡಲೆ- ಇವರು ಇಂಗ್ಲಿಷ ಅಧಿಕಾರಿಗಳಿಗೆ ತಿಳಿಯದಂತೆ ಕಾಬೂಲ ರಾಜ್ಯದಲ್ಲಿ ಸೇರಬೇಕೆಂದಿದ್ದರು. ಈ ಸಂಗತಿಯು ಹೊರಬಿದ್ದು, ಇವರೀರ್ವರೂ ದಸ್ತಗಿರ ಮಾಡಲ್ಪಟ್ಟರು. ವ್ಯಾಪಾರದ ಮುಖ್ಯಾಧಿಕಾರಿಗೆ ಬ್ರಹ್ಮದೇಶ ಬಗದಾದ ಅಥವಾ ಇರಾಣಕ್ಕೆ ಹೋಗುವಂತೆ ಇಂಗ್ಲಿಷ ಸರಕಾರದವರು ಸಲಹೆ ಹೇಳಿದ್ದಾರೆ.

ಅಪ್ಪೀಗೇರಿಯ ಶಾಲೆಯ ಸುಧಾರಣೆ.

—(೦)(೦)(೦)—

ರೋಣ ತಾಲೂಕಿನಲ್ಲಿ ಅಪ್ಪೀಗೇರಿ ಎಂಬದು ದೊಡ್ಡ ಗ್ರಾಮವು. ಅಲ್ಲಿಗೆ ಹೆಡ್ಡ ಮಾಸ್ತರರಾಗಿ ಬಂದ ಶ್ರೀ. ಕಳಕಾಪೂರರವರು ಶಾಲೆಯನ್ನು ಉತ್ತಮ ಸ್ಥಿತಿಗೆ ತಂದಿದ್ದಾರೆ. ಮುಲಕೀ ಪರೀಕ್ಷೆಯ ವರ್ಗದಲ್ಲಿ ೪೦-೫೦ ವಿದ್ಯಾರ್ಥಿಗಳಿದ್ದಾರೆ. ಪಂಚರಿನವರಿಗೆ ವಾರ ಹಚ್ಚಿ ಕೊಟ್ಟಿದ್ದಾರೆ. ವಾರ ಸಿಗದವರಿಗೆ ಸ್ವಂತ ಕೈಯಿಂದ ಊಟಕ್ಕೆ ಹಾಕುವರು. ತಮ್ಮ ಕೈಯಿಂದಲೇ ಶಾಲೆಯ ಕಾಂಪಾವುಂಡ ಕಟ್ಟಿಸಿದರು ಇವರು ಅಸಿಸ್ಟಂಟರಿಗೂ, ಊರವರಿಗೂ ಪ್ರಿಯರಾಗಿದ್ದಾರೆಂದು ಒಬ್ಬ ಲೇಖಕರು ಬರೆಯುತ್ತಾರೆ.

ಬಾಂಬಿನ ತತ್ವಜ್ಞಾನ-

ಕಾಶಿಯಲ್ಲಿ ವಿದ್ಯಾರಣ್ಯನೆಂಬ ಓರ್ವ ತರುಣ ತರುಣನು, ಹಿಂದುಸ್ಥಾನೀ ಪ್ರಜಾಸತ್ತಾತ್ಮಕ ಸಂಸ್ಥೆಯವರು ಪ್ರಕಟಿಸಿದ "ಬಾಂಬಿನ ತತ್ವಜ್ಞಾನ" ವೆಂಬ ಚಿಕ್ಕ ಪುಸ್ತಕವನ್ನು ಹಂಚುತ್ತಿರುವಾಗ ಹಿಡಿಯಲ್ಪಟ್ಟಿದ್ದಾನೆ. ಜಾಮೀನಿನ ಮೇಲೆ ಬಿಡೆಂದು ಅರಿಕೆ ಮಾಡಿಕೊಳ್ಳಲು, ಅಗುವದಿಲ್ಲವೆಂದಿದ್ದಾರೆ.

ಅನ್ನತ್ಯಾಗ-

[illegible]ಗಟಿಯ ಜೇಲಿನಲ್ಲಿ, ಬಾಂಬು ಹಾಕಿಸಿದ್ದಕ್ಕಾಗಿ ಶಿಕ್ಷೆ ಅನುಭವಿಸುತ್ತಿರುವ [illegible] ಜನ ತರುಣರು [illegible] ದಿನಗಳಿಂದ ಅನ್ನತ್ಯಾಗ ಮಾಡಿದ್ದಾರೆ.

ತ್ರಿಮಲರಾಯರ ಮೇಲಿನ ದೋಷ ಹೋಯಿತು-

ಪಾಂಡುರಂಗಿ ಕೃಷ್ಣಾಚಾರ್ಯರು ಶ್ರೀ ಮಂಗಳವೇಢೆಯವರ ಮೇಲೆ ಕೈಯೆತ್ತಿದಾಗ ಶ್ರೀ. ಕಡಕೋಳ ತಿರುಮಲರಾಯರು ಇವರನ್ನು ಸುರಕ್ಷಿತವಾಗಿ ಪಾರುಮಾಡಿದರು. ಆದರೆ ತಾರು ಈ ಪ್ರಕಾರ ಸ್ಪಷ್ಟವಾಗಿಂಲಿಲ್ಲ, ತ್ರಿಮಲರಾಯರು ಶ್ರೀನಿವಾಸರಾಯರನ್ನು "ಬಾಡಿ ರಿಮೂವ್ಡ" ಎಂದಿದ್ದು, ಅದರ ಅರ್ಥವು ಬೇರೆಯಾಗುತ್ತದೆ. ಅದು ಹೇಗೇ ಇರಲಿ; ತ್ರಿಮಲರಾಯರ ವಿಷಯಕವಾದ ಜನರ ಗ್ರಹವು ಈ ಸ್ಪಷ್ಟೀಕರಣದಿಂದ ದೂರಾಗಲೆಂದರಾಯಿತು.

ಬಂಗಾಲಕ್ಕೆ ಸೇರಿದ ಖುಲನಾದ ಹಳೆಯ ಸ್ಕೂಲಿನಲ್ಲಿ ಹಿಂದೂ ವಿದ್ಯಾರ್ಥಿಗಳು ಸರಸ್ವತಿಯ ವಿಗ್ರಹ ತಂದು, ಪೂಜಾ ಸಮಾರಂಭ ಮಾಡಲುಜುಗಿಸಲು- ಮುಸಲಮಾನರು ಇದಕ್ಕೆ ವಿರೋಧ ತಿಳಿಸಿ ಪೂಜಾ ಮಾಡುವದಾದರೆ ವಿಗ್ರಹವನ್ನು ಭಂಗಪಡಿಸುವೆವೆಂದು ಹೊಯ್ಯಾಲಿಕತ ನಡೆಸಿದರು. ವಿದ್ಯಾರ್ಥಿಗಳು ಶಾಲೇಬದಿಯಲ್ಲಿ ಪೂಜಾ ಮಾಡಿದರು. ಮುಸಲಮಾನ ವಿದ್ಯಾರ್ಥಿಗಳ ಹಟಮಾರಿತನದ ಬಗ್ಗೆ ಅಲ್ಲಿ ಚಳವಳಿ ಎದ್ದಿದೆ.

ಮುಲ್ತಾನ ಪಟ್ಟಣದಲ್ಲಿ ನಳದ ನೀರಿನ ಪಟ್ಟಿಯ ವಿರುದ್ಧ ಪಟ್ಟಣಿಗರು ಹರತಾಳ ಮಾಡಿದ್ದರಿಂದ ಪೇಟೆಯು ಬಂದಾಗಿ ಊರೊಳಗೆ ಯಾವ ಪದಾರ್ಥವೂ ದೊರೆಯದಾಗಿದೆ. ಪೋಲೀಸರು ಕಾಂಗ್ರೆಸದ ಸೆಕ್ರೆಟರಿ ಮತ್ತು ಪ್ರತಿಷ್ಠಿತ ಜನರನ್ನು ಹಿಡಿದಿದ್ದಾರೆ. ಪೋಲೀಸರು ಜನರನ್ನು ಚದರಿಸಲು ಬೊಣ್ಣೆಗಳ ಪ್ರಹಾರ ಮಾಡಲು- ಅನೇಕರು ಘಾಯವಾದರು. ಒಬ್ಬನು ಎಚ್ಚರದಪ್ಪಿದನು.

ಹೋದ ವಾರದಲ್ಲಿ ಪ್ರಯಾಗದಲ್ಲಿ ಕುಂಭಸ್ನಾನಕ್ಕಾಗಿ ೩೦-೪೦ ಲಕ್ಷ ಜನ ಕೂಡಿತ್ತು. ಮಾರಕಾ ಬೇನೆ ಹುಟ್ಟಬಾರದೆಂದು ಅಧಿಕಾರಿಗಳು ವಿಶ್ವ ಪ್ರಯತ್ನ ಮಾಡಿದ್ದರು. ಅದರೂ ಅದು ಹುಟ್ಟಿ, ದಿನಾಲು ಅನೇಕ ನರಬಲಿಗಳನ್ನು ತಕ್ಕೊಳ್ಳುತ್ತಿರುವದು.

ಹುಬ್ಬಳ್ಳಿಯಲ್ಲಿರುವ ರೇಲ್ವೆ ಕೆಲಸಗಾರರ ಸಂಘದ ವಾರ್ಷಿಕ ಸಭೆಯು ಆದಿತ್ಯವಾರ ೧೬ನೆಯ ತಾರೀಖಿನ ದಿವಸ ಯೂನಿಯನ್ನಿನ ಕಚೇರಿಯಲ್ಲಿ ನೆರೆಯುವದು. ಪರಸ್ಥಳದ ಪ್ರತಿನಿಧಿಗಳಿಗೆ ಊಟದ ಮತ್ತು ವಾಸಸ್ಥಾನದ ಉಚಿತವಾದ ಏರ್ಪಾಟು ಮಾಡಲ್ಪಡುವದು.

ಸೊಲ್ಲಾಪೂರದಲ್ಲಿರುವ ರುಜಾಬಾಯಿ ಹೆರಿಗೆ ಮನೆಯನ್ನು ಮ್ಯುನಿಸಿಪಾಲಿಟಿಯು ಸ್ವಾಧೀನದ ವಶಕ್ಕೆ ತೊಗಬೇಕೋ ತೊಗಬಾರದೋ ಎಂಬ ವಾದವಿವಾದವು ವಿಕೋಪಕ್ಕೆ ಹೋಗಿ, ಅಧ್ಯಕ್ಷರಾದ ರಾ. ಬ. ಮುಳೆಸಹೇಬ ನಿರಂಕುಶ ಅಧಿಕಾರವನ್ನು ಉಪಯೋಗಿಸಿ ತುಂಬಾ ಉಪ ಮೆಂಬರರು ಕಮೀಟಿ ಬಿಟ್ಟು ಹೋದರು.

ಜಾಹೀರ ನೋಟೀಸು

ನಾನು ಕೆಳಗೆ ಹೆಬ್ಬೆಟ್ಟಿನ ಗುರ್ತು ಮಾಡುವ ಗುಳುಂಬಿ ತಂದಿ ಮುಕ್ತುಮಸಾಹೇಬ ಕನ್ನಿಕೊಳ್ಳುವ ಶಿಕೆಯು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನಂದರೆ–

ನಾನು ಬಳ್ಳಾರಿ ಜಿಲ್ಲಾ ಹಿಟ್ನಾಳ ಗ್ರಾಮದಲ್ಲಿರುವ ನನ್ನ ಗಂಡ ಗಜಬರಸಾಹೇಬನ ಮೇಲೆ ಒಂದು ಖಾಸಗಿ ನೋಟೀಸು ರಜಿಸ್ಟರ ಮಾಡಿಕೊಟ್ಟೆನು. ಅದನ್ನು ಆತನು ತಕ್ಕೊಳ್ಳಲಿಲ್ಲ. ಆನಂತರ ವಿಜಯ ಪತ್ರದ ತಾ|| ೧೩ನೇ ಜನವರಿಯ ಪತ್ರದಲ್ಲಿ ನೋಟೀಸು ಕೊಟ್ಟೆನು. ಆದರೆ ಆತನು ಸ್ವೀಕಾರ ಮಾಡತಾನೆಂದು ಪೋಸ್ಟಿನವರು ಶರಾ ಬರೆದು ಹೊಳ್ಳಿ ಕಳಿಸಿದ್ದಾರೆ. ಇದರಿಂದ ಆತನ ಮನಸ್ಸಿನಲ್ಲಿ ನನ್ನ ಕೂಡ ಬಾಳವೆ ಮಾಡುವದಿರುವ ಬಿಲಕೂಲ ಕಂಡು ಬರುವದಿಲ್ಲ. ಆದ್ದರಿಂದ ಈ ಸಾರೆ ಜಾಹೀರ ನೋಟೀಸು ಕೊಟ್ಟಿದ್ದೇನೆ. ಸದರ್ನ ನನ್ನ ಗಂಡ ಗಜಬರಸಾಬನು ಈ ನೋಟೀಸು ಜಾಹೀರಾದ ನಾಲ್ಕು ದಿವಸಗಳಲ್ಲಿ ಸಂಸಾರಕ್ಕೆ ಬಂದು, ನನಗೆ ಈ ವರೆಗೆ ಆದ ಹೊಟ್ಟೆ ಖರ್ಚು ಎರಡು ನೂರು ರೂಪಾಯಿ ಕೊಟ್ಟು, ಕರಕೊಂಡು ಹೋಗಬೇಕು. ಇಲ್ಲವಾದರೆ– ನೋಟೀಸೇ ಸೋಡಪತ್ರವೆಂದು ಖಂಡಿತವಾಗಿ ತಿಳಿದು ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು. ಆ ನಂತರ ಸದರ ನನ್ನ ಗಂಡನಾದ ಗಜಬರಸಾಹೇಬನ ಹಕ್ಕು ನನ್ನ ಮೇಲೆ ಮತ್ತು ಅಲ್ಪವಯಿ ನಾಲ್ಕು ವರ್ಷದ ಹುಡುಗನ ಮೇಲೆ ಬಿಲಕೂಲ ನಡೆಯಲಾರದು. ಅಂತಾ ಜಾಹೀರ ಮಾಡಿದ ನೋಟೀಸು ತಾ|| ೧೨ ಫೇಬ್ರುವರಿ ೧೯೩೦ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಗುಳುಂಬಿ ತಂದಿ ಮುಕ್ತುಮಸಾಹೇಬ ಈಕಿ ಕೈದು ಇರುತ್ತದೆ.

ಸುಸಮಯ

ಎ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭೆ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಪ್ಪೂರ್ವ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ

C/o ಮಧ್ಯ ಬ್ಯಾಂಕ ಧಾರವಾಡ

ಸೂಚನೆ:– ನಿಮ್ಮ ಔಷಧ ಬೇಕಾದ್ದು ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯವ್ಹರ ವಿದ್ಯಾರ್ಥಿಯು ... ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಬಹಳ ರೂಪಾಯಿ ವೆಚ್ಚ ಮಾಡಿಕೊಂಡು ಬರುವಂ. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನ್ನು ತಕ್ಕೊಳ್ಳುವೆವಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಫೆಬ್ರುವರಿ ಅಖೈರದೊಳಗಾಗಿ ಹತ್ತು ಜನರನ್ನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ಹೆಚ್ಚಿನ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ಪ್ಹಿ. ಎಸ. ಇಟಗಿ.
ಮುನಸಫ ಕೋರ್ಟಿನ ಹತ್ತರ, ಧಾರವಾಡ.

ಬಾಲರಂಜನ

(ಶ್ರೀ ವ್ಯಾಸನಂದರು ಬರೆದದ್ದು)

ದ್ವಿತ್ವ್ರಕ್ಷ ಒತ್ತಕ್ಷರಗಳಿಲ್ಲದ ಸುರಸ ನೈತಿಕ ಕಥೆಗಳ ಪುಸ್ತಕ! ಚಿಕ್ಕ ಮಕ್ಕಳಿಗೆ ಓದುವ ಅಭಿರುಚಿ ಹುಟ್ಟಿಸುವಂಥದು!! ಶಿಕ್ಷಕರೂ ಮಕ್ಕಳ ಪಾಲಕರೂ ಬೇಗ ಕೊಳ್ಳಿರಿ. ಒಂದು ಪ್ರತಿ ಬೇಡುವವರು ಹತ್ತು ಚಿಕ್ಕ ತಿಕೀಟು ಕಳಿಸಬೇಕು ೧೫–೨–೩೦ಕ್ಕೆ ಪ್ರಕಟವಾಗುವದು

ಲಕಮನಹಳ್ಳಿ ಓಣಿ	ಆಡಳತೆಗಾರರು,
ಧಾರವಾಡ	ವಿದ್ಯಾರ್ಥಿಗಳ ಗುಂಪು

ಕಂಪೋಜಿಟರನು

—(—(೮) —

ಬೇಕಾಗಿದ್ದಾನೆ. ... ಕನ್ನಡ ಒಳ್ಳೆ ... ... ತಾವು ... ಸಮಕ್ಷಮ, ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಬಳವಂತರಾವ ಮಹೇಂದ್ರಕರ
ಫೋಟೋಗ್ರಾಫರ, ಹುಬ್ಬಳ್ಳಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

E. N. ...

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಲ್ದ್ವ ... ಬಾಳಾಚಾರ್ಯ ಹುಂಡೇಕರಿ.

ವರ್ಷ (೧) ಧಾರವಾಡ ಗುರುವಾರ ತಾರೀಖು ೧೩ ನೇ ಫೆಬ್ರುವರಿ ೧೯೩೦ (ಸಂಚಿಕೆ ೩೮

Incorporated in S. S.) (Registered in England.)

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES GUARANTEED BONUS PLANS

AGENTS WANTED ON LIBERAL TERMS

For further particulars apply to.—

Chief representative for Karnatak and South Karna.

N. T. Khona. P. B. 31. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥ ... ಯೂ ತನಾಗಿ ರದ್ದಾಗದ ಪಾಲಿಸಿಯ ಆದರ್ಶ ಯೋಜನೆ ಬಂದ ಫಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ–

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೧ ಹುಬ್ಬಳ್ಳಿ.

ಇವರಿಗೆ ಬರೆಯಬೇಕು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಸೇವಿಂಗ್ಸ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಪದ್ಮರಾವ ಟಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಠೇವಣಿ ಟ ... ಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೆ ಇಡುವವರು ... ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೦-೦
೬ ,,	೭-೦-೦
೪ ,,	೪-೦-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಬೇಕು.

ವ್ಯವಸ್ಥಾಪಕರು ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೯-೨-೨೦ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ಶ್ರೀ
ದೀ "ವಿಜಯಂ" ಶ್ರೀಕರಮಿದು ।
ನಾ ವಿಹಿತಂಗಳ ವಿವರಿಸುವಲಿಪ್ಪುದು ಸಾಹಂ॥

ತಿರುಪತಿಯ ಮಹಾಧ್ವರ ಸಭೆಯ ಮಹಿಮೆಯು.

ತಿರುಪತಿಯ ಹತ್ತರಲಿರುವ ಪದ್ಮಾವತಿಯಲ್ಲಿರುವ ಮಹಾಧ್ವರ ಸಭೆಯು ವಿಶ್ವವಿದ್ಯಾಲಯವಾಗಿರುತ್ತದೆಂದು ವರ್ತಮಾನಪತ್ರಗಳೆಲ್ಲವೂ ಅದರ ಹೆಚ್ಚಳವನ್ನು ಹೊಗಳುತ್ತವೆ. ಶ್ರೀ ಉತ್ತರಾದಿ ಮಠದ ಸ್ವಾಮಿಗಳಿಗಾಗಲಿ, ಅವರ ಅನುವೃತ್ತಿಯ ಕೆಲ ಸಂಪ್ರದಾಯಿಗಳಿಗಾಗಲಿ, ಸಭೆಯ ದೆಸೆಯಿಂದೇನೂ ಅಭಿಮಾನವಿರುವದಿಲ್ಲ. ಇತ್ತಲಾಗಿ ವೈರಭಾವದಿಂದಲೇ ನೋಡುವರು. ಕೌರವರು ಪಾಂಡವರ ನಾಶವಾಗಲೆಂದು ಬಯಸಿದಂತೆ ಬಯಸುವರು. ಆದರೆ ಇವರ ಬಯಿಕೆಯು ನೆರವೇರದು. ತಿಮ್ಮಪ್ಪನಾಯಕರೆಂದರೆ ತನ್ನ ತಮ್ಮನೇ ಸಹಾಯವನ್ನು ಮಾಡುವದುಂಟು.

ಶ್ರೀಗಳವರು ಕೆಲ ಶಿಷ್ಯ-ವೈದಿಕ ಮತ್ತು ಲೌಕಿಕರಿಂದೊಡಗೂಡಿ, ಸಭೆಯನ್ನು ಮುರಿಯಬೇಕೆಂದಾಗಿ ಮಾಡಿದ ಮೊದಲನೆಯ ಪ್ರಯತ್ನವು ಹೊಳೆಯಲ್ಲಿ ಹುಣಿಸೆ ಹೊಳೆದಂತಾಯಿತು. ಸಭೆಯು ಚಿರಸ್ಥಿರ ಸ್ವರೂಪ ಹೊಂದುವಂತೆ ಯಾವದೊಂದು ಉಪಾಯಗಾಣಲು - ವಿಜಾಪುರದಲ್ಲಿ ನೆರೆಯಿಸಲ್ಪಟ್ಟ ೪೦, ೫೦ ಜನರದೊಂದು ಕಮಿಟಿಯೇ ಸಾಕ್ಷಿಯು. ಅದರಲ್ಲಿ ವೈದಿಕರಿಗಿಂತ ಲೌಕಿಕರೇ ಮುಖ್ಯರು ಇದ್ದರೆ ಒಂದೊಂದು ಸಂತೋಷ. ವ್ಯವಹಾರಜ್ಞರಾದ ಧನಿಕರಾದ ಮತ್ತು ನಿಜವಾದ ಹಿತಚಿಂತಕರಾದ ಗೃಹಸ್ಥರು ಸಭೆಯನ್ನೇ[illegible] ಮುರಿಯರೆಂದು ಇಂದೇ ಖಾತ್ರಿಯಾಗಿ ಹೇಳುತ್ತೇವೆ.

ಸಭಾಸ್ಥಾಪಕರಾದ ವೈ. ಕಂಚಿ ಸುಬ್ಬರಾಯರಲ್ಲಿ ವೈದಿಕರ ಬಾಯಿ ಪ್ರಸಂಗವಿರಲಿ ಪದದೆಂದು ಮೊದಲಿನಿಂದ ಹೇಳುತ್ತಾ ಬಂದರು ವೈದಿಕರ ತುಚ್ಛಮಾಡುವ ಉದ್ದೇಶದಿಂದಲ್ಲ. ಅವರಿಗೆ ಕಾಯದೆ-ಕಾನೂನು, ಸಭೆಯನ್ನು ನಡಿಸುವ ರೀತಿಗಳು ಗೊತ್ತಿಲ್ಲೆಂಬ ಕಾರಣದಿಂದ ಹೀಗೆನ್ನುತ್ತಿದ್ದರು. ಅದೇ ಪ್ರಕಾರ ಈಗಾದರೂ ಸಭೆಯನ್ನು ನಡಿಸುವದು, ಅದಕ್ಕೆ ನಿಧಿಯನ್ನು ಕೊಡುವದು, ಕೂಡಿದ ನಿಧಿಯ ಯೋಗ್ಯ ವಿನಿಯೋಗ ಮಾಡುವದೆಲ್ಲ ಲೌಕಿಕರ ಕೈಯಲ್ಲಿಯೇ ಉಂಟು. ವ್ಯವಸ್ಥಾಪಕ ಮಂಡಲದಲ್ಲಿ ಕಾರ್ಯದರ್ಶಿ, ಅಧ್ಯಕ್ಷ ಮೊದಲಾದ ಇಂದಿನ ತನಕ ನೂರಕ್ಕೆ ೯೫ರಂತೆ ಗೃಹಸ್ಥರೇ ಆಗಿದ್ದರೆಂದು ಸಭೆಯ ವರದಿಯಲ್ಲಿ ಕಂಡುಬರುವದು.

ಸಭೆಯು ದೇವತಾ ಸ್ವರೂಪದ್ದಾಗಿರುತ್ತದೆಂಬದೊಂದು ವಿಶೇಷ. ತಿರುಪತಿಯ ದೇವರಿಗೆ ಮುಡುಪು ಹಾಕಲಿಕ್ಕೆ [illegible] ರೂಪಾಯಿ ಬೆಲೆಬಾಳುವ ಬಂಗಾರದ ಒಡವೆಗಳನ್ನು ವೈಷ್ಣವರ ಕನಸಿನಲ್ಲಿ ಶ್ರೀ ಶ್ರೀನಿವಾಸದೇವರು "ನನ್ನ ಪಾದದಲ್ಲಿ ಈ ಒಡವೆ ಹಾಕಬೇಕು; ಪದ್ಮಾವತಿಯ ಸಭೆಗೆ ಕೊಡಿರಿ" ಎಂಬದಾಗಿ ಹೇಳಿದರಂತೆ; ಆ ಪ್ರಕಾರ ಅವರು ತಮ್ಮ ಮುಡುಪುಗಳನ್ನು ಸಭೆಗೆ ಮುಂದಿಟ್ಟರು. ಇಂಥ ಹಲವು ಸಂಗತಿಗಳನ್ನು ಎಲ್ಲ ಮಾಧ್ವರು ಕೇಳಿ ಬಲ್ಲರು. ಇಂಥ ಸಭೆಯನ್ನು ತೀರ್ಥದ ದೆಸೆಯಿಂದ ಮುರಿಯುವದು ಅಲೌಕಿಕ್ಕ ಮಾತ್ರ ಕಾರಣವಾಗುತ್ತದೆ. ತೀರ್ಥದ ಮಹಿಮೆಯು ದೊಡ್ಡದೆಂಬದು ನಿಜ. ಆದರೆ ದೊಡ್ಡ ಹೆಸರಿನಿಂದ ಹೇಯವಾದ ಕೃತ್ಯಮಾಡುವದು ಆಸ ಚಿಕವ್ವ ಯಾವಜ್ಜನ್ಮ ಮಾತ್ರವಲ್ಲ; ಸೂರ್ಯ ಚಂದ್ರರಿರುವವರೆಗೆ ಮೋರೆಗೆ ಕಲಂಕ ಹಚ್ಚಿಕೊಳ್ಳುವಂಥದ್ದೇ ಸರಿ.

ಈ ಸಭೆಗೆ ಸರಕಾರದಲ್ಲಿ ಕೂಡ ಗೌರವವುಂಟು. ಹೋದಸಲ ಕಾಲದಲ್ಲಿ ಮುಂಬಯಿ ಇಲಾಖೆಯಲ್ಲಿ ಕಾನ್ಫರೆನ್ಸ ಎಷ್ಟು ಉತ್ತಮವಾಗಿತ್ತೆಂಬುದನ್ನು ನೋಡಿದವರೇ ಹೇಳುವರು. ಹತ್ತೆಂಟು ದಿವಸ ಕಾನ್ಫರೆನ್ಸಿನಲ್ಲಿ ದಿನ್ನು, ಗಂಧದ ಹೊಗೆಯ ಎಂಜಲದಲ್ಲಿ ಬಟ್ಟೆಗಳನ್ನು ತೊಳಿಸಿಕೊಳ್ಳುವ ಪ್ರಸಂಗವು ಈ ಸಭೆಗೆ ಬರಲೇ ಇಲ್ಲ. ಸಭೆಗೆ ಶ್ರೀಮಂತರು, ದಿವಾನರು, ಜಹಗೀರದಾರರು, ಸಂಸ್ಥಾನಿಕರು, ರಾವಬಹಾದ್ದೂರ, ರಾವಸಾಹೇಬ ಪದವೀಧರರು, ಜಡ್ಜರು, ಮುನಸಫರು ಕಲೆಕ್ಟರ, ವಕೀಲರು ಸಾಹುಕಾರರು ಇವರೇ ಮೊದಲಾದ ಸಣ್ಣ ದೊಡ್ಡ ಕಾಮದಾರರು ಬರುವದರಿಂದ, ಇವರಿಗ ಕಾನ್ಫರೆಂಬ ಲಿಪಿ ಬಂಧ ತಪ್ಪಿಸಬೇಕೆಂದು ಗೌರವ ಕಾರ್ಯದರ್ಶಿಗಳ ಗಿಚ್ಚ ವೈ. ಕೊಳ್ಳಾರ, ರಾ ಮಹಾದ್ರುವಾಯರು ಹತ್ತಿರ ಸರಕಾರಕ್ಕೆ ಪತ್ರ ಬರೆಯಲು, ಸರಕಾರದವರು ಸಭೆಗೆ ಹೋಗತಕ್ಕವರ ಕಾನ್ಫರೆಂಟೈನ ಬಂಧನ ತಪ್ಪಿಸಿದರು.

ಇವೆಲ್ಲ ಮಹತ್ವದ ಸಂಗತಿಗಳು ನಡೆಯುತ್ತಿದ್ದಾಗ, ಮೊದಲನೆಯ ತೀರ್ಥದ ಮಾನ ಹುಡುಕಿದ ಶ್ರೀಗಳವರು ಎಲ್ಲಿದ್ದರೋ ದೇವರೇ ಬಲ್ಲ. ಆಗ ಇವರಿಗೆ ಸಭೆಯಬಗ್ಗೆ ಗೌರವವೇ ಇದ್ದಿಲ್ಲ. ಒಂದು ಕಾಲದಲ್ಲಿ ತಾವು ಅನಾದರ, ದ್ವೇಷವನ್ನೇ ಯನ್ನು ತೋರಿಸುತ್ತಿದ್ದ ಸಭೆಯಲ್ಲಿ ತಮ್ಮ ಹೆಸರ್ತಿಯನ್ನು ಹೇಳಿಕೊಳ್ಳುವದೆಂದರೆ- ಹುತ್ತಿನಲ್ಲಿ ಹಾವು ಸೇರಿಕೊಳ್ಳುವಂತಾಗುತ್ತದೆ.

ಇಂಗ್ಲಿಷರೊಬ್ಬರೇ ಗಟ್ಟಿಗರು.

—(೦)—

ಇಂಗ್ಲಿಷ ಜನರು ಹಿಂದುಸ್ಥಾನವನ್ನು ಬಿಟ್ಟು ಹೋದರೆಂದರೆ- ಮುಸಲಮಾನ ಸಂಸ್ಥಾನಿಕರು ಒಂದಾಗಿ, [illegible] ಹಿಂದು ಸಂಸ್ಥಾನಿಕರನ್ನು [illegible] ಮಾಡಬೇಕೆನ್ನುವರು. ಅದೇ ಪ್ರಕಾರ ಹಿಂದು ಸಂಸ್ಥಾನಿಕರೂ [illegible] ರಕ್ತದ ಕಾಲುವೆ [illegible]. [illegible] ದರೆ [illegible] ಇಂಗ್ಲಿಷರೇ [illegible] ರೆಂದು [illegible] [illegible] ಜನರ ಮುಂದೆ [illegible] ಹೇಳುತ್ತಿದ್ದಾರೆ.

ಕಾರಕೂನರು ಸಂಪಿನಲ್ಲಿ ಸೇರಿದರು

—(೦)—

ಮುಂಬಯಿ ರೇಲ್ವೆಯ ಕೂಲಿಕಾರರ ಸಂಪಿನಲ್ಲಿ ಪರೇಳದ ಸ್ಟೇಶನ್ನಿನ ಮುನಸ್ಸಿರು ಕಾರಕೂನರು ಸಂಪಿನಲ್ಲಿ ಸೇರಿದ್ದರಿಂದ ಸಂಪಿಗೆ ಮತ್ತಿಷ್ಟು ಹುರುಪು ಬಂದಿದೆ.

ತಮ್ಮ ಕ್ವಾರ್ಟರ್ಸಗಳನ್ನು ಬಿಟ್ಟುಹೋಗಬೇಕೆಂದು ಏಜಂಟಸಾಹೇಬರು ಕೂಲಿಕಾರರಿಗೆ ನೋಟೀಸು ಕೊಟ್ಟಿದ್ದಾರೆ. ಆದರೆ ಕೂಲಿಕಾರರು ಅದನ್ನು ಸಟ ಮಾಡಿ ಹಾಕಿಸಿದರು.

ನಾದಿರಖಾನನ ವಿರುದ್ಧ ಶಿನವಾರಿಗಳ ಬಂಡಾಯ.

—( )—

ಕೆಲವೊಂದು ಕಾರಣದಿಂದ ಶಿನವಾರಿಗಳು ನಾದಿರಖಾನನಿಗೆ ಅಮೀರನಾಗಲು ಅಪ್ಪದ ಕೊಟ್ಟರು. ಈತನು ಅಮೀರನಾದನು. ನಾದಿರಖಾನನು ಈಗ ತ್ತ ಕರಾರದಂತೆ ನಡೆಯದ್ದರಿಂದ, ಶಿನವಾರಿಗಳು ಆತನ ವಿರುದ್ಧ ಬಂಡಾಯ ಮಾಡಿ, ಜಲಾಲಾಬಾದ ಮತ್ತು ದಂಡಿನ ಎರಡು ಕಚೇರಿಗಳನ್ನು ಕೈವಶ ಮಾಡಿಕೊಂಡಿದ್ದಾರೆ.

ಶ್ರೀ ಜೋಗರಾಯರ ಕೌನ್ಸಿಲ ರಾಜೀನಾಮೆಯು.

ಶ್ರೀ ಜೋಗ ವಿಶ್ವನಾಥರಾಯರು ಕೊನೆಯಲ್ಲಿ ಕೌನ್ಸಿಲಕ್ಕೆ ರಾಜೀನಾಮೆ ಕೊಡುವ ನಿಶ್ಚಯ ಮಾಡಿ, ರಾಜೀನಾಮೆಯ ಪತ್ರವನ್ನು ಮುದ್ರಣಕ್ಕಾಗಿ ವಿಜಯಕ್ಕೆ ಕಳಿಸಿದ್ದಾರೆ. ಅದು ಕೆಳಗೆ ಕೊಟ್ಟಂತಿರುತ್ತದೆ:—

ಧಾರವಾಡ ತಾ|| ೧೨-೨-೩೦

ಮುಂಬಯಿ ಕಾಯದೇ ಕೌನ್ಸಿಲದಲ್ಲಿಯ ನನ್ನ ಸ್ಥಳದ ರಾಜೀನಾಮೆಯ ಬಗ್ಗೆ ಅಲ್ಲಿ ತರ್ಕವಿತರ್ಕಗಳ ಪ್ರಸಂಗಗಳು ಹೊರಟದ್ದರಿಂದ ನಾವು ನನ್ನ ನಿಶ್ಚಯದ ಧೋರಣವನ್ನು ಜಾಹೀರ ಮಾಡುವದು ಯುಕ್ತ ತೋರಿ ಕೆಳಗಿನ ಪತ್ರವನ್ನು ಪ್ರಸಿದ್ಧಪಡಿಸಲಿಕ್ಕೆ ತಮಗೆ ಅಧಿಕಾರ ಕೊಟ್ಟಿದೆ.

ಕೌನ್ಸಿಲದ ಬಹಿಷ್ಕಾರದ ಠರಾವು ನನ್ನ ಮತಕ್ಕೆ [illegible] ಮತ್ತು ನನ್ನ ಅಭಿಪ್ರಾಯ [illegible] ಚುನಾವಣೆಯ ಕಾರಣದ ಕಕ್ಷಿ [illegible] ರಾಜೀನಾಮೆ [illegible] ಕಾರಣದಿಂದ ಕಾಂಗ್ರೆಸದ [illegible] ಕಾಂಗ್ರೆಸದ ಸಭಾಸದರೂ [illegible] ಕೌನ್ಸಿಲದಲ್ಲಿ ಕಾಂಗ್ರೆಸದವರೆಂದು ಆರಿಸಿ ಬಂದಕಾರಣ ಅನುಮೋದನಕ್ಕಾಗಿ ಕಾಂಗ್ರೆಸದ [illegible]ಗೆ ಮಾನಕೊಟ್ಟು, ಮುಂಬಯಿ ಕೌನ್ಸಿಲದ [illegible] ನನ್ನ ಸ್ಥಳಕ್ಕೆ ಮೊದಲೇ ಗೊತ್ತುಮಾಡಿ [illegible] ರಾಜೀನಾಮೆಯನ್ನು ಕೊಡತಕ್ಕವನಿದ್ದೇನೆ ಮತ್ತು ಈ ಸಲ್ಲದ ಕೌನ್ಸಿಲದ ಅಧಿವೇಶನಗಳಿಗೆ ಅಥವಾ ಕಾಂಗ್ರೆಸ ಸಂಸ್ಥೆಗಳ ಆಜ್ಞೆಯ ಹೊರತು ಅಥವಾ ಪುನಃ ಆರಿಸಿ ಬಂದ ಹೊರತು ಹಾಜರಾಗುವದಿಲ್ಲ. ನನ್ನ ರಾಜೀನಾಮೆಯನ್ನು ಯೋಗ್ಯ ಅವಧಿಗೆ ಕಳಿಸಿಕೊಡುತ್ತೇನೆ.

ತಮ್ಮ

ವಿಶ್ವನಾಥ ನಾರಾಯಣ ಜೋಗ.

ರಾಜದ್ರೋಹದ ಆರೋಪದ ದೆಸೆಯಿಂದ ಶಿಕ್ಷೆ ಹೊಂದಿ, ಬಾರಿಶಾಲದ ತುರಂಗದಲ್ಲಿರುವ ಬಂಗಾಲದ ಓರ್ವ ಮುಂದಾಳುವಾದ ಶ್ರೀ. ಸತೀಂದ್ರನಾಥಸೇನರು ಅನ್ನತ್ಯಾಗ ಮಾಡಿದ್ದಾರೆ, ಸಕ್ಕ[illegible]ಗೆ ಮಾತ್ರ ತಕ್ಕೊಳ್ಳುವರು. ಇವರ ಪ್ರಕೃತಿಯು ಚಿಂತಾಜನಕವಾಗಿರುತ್ತದೆ.

ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಉಮೇದವಾರ

ವೀರನಗೌಡ ವೀರಬಸನಗೌಡ ಪಾಟೀಲ ಬಿ. ಎಜಿ; ಬಿ. ಎಸ್. ಸಿ; ಇವರ

ಚುನಾವಣೆಯ ಪತ್ರಿಕೆಯು.

ನಾಮದಾರ ಚೆಳವಿಯವರು ಕಾಂಗ್ರೆಸ್ ಆಜ್ಞೆಯ ಪ್ರಕಾರ ಲೆಜಿಸ್ಲೇಟಿವ್ಹ ಅಸೆಂಬ್ಲಿಯೊಳಗಿನ ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಟ್ಟಿರುವರಷ್ಟೇ! ಆ ಸ್ಥಳಕ್ಕೆ ನಾನು ಉಮೇದವಾರನಾಗಿ ನಿಂತಿದ್ದೇನೆ.

ನಾನು ಮುಂಬಯಿ ವಿಶ್ವವಿದ್ಯಾಲಯದ ಪದವೀಧರನಿದ್ದೇನೆ. ಯಾವ ಕಾಲಕ್ಕೆ ಲಿಂಗಾಯತನು ಬಿ. ಎ ಆದಮಾತ್ರಕ್ಕೆ ದೊಡ್ಡ [illegible] ಕೆಲಸ ದೊರಕಿಸುವದು ಸುಲಭವಾಗಿತ್ತೋ ಅಂ[illegible] ಕಾಲಕ್ಕೆ ಆ ಹಾದಿಯನ್ನು ಬಿಟ್ಟು ಸಮಾಜದ ಸೇವೆಗಾಗಿ ಮತ್ತು ವಿದ್ಯಾಪ್ರಸಾರಕ್ಕಾಗಿ ಸ್ವಾರ್ಥತ್ಯಾಗ ಮಾಡಿ [illegible] ವರ್ಷ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯ [illegible]ನಾಗಿ ಗಿಲಗಂಚಿ ಅರಟಾಳ ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ.

ಕದೀಮ ಮತ್ತು ಜದೀದವೆಂಬ ಶಬ್ದವು ಪರ್ಶಿಯನ್ ಅಥವಾ ಉರ್ದು ಆಗಿರುತ್ತದೆ. ಕದೀಮ ಎಂದರೆ ಹಳೆಯದು ಜದೀದವೆಂದರೆ ಹೊಸದು. ರಾಜರ ಕಾಲದಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಗ್ರಾಮ ಪಂಚಾಯತಿಯ ಸ್ಥಾಪನೆಯಾಗಿ, ಬಾರಾ ಬಲುತೆದಾರರ ವ್ಯವಸ್ಥೆಯು ಆಗಿನಿಂದ ಗೌಡ ಮತ್ತು ಕುಲಕರ್ಣಿಯರು ಆ ಊರ ಬಾರಾ ಬಲುತೆದಾರರಲ್ಲೊಬ್ಬರಾಗಿದ್ದಾರೆ. ವೇದಗಳ ಕಾಲದಿಂದ ಆದಿಲಶಾಹಿಯ ಮೊಗಲಾಯಿ ಪೇಶ್ವಾಯಿಗಳು ಆದರೂ ಗೌಡ ಕುಲಕರ್ಣಿಯರು ಸ್ಥಿರವಾಗಿದ್ದಾರೆ. ಇಂದ್ರನು ಬದಲಿದರೂ, ಇಂದ್ರಾಣಿಯು ಬದಲಾಗುವದಿಲ್ಲ ವೆಂದು ಪುರಾಣದಲ್ಲಿ ಹೇಳುತ್ತಾರೆ. ಅದೇ ಪ್ರಕಾರ ರಾಜ್ಯ ಬದಲಿದರೂ, ಗೌಡ ಕುಲಕರ್ಣಿಯರು ವಂಶಪರಂಪರೆಯಾಗಿ ಇದ್ದೇ ಇದ್ದರು. ಇಂಗ್ರೇಜಿ ಸರಕಾರದವರು ಮಹಾರಾಷ್ಟ್ರ ದ [illegible] ಆ ವಸ್ತು ಸ್ವಾಧೀನ ಮಾಡಿಕೊಂಡು [illegible] ಪರ [illegible]. ಸುಮಾರು ವರ್ಷಗಳ [illegible] ಗೌಡ ಕುಲಕರ್ಣಿಯರ ಹಕ್ಕಿಗೆ ಬಾಧೆ ತಂದು ಅವರು ಊರ ತಂದೆ ತಾಯಿಗಳೆಂದು ತಿಳಕೊಂಡು ಅವರು ಗ್ರಾಮದಲ್ಲಿ ನಿಜವಾದ ಅಧಿಕಾರಿಗಳಾಗಿ, ಅವರ ಜೊತೆ ಕಡ್ಡಿಗಳೆಂಬುವದಲ್ಲದೆ ಅಗತ್ಯ ಜನ ಭಯಕ್ಕೆ ಒಳಪಟ್ಟಿದ್ದರಿಂದ, ವತನದಾರರಿಗೆ ಪೋಟಗಿ ಕೊಟ್ಟು, ಅವರ ಬದಲಾ ತಲಾಟಿಗಳನ್ನು ನೇಮಿಸುವ ಕಪಟನಾಟಕ ನಡಿಸಿದರು. ಗೌಡ ಕುಲಕರ್ಣಿಯರು ಪಂಪರೆಯ ವತನದಾರ ಹಕ್ಕುದಾರರಾದರೂ, ಕುಲಕರ್ಣಿಯರ ಮೇಲೆ ಮಾತ್ರ ದಾಳಿಕೊಂಡರು. ಈ ಪಕ್ಷಪಾತ ಮತ್ತು ಸರಕಾರದ ಸ್ವಾರ್ಥವು ಕುಲಕರ್ಣಿಯರ ಅಂತಃಕರಣದಲ್ಲಿ ಬಾಣ ನಟ್ಟಂತಾಗಿ, ಅವರು ಸರಕಾರ ಕೃತ್ಯದ ವಿರುದ್ಧ ದೊಡ್ಡ ಚಳವಳಿ ಎಬ್ಬಿಸಲು ಸರಕಾರವು ಆ ವಿಚಾರವನ್ನು ರದ್ದುಪಡಿಸಿತು.

ಇದರ ನಂತರ ಈಗ ಇವರು ಸರಕಾರ ನನ್ನ ಕನ್ನ ಪತಿಯಿಂದ ಡೆಪ್ಯುಟಿಯಾಗಿ ನೇಮಿಸಬಾರದೆಂದು ಹೇಳಿ, ಅವರ ಹಕ್ಕನ್ನು ಕಸಕೊಳ್ಳ ಹತ್ತಿರುತ್ತದೆ. ವತನ ಕುಲಕರ್ಣಿಯರದು. ಕಸ್ತ್ಯ ಕುಲಕರ್ಣಿಯರದು. ಇಂಗ್ರೇಜಿ ಸರಕಾರವು ಸುಮಾರಾಗಿ ಹಕ್ಕುದಾರರಾಗಿರುವಂಥವರ ಹಕ್ಕನ್ನು ಈಗ ಕಸಕೊಳ್ಳುವದೆಂದರೆ ಚಮತ್ಕಾರವಾಗಿದೆ. ಈ ಮೊದಲು ಹೇಳಿದಂತೆ ರಾಜ್ಯಕಾರಭಾರದಲ್ಲಿ ಜಾಣರಾದಂಥವರು ಬೇಕಾದರೆ ಆ ಯೋಗ್ಯತೆಯವನ್ನು ನೇಮಿಸಿಕೊಳ್ಳಬೇಕೆಂದು ಗ್ರಾಮಸ್ಥರಿಗೆ ಹುಕುಮು ಮಾಡಬಹುದು. ಆದರೆ ಡೆಪ್ಯುಟಿಯನ್ನು ನೇಮಿಸಿಕೊಳ್ಳುವ ಅಧಿಕಾರವನ್ನೇ ಕಸಕೊಳ್ಳುವದು ಎಲ್ಲಿಯ ನ್ಯಾಯ! ಅವರ ಹಕ್ಕನ್ನೆ ಕಸಕೊಳ್ಳುವಂಥ ಅನ್ಯಾಯ ಮಾಡಿದಂತಾಗುತ್ತದೆ.

ವತನದಾರರು ಡೆಪ್ಯುಟಿ ನೇಮಿಸುವದು, ಮತ್ತು ಸರಕಾರದವರು ನೇಮಿಸಿಕೊಳ್ಳುವದು; ಇವೆರಡರಲ್ಲಿಯೂ ಒಂದು ರಹಸ್ಯವುಂಟು. ವತನದಾರರು ನೇಮಿಸಿದರೆ ಡೆಪ್ಯುಟಿಯು ಅವರ ಅಂಕಿತನು, ಜವಾಬದಾರನೂ ಆಗುವನು. ಸರಕಾರವು ನೇಮಿಸಿದರೆ ಸರಕಾರದ ಭೃತ್ಯನಾಗುವನು. ಸರಕಾರ ಹೇಳಿದಂತೆ ನಡಿಯುವನು ವತನದಾರರನ್ನೇಕೆ ಕೇಳುವನು? ಹೆಸರಿಗೆ ಮಾತ್ರ ವತನದಾರರ ಡೆಪ್ಯುಟಿಯಾಗುವನು. ನಿಜವಾಗಿ ಸ್ವಾಮಿ ಕಾರ್ಯ [illegible] ಸಂಚಾರದಿಂದ ನೇಮಿಸಲ್ಪಟ್ಟ ಈ ಡೆಪ್ಯುಟಿಯು [illegible] ತೊಂದರೆ, ಊರ ಮನೆಗಳ [illegible]. ಮತ್ತು ಪರ ಪದೇ [illegible] ಹಕ್ಕುಗಳಲ್ಲಿ ಈ ಕಿಟಿಕಿಯಪದ್ಧತಿಗಳೇ ದೊಡ್ಡ ಅನರ್ಥಕಾರಕ ಕಾರ್ಯಭಾಗಗಳಿಗೆ ಮೂಲವಾಗುತ್ತವೆ. ಮುಂದೆ ಆದಷ್ಟು ವತನದಾರರ ಮಹತ್ವವನ್ನು ಕಡಿಮೆ ಮಾಡಬೇಕೆಂದೇ ಸರಕಾರದ ಅಂತರಂಗದ ಧ್ಯೇಯವಾಗುತ್ತದೆಂದು ಈ ವಿವೇಚನೆಯಿಂದ ತಿಳಿಯುವದು. ಅದ್ದರಿಂದ ವತನದಾರರ ಹಕ್ಕು, ಸರಕಾರಿಗೇ ಕಾಯಂ ಪಡೆದು ಪ್ರಯತ್ನಿಸುವ ಅವಶ್ಯಕ.

ಹಣ್ಣಿನ ರೈತರು ಮಾಮಲೇದಾರರ ಮೇಲೆ ಜಪ್ತಿ ಗೆದ್ದರು!!

[illegible]

ಮಾಮಲೇದಾರರು ರೈತರಿಗೆ ಸೈದ ಬೈಗಳು

ಒಮ್ಮೆ ಬೈದದ್ದನ್ನು ತಿರುಗಿ ಬೈದಿಲ್ಲ

[illegible]

ಪ್ರಾಂತ ಸಾಮ್ಮೇಳನ ರೈತರ

[illegible]

ತಾ ೧೧-೩-೩೦

ಸರಕಾರ ಮತ್ತು ವತನದಾರ ಗೌಡಕುಲಕರ್ಣಿಯರು

ಸರಕಾರವು ಪ್ರತಿದಿನದು ಹಕ್ಕು ಬಾಧಿಸಲ್ಕೆ [illegible]

[illegible]

ಕದೀಮ ಕುಲಕರ್ಣಿಯರು.

ಒಡೆದ ಇಂಗ್ರೇಜಿ ಸರಕಾರವು.

ಕದೀಮ ಮತ್ತು ಜದೀದವೆಂಬ ಶಬ್ದವು ಫಾರಿಸಿ ಅಥವಾ ಉರ್ದು ಆಗಿರುತ್ತದೆ. ಕದೀಮವೆಂದರೆ ಹಳೆಯದು ಜದೀದವೆಂದರೆ ಹೊಸದು. [illegible]

[illegible]

ವಿವಿಧ ವರ್ತಮಾನಗಳು

ಜಾಹೀರ ಸೂಚನೆ

ಔದ್ಯೋಗಿಕ ಶಿಕ್ಷಣ

ಶ್ರೀದತ್ತ ವ್ಹೀವಿಂಗ್ ಮಿಲ್ ಹುಬ್ಬಳ್ಳಿ.

ಮೈಸೂರು ಊದುಬತ್ತಿ

ಸೂಚನೆ.

THE UNITED KARNATAK INSURANCE COMPANY
LTD. DHARWAR

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರನ್ಸ
ಕಂಪನಿ ಲಿಮಿಟೆಡ್ ಧಾರವಾಡ

K. L. Huilgolkar.

THE ANKALGI BANK LTD.

Head Office-
Kamankatti Dharwar
Branches
Ranebennur & Kerekere

5%
Interest allowed on
ANNA SAVINGS BANK
DEPOSIT.

Dharwar 31-1927 | KB ANKALIGI
Managing Director

ಬಾಲರಂಜನ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಧಾರವಾಡದಲ್ಲಿ ಮೋಟಾರ ನಡೆಸುವದನ್ನು ಕಲಿಯುವ ಸೋಯಿ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ವಿವಿಧ ವರ್ತಮಾನಗಳು

ಮಹಾತ್ಮರು ಈಗಿನ ಹೋಗಿದ್ದಲ್ಲಿ ಸನಾತನ ಧರ್ಮಾಭಿಮಾನಿಗಳಾದ ಇಪ್ಪತ್ತು ಸಾವಿರ ಜನರು ಕರಿನಿಶಾನೆ ಹಿಡಿದು ಅವರನ್ನು ಅವಮಾನಗೊಳಿಸಿದರೆಂದು ಶ್ರೀ ಧನ್ವಂತರಿ ಎಂಬ ವೈದ್ಯಕೀಯ ವಾರ ಪತ್ರಿಕೆಯಲ್ಲಿ ಒಂದು [illegible] ತಕ್ಕೊಳ್ಳಲ್ಪಟಿದೆ ಅವರಿಗಾ [illegible] ವಾಗ ನಟಿ ದಟವಿನಿಸುವಂಥ ಸಾರಾಸಾರ ವಿಚಾರದ [illegible] ವಿಲಬೇಕು

ಮುಂಬಯಿಯ ಯುನಿವ್ಹರ್ಸಿಟಿಯ ವ್ಹಾಯಿಸ ಚಾನ್ಸಲರರಾದ ಮಿ ಮಿರಜಾ ಅಲಿ ಮಹಮದ ಸಾಹೇಬರೂ, ದಿವಾನ ಬಹಾದ್ದೂರ ವೈದ್ಯ ವಕೀಲ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ

ಬೆಳಗಾವಿಯ ಹತ್ತರಿರುವ ಪಾಚ್ಛಾಪೂರ ಸ್ಟೇಶನದಲ್ಲಿ ಒಂದು ಗೂಡ್ಸಬಂಡಿಯು ನಿಲ್ಲುವ ಸಮಯದಲ್ಲಿ ಸ್ಟೇಶನಮಾಸ್ತರರ ಪತ್ನಿಯು ಇಂಜಿನ ಬುಡಕ್ಕೆ ಸಿಕ್ಕು ಛಿನ್ನವಿಚ್ಛಿನ್ನವಾಗಿ ಮಡಿದರು

ನಾಮದಾರ ಬೆಳವಿಯವರ ಪುತ್ರರಾದ ಶ್ರೀ [illegible] ಹಾಯಕೋರ್ಟಿನಲ್ಲಿ ವಕೀಲಿ ಮಾಡಲು [illegible]

ನಿಜಾಮ ಸರಕಾರದವರು ಸನಿಯಕ್ಕೆ ಎರಡು ಕೋಟಿ ರೂಪಾಯಿ ಕೊಟ್ಟು ನಿಜಾಮ ಗ್ಯಾರಂಟಿಡ್ ರೇಲ್ವೆಯನ್ನು ಆ ಕಂಪನಿಯಿಂದ ಕೊಳ್ಳುವರು

ಪ್ರಾಥಮಿಕ ಶಿಕ್ಷಣವನ್ನು ಹೇಗೆ ಸಾರ್ವತ್ರಿಕ ಮಾಡಬೇಕೆಂಬ ಯೋಜನೆಯನ್ನು ಸಿದ್ಧ ಮಾಡಲು ಪಂಜಾಬ ಸರಕಾರದವರು ಒಂದು ಕಮೀಟಿ ನೇಮಿಸಿದ್ದಾರೆ.

ತಿನ್ನೆವೆಲ್ಲಿಯ ಹತ್ತರ ದರೋಡೆಗಾರರು ಪೋಸ್ಟ ರನರನನ್ನು ಕೊಂದು, ಪೋಸ್ಟಿನ ಚೀಲಗಳನ್ನು ತಕ್ಕೊಂಡು ಪಲಾಯನ ಹೇಳಿಸಿದ್ದಾರೆ.

ಭೂಮಧ್ಯಸಮುದ್ರದಲ್ಲಿ ಕ್ರೀಟ ನಡುಗಡ್ಡೆಯಲ್ಲಿ ಭೂಕಂಪವಾಗಿ ಹತ್ತು ಹಳ್ಳಿಗಳು ನೆಲಸಮವಾದವು.

ಜಿ. ಆಯ. ಪಿ. ರೇಲ್ವೆಯ ಸಂಪು ಯಥಾಪ್ರಕಾರ ನಡೆದಿದೆ. ಇಂದಿಗೆ ೧೫ ದಿವಸವಾಯಿತು. ಕಂಪನಿಯವರು ಕೂಲಿಕಾರರೊಂದಿಗೆ ಒಪ್ಪಂದ ಮಾಡಿಕೊಂಡ ವಿನಹ ಪರಿಣಾಮವು ನೆಟ್ಟಗಾಗದೆಂದು ನಾಗಪೂರದ ತಾರು ಹೇಳುತ್ತದೆ.

ಮುಂಬಯಿ ಯಲ್ಲಿ ಗುಡ್ಸ ತಕ್ಕೊಳ್ಳುವರು ಸರಕು ಬಹಳವಾದರೆ ಕಲ್ಯಾಣದ [illegible] ಕಳಿಸುವ ಮುಂದೆ ಹೋದ ವರ್ತಮಾನವೇ ಇಲ್ಲವದಲ್ಲೆಂದು ಮುಂಬಯಿಯ ಮುಂಡೇಕಾರ ಸಂಘದ ಸೇಕ್ರೆಟರಿಯು ಹೇಳುತ್ತಾನೆ

ಕೋಯಿಂಮತ್ತೂರನೆ ಹತ್ತರ ಮೋಟಾರಗಳ ಹಾದಾಟವಾಗಿ ಹತ್ತು ಜನರು ಸತ್ತರು. ಅನೇಕರು ಘಾಯ ವಾಗಿದ್ದಾರೆ.

ಬೆಳಗಾವಿಯ ದಂಡಿನಲ್ಲಿ ಒಬ್ಬ ಒಬ್ಲೇನು ಮಾದರ ಜಾತಿಯ ಸೂಳೆಯನ್ನು ಗುಂಡಿನಿಂದ ಕೊಂದು, ತಾನು ಹತ್ತರವೇ ಇದ್ದ ಬಾವಿಯಲ್ಲಿ ಹಾರಿಕೊಂಡು ಆತ್ಮಹತ್ಯ ಮಾಡಿಕೊಂಡನು.

ಹೋದ ವರ್ಷ ಇ ೧ ಹಿಂದುಸ್ಥಾನದ ರೇಲ್ವೆಯ ಹುಟ್ಟುವಳಿಯು ಒಂದು ಅಬ್ಜ ನಾಲ್ಕು ಕೋಟಿ, ೮೮ ಲಕ್ಷ ರೂಪಾಯಿಯಾಗಿರುತ್ತದೆ ಎಲ್ಲ ವೆಚ್ಚ ಹೋಗಲಾಗಿ ಸರಕಾರಕ್ಕೆ ಒಂಭತ್ತು ಕೋಟಿಯ ಉಳಿತಾಯವಾಗುವದು.

ಪುಣೆಯ ಪ್ರಸಿದ್ಧ ಡಾಕ್ಟರರಾದ ರಾ. ಬ. ಶಿಖರೆಯವರು ಅರ್ಧಾಂಗವಾಯುವಿನ ವಿಕಾರದಿಂದ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಶಿರಸಿಯಲ್ಲಿ ಅಕ್ಕಿಯ ಗಿರಣಿಗಳ ಹತ್ತರ ಬೆಂಕಿ ಬಿಟ್ಟು ಸರ್ವಸಾಧಾರಣವಾಗಿ ಬಿದ್ದಿದೆ. ಇದಕ್ಕೆ ಬೆಂಕಿ ಹತ್ತಿ, ಅದರಲ್ಲೊಂದು ಕೋಣ ಬಿದ್ದು ಸುಟ್ಟುಕೊಂಡು ಸತ್ತು ಹೋಯಿತು.

ಅಸೆಂಬ್ಲಿಯಲ್ಲಿ ಪ್ರಸಿಡೆಂಟ ಪದವಿಗಾಗಿ ವಿಠ್ಠಲಭಾಯಿ ಪಟೇಲರನ್ನು ಮಿ. [illegible] ವ ಸೂಚಿಸಿದ್ದಾರೆ ತಿಳಿಸಿದರು. ಮತ್ತು ಸರಕಾರದ ಪಕ್ಷದಿಂದ ಅಸೆಂಬ್ಲಿಯ ಲೀಡರರಾದ ಮಿ. ಕೆ ಜಾರಸಾಹೇಬರಲ್ಲಿ ವಿಶ್ವಾಸವಿಲ್ಲೆಂಬ ಠರಾವನ್ನು ಕಾಂಗ್ರೆಸದ ಮೆಂಬರರಾದ ಮಿ. ಮಹಮದ ಹುಶೇನ

ಜಾಹೀರ ತಿಳುವಳಿಕೆಯು

ಕೆಳಗೆ ಸಹಿ ಮಾಡಿದವರು ಜನರ ಅಂಗಡಿ ರೇಶೆ, ಜಿನ್ನ, ಅಪರ (ಹೊತ್ತು ಕೊಂಡಿರುವ ಸರಕು) ಜರ ವ [illegible] ವಗೈರೆ ವಾಪಾರದಲ್ಲಿ ೫೦-೬೦ ವರ್ಷಗಳಿಂದ ಅನುಭವಿಸಿದ್ದು ಮೂಲಕ ಅವುಗಳನ್ನು ಪರೀಕ್ಷಾ ಮಾಡುವ [illegible] ಣೆಗಳಲ್ಲಿ ಒಳ್ಳೆಗಳಲ್ಲಿ [illegible] ರಯದೆ ಮೋಸಹೋಗಿ ಹಿಂದು [illegible] ಕಂಡುಬರುತ್ತದೆ. ಆದ್ದರಿಂದ ನಮ್ಮ [illegible] ನ ಮೇಕಿಂದ ಜನರ ವಗೈರೆ [illegible] ಗ್ಯ ಕಮಿಶನ್ನ ಕೊಟ್ಟು [illegible] ವು ಮತ್ತು [illegible] ದರೆ ನಿಖರವಾಗಿ [illegible] ಬಾಗಿ ಉಳಿಯುವದು [illegible] ವದು.

ತಾ॥ ೧೧-೧-೧೯೭೭ನೆ ಇಸ್ವಿ

ಸಹಿ ತುಕಾರಾಮ ಕೃಷ್ಣಾ ಲದ್ವಾ
ಜನರ ಕಮಿಶನ್ನ ಏಜಂಟ್ಸ ಗದಗ
೧೪-೧ ೧೯೩೦

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಸ್ಕೂಲ ಮುನವಳ್ಳಿ

[illegible] ನಸ್ತ್ರ ಕಟಿಂಗ ಮತ್ತು ಟೇಲರಿ [illegible] ನರ ತೆರೆದಿರುತ್ತೇವೆ ಎರಡು ತಿಂಗಳಲ್ಲಿ ಕಟಿಂಗ ಅಂದರೆ ಅರಿವೆ ಕತ್ತರಿಸುವದನ್ನು ಕಲಿಸುವೆವು ಕಟಿಂಗ [illegible] ಟೆ ಲರಿಂಗ ಸಹಿತ ನಾಲ್ಕು ತಿಂಗಳಲ್ಲಿ ಕಲಿಸುವೆವು ಕಟಿಂಗಕ್ಕೆ ೪೦, ಟೇಲರಿಂಗಕ್ಕೆ ೧೧ ರೂಪಾಯಿ ಫೀ ಬೀಳುವದು ಶಿಕ್ಷಣವನ್ನು [illegible] ಈ ಮೂರೂ ಬೇಕಾದ ಭಾಷೆಯಲ್ಲಿ ಕೊಡುವೆವು ನಮ್ಮಲ್ಲಿಯ ಶಿಕ್ಷಣದಿಂದ ವಿದ್ಯಾರ್ಥಿಯು ಸ್ವಂತ ಬಲದಿಂದ ತಿಂಗಳಿಗೆ ಕನಿಷ್ಠ ೬೦ ರೂಪಾಯಿ ಗಳಿಸಬಲ್ಲನು ವಿಶೇಷ ಮಾಹಿತಿ ಬೇಕಾದರೆ ಸಮಕ್ಷಮ ಅಥವಾ ಒಂದಾಣೆಯ ಟಿಕೀಟ ಇಟ್ಟು ಪತ್ರವ್ಯವಹಾರದಿಂದ ತಿಳಕೊಳ್ಳಬೇಕು

ಆರ್ ಬಿ ಮುಷ್ಟೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಾಟಿಸ್ಟ
ಮುನವಳ್ಳಿ

ಶೀರೆ! ಪತ್ತಲ! ಕಿರಗ!!

ಶ್ರೀದತ್ತ ವ್ಹೀವಿಂಗ್ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ ಖರೀದಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಒಣ್ಣ ಪಕ್ಕಾ, ಒಣ್ಣ ಹೋದರೆ ಮಾಲು ತಿರಗಿ ತಕ್ಕೊಳ್ಳುವೆವು

ಏಜಂಟ — ಡಿ. ಜಿ. [illegible]
ಕೊಪ್ಪಿಕರ ರೋಡ ಹುಬ್ಬಳ್ಳಿ

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ, ಇದು ಬಹಳ ಸುವಾಸನೆಯುಳ್ಳ [illegible] ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಸಮಾರಂಭಗಳಲ್ಲಿಯೂ ಮತ್ತು ಪ್ರತಿ ದಿವಸ ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೭೨ ಕಡ್ಡಿಯ ಸೇರು ೧ ಕ್ಕೆ ೨-೦-೦
ಕೃಷ್ಣ ಪಾಂಚಾತ ಅತ್ತರು ತೊಲೆ ೧ ಕ್ಕೆ ४-೦-೦

೧೯-೧೧-೨೬ ಮೈಸೂರ ಸ್ಟೋರ್ಸ,
ಬೆಳಗಾವಿ ಓಣಿ,
ಹುಬ್ಬಳ್ಳಿ

ಸೂಚನೆ

ಎ. ರ್. ಶ್ರೀನಿವಾಸ ಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

THE UNITED KARNATAK INSURANCE COMPANY LTD DHARWAR

ಸನ ೧೯ [illegible] ಸ್ಥಾಪಿತ ಕಳಿಸುಕೊಳ್ಳುವ ಡಾ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

([illegible] ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಬೋರ್ಡದ [illegible] ಪರಕಾರಿ ವಕೀಲ ನು [illegible] ಧಾರವಾಡ ಚೇರಮನ್
೨ [illegible] ಎಸ್ ಎಸ್ ಆಂಡ ಎಸ್ ಗದಗ
೩ [illegible] ಬಿ ಎ ಅಳ್ಳೆಗೇರಿ
೪ [illegible] ಹುಬ್ಬಳ್ಳಿ
೫ [illegible] ಬಿ ಎ ಎಲ್ ಎಲ್ ಬಿ ವಕೀಲ ಗದಗ
೬ [illegible] ಮೈಲಹೊಂಗಲ
೭ [illegible] ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ

[illegible] ಈ ಕಂಪನಿಯು [illegible] ಕನ್ನಡಿಗರ ಆಗುತ್ತಾರೆ ಪರದೇಶಿ ಕಂಪನಿಗಳಿಗೆ [illegible] ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಹುಟ್ಟಿ [illegible] ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು

ಕಂಪನಿಯು [illegible] ಇರುವವೆ ಮತ್ತು ವಿಮೆ ಇಳಿಸುವ ಕೆಲಸವು ಮಾರ್ಚ ತಿಂಗಳ ೧ನೇ ತಾರೀಖಿನಿಂದ ಪ್ರಾರಂಭವಾಗುವದು [illegible] ಮತ್ತು ವಿಮೆಯ [illegible] ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು ಎ [illegible] ವಿಮಾದ ದರಗಳು ಲಾಭಕಾರವಾಗಿ [illegible] ಪತ್ರವ್ಯವಹಾರ ಮಾಡಬೇಕು

K. L. Huilgolkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

THE ANKALIGI BANK LTD.

Head Office–
Kamankatta Dharwar
Branches
Ranebennur & Hirekerur

5%

Interest allowed on
ANNA SAVINGS BANK DEPOSIT.

Dharwar } KB ANKALIGI
3-1-1927 } Managing Director

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಸುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣ ಸ್ಥಳ.

[illegible] ವಿದ್ಯಾರ್ಥಿಗಳು ಜನರ ಕೇವಲ ಪ್ರಾಣ, ಜನಗಳ [illegible] ಒಂದೊಂದು ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು [illegible] ಈ ಪಟ್ಟಣದ [illegible] ನ್ಯಾಯ ದಿಂದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆರೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನ್ನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ಸೇರಬೇಕೆಂದು ಮುಂದಿನ ಈ ಜಾಹೀರಾತು [illegible] ಫೆಬ್ರುವರಿ ತಿಂಗಳೊಳಗಾಗಿ ಹತ್ತು ಜನರನ್ನು ತಕೊಳ್ಳುವೆವು. [illegible] ಸ್ಥಳ [illegible] ಸೂಕ್ಷ್ಮ [illegible] ಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಿಗಿ.
ಮುನಸೂಫ ಕೋರ್ಟಿನ ಹತ್ತರ, ಧಾರವಾಡ.

ಬಾಲರಂಜನ

(ಆ ವಾನಂದರು ಬರೆದದ್ದು)

ದ್ವಿಕ್ಕನ್ಮರ ಒತ್ತಕ್ಷರಗಳಿಲ್ಲದ ಸುರಸ ನೈತಿಕ ಕಥೆಗಳ ಪುಸ್ತಕ! ಚಿಕ್ಕ ಮಕ್ಕಳಿಗೆ ಓದುವ ಅಭಿರುಚಿ ಹಚ್ಚುವಂಥದು!! ಶಿಕ್ಷಕರೂ ಮಕ್ಕಳ ಪಾಲಕರೂ ಬೇಗನೆ ಒಂದೊಂದು ಪ್ರತಿ ಬೇಡುವವರು ಎಂಟು ದಿಕ್ಕಿನ ಟಿಕೀಟು ಕಳಿಸಬೇಕು ೨೦-೨-೨೭ಕ್ಕೆ ಪ್ರಕಟವಾಗುವದು

ಲಕಮನಹಳ್ಳಿ ಓಣಿ } ಆಡಳಿತಗಾರರು,
ಧಾರವಾಡ } ವಿದ್ಯಾರ್ಥಿಗಳ ಗುಂಪು

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲಾಯಿತು. ಚಳುವಳಿ ನಡೆಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವವು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ ಬೇಕು.

ಮಧ್ವರಾವ ಜಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಡಲು ಕೂಳಲಾಗುದು, ದರವನ್ನು ಸಮಕ್ಷಮ ತಿಳಕೊಳ್ಳಬೇಕು

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಕ್ಷಿ ಇಟ್ಟುಕೊಳು ವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಎನ್ನರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಂಕಾಲಿ ಛಾಯ್ರ್ ಬಾಳಾಜಿ ಹೊಸಮನಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾ

ಲಿಂಗೈಕ್ಯರಾದ ಹಾನಗಲ್ಲಿನ ಮಹಾಸ್ವಾಮಿಗಳು-

—(೦)—

ವೀರಶೈವರಲ್ಲಿ ಮತ್ತು ಕರ್ನಾಟಕದಲ್ಲಿ ಸುಪ್ರಸಿದ್ಧರಾಗಿದ್ದ ಹಾನಗಲ್ಲಿನ ಶ್ರೀ ಕುಮಾರಸ್ವಾಮಿಯವರು ಲಿಂಗೈಕ್ಯರಾದರೆಂದು ಬರೆಯುವದಕ್ಕೆ ಅತ್ಯಂತವಾಗಿ ವಿಷಾದಿಸುತ್ತೇವೆ ಶ್ರೀಗಳವರು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಜನಾಂಗದ ಉನ್ನತಿ ಕಾರ್ಯದಲ್ಲಿ ಆಸಕ್ತರಾಗಿ, ಅವರಲ್ಲಿ ಧರ್ಮ ಸಂಸ್ಕೃತಿ ಮತ್ತು ಸಂಸ್ಕೃತ ಅಭ್ಯಾಸದ ಹೆಚ್ಚು ಅರಿವನ್ನುಂಟು ಮಾಡಿಕೊಟ್ಟು, ತಮ್ಮ ಹೆಸರನ್ನು ಅಜರಾಮರ ಮಾಡಿರುತ್ತಾರೆ. ಧಾರವಾಡದಲ್ಲಿ ಮೊದಲನೆಯ ಸಾರೆ ವೀರಶೈವ ಮಹಾಸಭೆಯು ನೆರೆಯಲಿಕ್ಕೆ ಇವರ ಪ್ರೋತ್ಸಾಹವೇ ಕಾರಣವಾಯಿತು ಮತ್ತು ಬಾಗಲಕೋಟೆಯಲ್ಲಿ ಮಹಾ ಶಿವಾನುಭವ ಮಂಟಪ ಬಾದಾಮಿಯ ಹತ್ತರ ಶ್ರೀ ಶಿವಯೋಗ ಮಂದಿರ ಸ್ಥಾಪನೆಯಾಗಲಿಕ್ಕೂ ಇವರೇ ಮೂಲ ಪ್ರವರ್ತಕರೆಂದರು ಇವರ ಪ್ರೇರಣೆ ಮತ್ತು ಇವರಿಂದ ವೀರಶೈವ ಜನಾಂಗದಲ್ಲಿ ಜಾಗೃತವಾದ ಧರ್ಮಾಭಿಮಾನದಿಂದ ಲಿಂಗಾಯತ ವಿದ್ಯಾವರ್ಧಕ ಸಂಘಕ್ಕೆ ಸರಿಯಾಗಿ ಶ್ರೀ ಶಿವಯೋಗದ ಫಂಡು ಕೂಡಿತು. ಈ ರಕಮನ್ನು ಪ್ರಾಮಿಸರಿ ನೋಟುಗಳಲ್ಲಿ ಹಾಕದೆ, ವೀರಶೈವ ವರ್ತಕರಿಗೂ, ರೈತರಿಗೂ, ಕೂಲಿಕಾರರಿಗೂ ತಮ್ಮ ದ್ರವ್ಯದ ಉಪಯೋಗವಾಗುವಂತೆ ಜಿನ್ನು ಪ್ರೆಸ್ಸು ಮುಂತಾದವುಗಳಲ್ಲಿ ವಿನಿಯೋಗ ಮಾಡಿ ಪ್ರಾಮಿಸರಿ ನೋಟುಗಳಿಗಿಂತ ಹೆಚ್ಚು ಆದಾಯವಾಗುವಂತೆ ವ್ಯವಸ್ಥೆಗೊಳಿಸಿದ್ದು ಬಹುವಾಗಿ ಪ್ರಶಂಸನೀಯವಾಗಿರುತ್ತದೆ ಶ್ರೀಗಳವರು ಸ್ವಜನರೆಲ್ಲ ಒಕ್ಕಟ್ಟಾಗಿ, ಅವರು ಸಂಘಶಕ್ತಿಯಿಂದ ನಡೆಯಬೇಕೆಂದು ವಿಶ್ವ ಪ್ರಯತ್ನ ಮಾಡಿದರು ಪುಣ್ಯಸ್ಥಳವು ವಶ್ಯ ಮಾಡಿದರು. ಆದರೂ ಜನಾಂಗದೊಳಗಿನ ಜಾತಿಭೇದ ಹೆಚ್ಚಾಗುವದನ್ನು ಕಂಡು ಬಹುವಾಗಿ ವ್ಯಥೆಗೊಳ್ಳುವರು. ಆದರೆ ಇದೊಂದು ಹೃದ್ರೋಗವಾಗಿತ್ತೆಂದರೂ ಸಲ್ಲುವದು. ಈ ವಿಚಾರ ಹೇಗಿದ್ದರೂ, ಅವರು ವೀರಶೈವ ಜನಾಂಗದ ಮೇಲೆ ಮಾಡಿದ ಉಪಕಾರವು ಅನಂತವಾಗಿ ಉಳಿಯುತ್ತಿದ್ದು, ಅದನ್ನು ಯಾರೂ ಮರೆಯುವಂತಿಲ್ಲ.

ಮುಂಬಯಿ. ಪ್ರಖ್ಯಾತ ಡಾಕ್ಟರರಾದ ರಾವ ಬಹದ್ದೂರ [illegible] ಶಿವ ಇವರು ತನ್ನ ಹೆಂಡತಿಯ ರೋಗದ ಮೇಲೆ ಶಸ್ತ್ರ ಕ್ರಿಯೆ ನಡೆಸಿದ ಬಳಿಕ ಅಜಾಗರೂಕತೆಯಿಂದ ಮರಣವಾಯಿತೆಂದು ರಾಮಕೃಷ್ಣ ಇವರ ಕಡೆಯವರು ಡಾಕ್ಟರರ ಮೇಲೆ ಫಿರ್ಯಾದಿ ಮಾಡಿದ್ದು ಈಗ ವಿಚಾರಣೆ ನಡೆದಿದೆ.

ಕೆಲಸವಿಲ್ಲದವರಿಗೆ ಕೆಲಸ ದೊರಕಿಸಿ ಕೊಡುವ ಅಪೂರ್ವ ವ್ಯವಸ್ಥೆ

ಯುರೋಪದ ಪ್ರತಿಯೊಂದು ದೇಶ ನೋಡಿದರೆ ಉದ್ಯೋಗವಿಲ್ಲದೆ ಲಕ್ಷಾವಧಿ ಜನರು ಕಾಣುವರು. ಉದ್ಯೋಗವಿಲ್ಲದವರೆಂದರೆ- ಒತ್ತೀ ಸದುತ್ತಾ ಕೊತ್ತಿ ಗಳಿಯುವ ಜನರಲ್ಲ. ಕೆಲಸ ಮಾಡಿ, ಜೀವಿಸಬೇಕೆಂದರೂ, ಕೆಲಸ ದೊರೆಯದವರು ಇಂಥವರಿಗಾಗಿ ಕೆಲಸ ದೊರಕಿಸಿ ಕೊಡಲು- ಪೋರ್ತುಗಾಲ ಸರಕಾರದವರು ಒಂದು ಯೋಜನೆ ಮಾಡಿದ್ದಾರೆ ಜನರು ಈಗಿನಿಂದ ಕಡಿಮೆ ತಾಸು ದುಡಿದರೆ- ಉಳಿದ ತಾಸುಗಳು ನಿರುದ್ಯೋಗಿಗಳಿಗಾಗುವವೆಂದೇ ಇವರ ಮತ. ಸರಕಾರದ ಯೋಜನೆ ಏನೆಂದರೆ-

೧ ಕೂಲಿಕಾರರು ಪ್ರಾತಃಕಾಲದ ಏಳರಿಂದ ಸಾಯಂಕಾಲದ ಏಳರ ವರೆಗೆ ಮಾತ್ರ ದುಡಿಯತಕ್ಕದ್ದು

೨ ಅಂಗಡಿಗಳು ಹತ್ತರಿಂದ ಪ್ರಾರಂಭವಾಗಿ ಸಾಯಂಕಾಲದ ಆರೂವರೆ ಗಂಟೆಗೆ ಬಾಗಿಲ ಹಾಕಲೇ ಬೇಕು

೩ ಕಚೇರಿಗಳು ೫ ಗಂಟೆಗೆ ಬಂದಾಗಲೇಬೇಕು. ಮಧ್ಯದಲ್ಲಿ ಉಪಹಾರಕ್ಕೆಂದಾಗಲಿ, ವಿಶ್ರಾಂತಿಗೆಂದಾಗಲಿ ಒಂದೂವರೆ ತಾಸು ಬಿಡಬೇಕು ಆಗ ಒಂದು ಪಿಕ್ಕಿ ಕೂಡ ಅಲ್ಲಿಂಕೂಡದು.

ಕಾಬೂಲದ ಕಾರಸ್ಥಾನ

ಅಮೀರ ನಾದಿರಖಾನನಿಗೆ ಬಹಳ ಜಡ್ಡಾಗಿದ್ದು, ಈತನು ಕಾನ್ಸಟಂಟಿನೋಪಲ್ಲದಲ್ಲಿರುವ ತನ್ನ ಡಾಕ್ಟರರನ್ನು ವಿಮಾನ ಮಾರ್ಗವಾಗಿ ಕರಿಸಿಕೊಂಡಿದ್ದಾನೆ,

ಇದೇ ಸಮಯ ಸಾಧಿಸಿ ಅಮೀರ ಅಮಾನುಲ್ಲಾಖಾನನು ರಶಿಯ ಮಾರ್ಗವಾಗಿ ಕಾಬೂಲಕ್ಕೆ ಹೊರಟಿರುತ್ತಾನೆ

ರಶಿಯದವರು ಈ ಸಮಯದಲ್ಲಿ ಯಾರಿಗೆ ಸಹಾಯ ಮಾಡುವರೆಂಬದು ಗುಪ್ತವಾಗಿದೆ

ಕಾಬೂಲದ ಹುನಾರ ನವಿಯ ಕೂಳ್ಳದಲ್ಲಿ ಅಫಗಾನ ವೀರರು ಭಾಷೇ ಕುರಾಜಕಾರಣದ ಬಗ್ಗೆ ವಿಚಾರ ಮಾಡುತ್ತಿದ್ದಾರೆ

ಸಾಯಮನ್ನ ರಿಪೋರ್ಟು ಮತ್ತು ಕಾಯದೆ ಭಂಗ-

ಮಹಾತ್ಮರ ಕಾಯದೆಭಂಗವು ಎಪ್ರಿಲ್ದಲ್ಲಿ ಯೇ ಪ್ರಾರಂಭವಾಗುವದಷ್ಟೇ, ಇದು ಪ್ರಾರಂಭವಾಗುವ ಮುಂಚೆ ತಮ್ಮ ರಿಪೋರ್ಟು ಪ್ರಸಿದ್ಧವಾಗಬೇಕೆಂದು ಸರ ಸಾಯಮನ್ನರು ಒತ್ತರ ಮಾಡುತ್ತಿರುವರು ಆದರೆ ಕಾಯದೆಭಂಗದವರ ಸಾಯಮನ್ನರ ರಿಪೋರ್ಟಿನ ಸಾರಾಂಶದಿಂದ ತೃಪ್ತರಾಗರು. ಅವರ ಹಿಡಿತವೇ ಬೇರೆ ರಿಪೋರ್ಟು ಕರೆಮುಸಿಯ ಬದಲಾಗಿ ಒಂಗಾರದ ಮುಸಿಯಿಂದ ಬರೆದರೂ- ಕಾಯದೆಭಂಗದವರು ತಮ್ಮ ಜಾಹೀರನಾಮೆಯಂತೆ ದೀಕ್ಷಾಬದ್ಧರಾಗುವರು

ಹುಟ್ಟುವ ಮಕ್ಕಳಿಗೇತಕ್ಕೆ ವಿಷಪಾನ ಮಾಡಿಸುವಿರಿ?

೩೪ ತೊಲೆಯ ಡಬ್ಬಿ ಮೇಹದ್ವಂಸಿನಿ				೬-೦-೦
೧೭	,,	,,	,,	೩-೦-೦
೩೪	,,	,,	ಲಸ್ಟರ	೫-೮-೦
೧೭	,,	,,	,,	೩ ೦-೦

ಔಷಧಗಳಲ್ಲಿ ಗುಣವಿಲ್ಲೆಂದು ದೃಢಪಡಿಸಿದವರಿಗೆ ೧೦೦೦ ರೂಪಾಯಿ ಬಹುಮಾನ ಕೊಡಲ್ಪಡುವದು

ನಮ್ಮ ಮೇಹದ್ವಂಸಿನಿಯು ೩೫ ವರ್ಷದ ಕಾಲಾಂತರದ ರೋಗವನ್ನು ಧ್ವಂಸಮಾಡಿ, ಧಾತುಸ್ರಾವವನ್ನು ನಿಲ್ಲಿಸಿ ರೋಗಿಗೆ ಆರೋಗ್ಯವನ್ನುಂಟುಮಾಡಿದೆ ಈ ಔಷಧಿಯ ಸೇವನೆಯಿಂದ ಧಾತುಸ್ರಾವ, ಅಜೀರ್ಣ ಚರ್ಮರೋಗ ಬಿಳಪು, ಕೆಂಪುಮೂತ್ರ, ಕುಷ್ಟ, ಮೇಹಜ್ವರ, ಸ್ತ್ರೀಯರ ಪ್ರದರ ರೋಗ, ಹೊಟ್ಟೆನೋವು ನಾಶವಾಗುವವು. ನೀವು ಎಷ್ಟೋ ವ್ಯರ್ಥವಾಗಿ ಕಳೆದು ಹಣಹೊಂದದ ನರಳುತ್ತಿದ್ದರೂ ಚಿಂತೆಯಿಲ್ಲ ಕೂಡಲೇ ನಮ್ಮ ಔಷಧಿಯನ್ನು ಸೇವಿಸಿ ದೃಢಕಾಯರಾಗಿರಿ.

ಬಹಳ ಭಯಂಕರವಾದ ಬಹುಮೂತ್ರ ರೋಗವು (Diabetes) ಸಹಾ ಇದರ ಸೇವನೆಯಿಂದ ನಿರ್ನಾಶವಾಗುವದು. ಈ ಔಷಧಿಯನ್ನು ಉಪಯೋಗಿಸಿದ ನಂತರ "ಲಸ್ಟರ" ಅಥವಾ ಶಕ್ತಿವರ್ಧಕವನ್ನು ಸೇವಿಸಿದಲ್ಲಿ ನೀವು ರತಿಯಲ್ಲಿ ಪರಾಕ್ರಮಶಾಲಿಗಳಾಗುವಿರಿ. ಕೃಶವಾದ ದೇಹವು ದೃಢಕಾಯವಾಗುವದು. ವೃದ್ಧನು ಯೌವನಸ್ಥನಾಗುವನು ಶರೀರದ ಜಾಡ್ಯಗಳೆಲ್ಲ ನಿವಾರಣೆಯಾಗಿ ನೀವು ಹೊಸ ಮನುಷ್ಯರೇ ಆಗುವಿರಿ. ಜ್ವರಗಡೆಗೂ ಕ್ಷಯದಿಂದ ನರಳತಕ್ಕವರಿಗೂ, ನಿರ್ಬಲರಿಗೂ ಅತಿ ಉತ್ತಮವಾದದ್ದು ಒಂದುಸಲ ಸೇವಿಸಿದಲ್ಲಿ ನಿಮಗೆ ತಿಳಿಯುವದು ನಾವು ಹೆಚ್ಚಿಗೆ ಹೇಳಬೇಕಾದ್ದಿಲ್ಲ ಇದರ ಸೇವನೆಯಿಂದ ಉಬ್ಬಸ ಸಹಾ ನಿರ್ಮೂಲವಾಗುತ್ತೆ

ಎಲ್ಲಾ ಡಿಸಿಕ್ಟಿನಲ್ಲಿಯೂ ಏಜಂಟರು ಬೇಕಾಗಿದೆ ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಿ.

ಬ್ರಾಂಚು ಸೇತುರಾವ ರೋಡ
ಬೆಂಗಳೂರ ಸಿಟಿ

ದಿ ಲಸ್ಟರ್ ಮ್ಯಾನಿಫ್ಯಾಕ್ಚರಿಂಗ ಕಂಪನಿ,
ಚಿಕ್ಕಮಗಳೂರ, ಮೈಸೂರ ಪ್ರಾವಿನ್ಸ

ರೇಲ್ವೆಯ ಸಂಪಿನಿಂದ

ಒಂದು ದೊಡ್ಡ ಸ್ಟೇಶನದಲ್ಲಿ ಕಂಡು ಬಂದ

ನೋಟ!!

—(೦)—

ಮುಂಬಯಿ ಹತ್ತಿರಿರುವ ಠಾಣೆಯು ಜಿಲ್ಲೆಯ ಮುಖ್ಯ ಸ್ಥಾನವು ಮುಂಬಯಿಯಲ್ಲಿ ಕೆಲಸ ಮಾಡುವಂಥ ಸಾವಿರಾರು ಜನರು ಇಲ್ಲಿ ವಾಸವಾಗಿರುವರು. ತಾಸಿಗೆ ಎರಡು ಮೂರು ಬಂಡಿಗಳು ಮುಂಬಯಿಗೆ ಹೋಗಿ ಬರುವವು. ಇಂಥ ಜನಸಂಕಲಿತವಾದ ದೊಡ್ಡ ಸ್ಟೇಶನದ ಹಣೇ ಬರಹವು ಹೇಗಾಗಿರುತ್ತದೆಂಬದನ್ನು ಒಬ್ಬ ಲೇಖಕನು ಮುಂದೆ ಕೊಟ್ಟಂತೆ ವರ್ಣಿಸಿದ್ದಾನೆ-

ಮುಂಬಯಿಯಿಂದ ಕಲ್ಯಾಣದ ತನಕ ಪ್ರತಿಯೊಂದು ಸ್ಟೇಶನದಲ್ಲಿಯೂ ಶೋಚನೀಯ ಸ್ಥಿತಿಯು ಕಂಡು ಬರುತ್ತದೆ. ಕೆಲವು ಸ್ಟೇಶನಗಳಲ್ಲಿ ಪೋಲಿಸರ ಹೊರತು ಯಾರೂ ಕಣ್ಣಿಗೆ ಬೀಳುವದಿಲ್ಲ. ಹತ್ತಿರವೇ ಯುರೋಪಿಯನ ಸಾರ್ಜಂಟನು ನಿಂತಿದ್ದರೂ, ಸಿಪಾಯರು ಸ್ವೇಚ್ಛೆಯಿಂದ ತಿಕೀಟು ಕೊಡುತ್ತಾರೆ. ಬಾಟ್ಲಿ ಕೈಯಲ್ಲಿ ಹಿಡಿಯುತ್ತಾರೆ. ಹಮಾಲ, ಭಂಗಿ, ಪೋರ್ಟರ, ಕಸಗೂಡಿಸುವವ, ಸ್ಟೇಶನ ಮಾಸ್ತರ ಟಿಕಿಟ ಕಲೆಕ್ಟರ ಎಲ್ಲರೂ ಸಂಪಿನಲ್ಲಿ ಸೇರಿದ್ದಾರೆ, ಸ್ಟೇಶನದಲ್ಲಿ ಕಸ ಕಡ್ಡಿಯು ತಿಪ್ಪೆಗಿಂತ ತಿಪ್ಪೆಯಾಗಿ ಬಿದ್ದಿದೆ. ಮುನಸಿಪಾಲ್ಟಿಗೆ ಪತ್ರ ಬರೆದು, ಇಬ್ಬರು ಹೊಲೆಯರನ್ನು ತರಿಸಿದರು. ಇವರು ಕಸಗೂಡಿಸಲಿಕ್ಕೆ ಹಿಂದಿರಿಗಿ ಬಂದರು, ಪಾಯಖಾನೆ ಮತ್ತು ಕಸತೆಗೆಯುವ ಕೆಲಸವನ್ನು ಸರಕಾರದ ಬೀಗರಾದ ಕೈದಿಗಳಿಂದ ಮಾಡಿಸುತ್ತಿದ್ದಾರೆ. ಬೇರೆ ಸ್ಟೇಶನಗಳಲ್ಲಿ ಕಸಗೂಡಿಸುವ ಕೆಲಸವನ್ನು ಸ್ಟೇಶನಗಳ ಅಧಿಕಾರಿಗಳೇ ಮಾಡುತ್ತಾರೆ, ಬಿಟ್ಟಿಹಿಡಿದು ತಂದು ಬಾಗಿಲದಲ್ಲಿ ನಿಲ್ಲಿಸಿದ ಟಿಕಿಟು ಕಲೆಕ್ಟರರು ಕೊಟ್ಟರೇ ತಕ್ಕೊಳ್ಳುವರು ಇಲ್ಲವಾದರೆ- ಇಲ್ಲವೇ ಇಲ್ಲ!! ತಾರಿನ ಫಾರ್ಮಿನ ಮೇಲೆ ಟಿಕೀಟು ಬರೆದು ಕೊಡುವನು ಸ್ಟೇಶನದಲ್ಲಿ ಅವಲಕ್ಕಿ ಮಾರುತ್ತಿದ್ದವನನ್ನು ಪಾರಸಲ ಕ್ಲಾರ್ಕ ಮಾಡಿದ್ದಾರೆ. ಸಂಪಿನ ದೆಸೆಯಿಂದ ಊರೆಗಳಿಗೆ ಬಂದರಾಯಿತು. ಅವರ ಮೇಲೆ ತೀವ್ರ ತಬ್ಬಿದ ಮಳೆಯು ಸುರಿಯುತ್ತದೆ. ಬೇಕಾದವನು ಫರ್ಸ್ಟ ಮತ್ತು ಸೆಕಂಡದಲ್ಲಿ ಪ್ರವಾಸ ಮಾಡುವನು. ಕೇಳುವವನೇ ಇಲ್ಲ. ಬಿಟ್ಟೀತಂದ ಸ್ಟೇಶನ ಮಾಸ್ತರರು ಪೋಲೀಸರ ಸಹಕಾರದಲ್ಲಿ ಬಂದ ಬಂದಾಗ ಪ್ಲ್ಯಾಟಫಾರ್ಮಿನ ಮೇಲೆ ಬರುವರು ಬಂದ ಹೋದಕೂಡಲೆ, ತಮ್ಮ ಕೋಣೆಯಲ್ಲಿ ಬಾಗಿಲ ಹಾಕಿಕೊಂಡು ಕೂಡುವರು.

ಒಂಭತ್ತು ಸಾವಿರ ವ್ಯಾಗನುಗಳು

ಮುಂದುಗಾಣದೆ ನಿಂತಿವೆ.

— ₈[](೦)[]₈ —

ರೇಲ್ವೆಯ ಪ್ರಯಾಣಿಕರ ಬಂಡೆಗಳು ಬರುತ್ತವೆ; ಹೋಗುತ್ತವೆ; ಎಲ್ಲವೂ ಸುರಳಿತವಾಗಿ ಸಾಗಿರುತ್ತದೆಂದು ಜಿ. ಆಯ. ಪಿಯ ಏಜಂಟರು ದಿನಾಲು ವರ್ತಮಾನಪತ್ರಗಳಿಗೆ ಸುದ್ದೀ ಹೇಳುತ್ತಾರೆ. ಸಂಪು ಪ್ರಾರಂಭವಾಗಿ ಮೂರು ವಾರವಾಯಿತು. ಮುಂಬಯಿಯಲ್ಲಿರುವ ನಾಲ್ಕು ವರ್ಕ್ಸಶಾಪಗಳು ಹಾಕಿದ ಬಾಗಿಲ ತೆಗೆದಿಲ್ಲೆಂಬದೊಂದೇ ಸಂಗತಿಯಿಂದ ಸಂಪಿನವರಲ್ಲಿ ಜಿಗುಟುತನವಿರುತ್ತದೆಂದು ಸ್ಪಷ್ಟವಾಗುತ್ತದೆ. ಇದೊಂದೇ ಸಂಗತಿಯು ಸಾಹೇಬರನ್ನು ನಿರುತ್ತರ ಮಾಡುವದು. ಇದಕ್ಕೆ ಕೂಡಿಸಿ, ಸಂಪಿನ ಕಾರ್ಯದರ್ಶಿಯು ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡಿ, ಮುಂಬಯಿ ವಾಡೀ ಬಂದರದಲ್ಲಿ ಒಂಭತ್ತು ಸಾವಿರ ವ್ಯಾಗನಗಳು ಸರಕು ಹೇರಿ ನಿಂತಿದ್ದು, ಅವುಗಳ ಅವಸ್ಥೆಯು ಇಂದು ನಷ್ಟಂತಾಗಿರುತ್ತದೆಂದು ಹೇಳುತ್ತಾರೆ. ಕಂಪನಿಯ ಏಜಂಟರು ಇದಕ್ಕೆ ಮಾತ್ರ ಉತ್ತರ ಕೊಡುವದಿಲ್ಲ. ಮುಂಬಯಿಯಲ್ಲಿಯೇ ಈ ಹಾಡಾದ ಬಳಿಕ, ವ್ಯಾಪಾರದ ಪಡಿಮೂಲಿಗಳಾಗಿರುವ ದೊಡ್ಡ ದೊಡ್ಡ ಸ್ಟೇಶನಗಳಲ್ಲಿ ಯಾವ ಅನಾವಸ್ಥೆಯಾಗಿರಬಹುದೆಂಬದನ್ನು ಸಹಜವಾಗಿ ಊಹಿಸಬಹುದು. ಖಾನದೇಶ, ವರಾಡ, ನಾಗಪೂರ ಜಿಲ್ಲೆ ಪ್ರಾಂತ ಮತ್ತು ಇಲಾಖೆಯಲ್ಲಿ ಅರಳಿಯ ದೊಡ್ಡ ದೊಡ್ಡ ಗಿರಣಿಗಳಿದ್ದು, ಇವಕ್ಕೆ ಮೇಲಿಂದ ಮೇಲೆ ಮುಂಬಯಿಯಿಂದ ಪೂರೈಸಲ್ಪಡುವ ಸಾಮಾನುಗಳು ಹೊತ್ತಿಗೆ ಮುಟ್ಟದ್ದರಿಂದ, ಇವೆಲ್ಲ ಕಾರಖಾನೆಗಳು ಬಂದಾಗುವ ಹೊತ್ತು ಬಂದಿದೆ ಇವುಗಳಿಗಿಂತ ಹೆಚ್ಚಿನ ಅನಿಷ್ಟ ಪ್ರಸಂಗವೆಂದರೆ- ಪೆಟ್ರೋಲದ ಅಭಾವದಿಂದ ಮೋಟಾರುಗಳು ಬಂದಾಗುವವೆಂದು ಹೇಳುತ್ತಾರೆ. ಜಿ. ಆಯ. ಪಿ. ರೇಲ್ವೆ ಮಾತ್ರವಲ್ಲ. ಈ ರೇಲ್ವೆಗೆ ಹತ್ತಿರುವ ಸದರ್ನ ಮರಾಠಾ ಮತ್ತು ಬೇರೆ ರೇಲ್ವೆಗಳಗುಂಟಿರುವ ದೊಡ್ಡ ದೊಡ್ಡ ದಾರಿಗಳ ಮೇಲಿನ ಮೋಟಾರುಗಳೆಲ್ಲ ನಿಂತುಹೋಗುವದಾಗಿಯೂ ತಿಳಿಯುತ್ತದೆ.

ಹಿಂದೂ ಮುಸಲಮಾನ ಅಸೇಸರ-

ಸಿಂಧ ಹೈದರಾಬಾದಿನಲ್ಲಿ ಅಸೆಂಬ್ಲಿಯ ಮೆಂಬರ ಮ. ಭೂತೊಸಾಹೇಬರ ಮೇಲೆ ನಡೆದ ಕೊಲೆಯ ಆರೋಪದ ವಿಚಾರಣೆ ಮುಗಿಯಿತು ಇಬ್ಬರು ಮುಸಲಮಾನ ಮತ್ತು ಇಬ್ಬರು ಹಿಂದೂ ಹೀಗೆ ನಾಲ್ವರು ಅಸೇಸರಿದ್ದರು. ಮುಸಲಮಾನರು ನಿರ್ದೋಷಿ ಎಂದೂ ಹಿಂದೂ, ದೋಷಿ ಎಂದೂ ಮತ ಕೊಟ್ಟಿದ್ದಾರೆ

ಮರಾಠಿಯ ಮೋಹವು

—(೫೦೫)—

ವೀರಗನ್ನಡಿಗರೆಂದು ಎದೆ ತಟ್ಟಿ, ಜನ್ನು ತಟ್ಟಿಕೊಳ್ಳುವ ಶ್ರೀ. ಬೇಂದ್ರೆಯವರು ಮೊನ್ನೆ "ಕರ್ನಾಟಕ ಮಹಾರಾಷ್ಟ್ರ ಮಂಡಳ" ಕ್ಕೆ, ಹೋಗಿ, ಮರಾಠಿಯಲ್ಲಿ ಭಾಷಣ ಮಾಡಿದರು!!! ಇವರೇನು ತತ್ವನಿಷ್ಠರೋ? ಪ್ರತಿಷ್ಠಾಕಾಂಕ್ಷಿಗಳೊ? ಮನುಷ್ಯನು ಒಂದು ವ್ರತವನ್ನು ಸ್ವೀಕರಿಸಿದಮೇಲೆ ಕೊನೆಯ ವರೆಗೂ ಒಂದೇ ರೀತಿಯಾಗಿರಬೇಕು. ಗಾಳಿ ಬಂದತ್ತ ಹಾರಾಡುವ ಹುಲ್ಲಿನ ಕಡ್ಡಿಯಂತೆ ಕುಣಿದಾಡುವ ಜೊಳ್ಳು ಕನ್ನಡಿಗರನ್ನು ಆಂಧ್ರರಾಗಲಿ ಮರಾಟೆಗರಾಗಲಿ ತುಳಿದರೆ ಅದರಲ್ಲಿ ಆಶ್ಚರ್ಯವೇನು? ಇಂಥ ಪ್ರತಿಷ್ಠಾಕಾಂಕ್ಷಿಗಳನ್ನು ಕವಲೆ ಗಿಡದಮೇಲೆ ಕಳ್ಳಿಸಿ, ಬೇಕಾದಾಗ ಮೋಹಜಾಲದಲ್ಲಿ ಹಿಡಿದು ಆಂಧ್ರರೂ ಮರಾಟೆಗರೂ ಇಂದಿನ ವರೆಗೆ ಕರ್ನಾಟಕವನ್ನು ನುಂಗುತ್ತ ಮುಂದೆ ಬಂದರು ಇನ್ನು ಮೇಲಾದರೂ ಕನ್ನಡಿಗರು ಬುದ್ಧಿಗಲಿತು ಎಚ್ಚರಾಗುವರೋ?

ಹಗಲು ಮೋಟಾರಿನ ದರೋಡೆ.

——(೦)——

ಹೊಸಪೇಟ ತಾಲೂಕ ಕಂಪಲಿಯಿಂದ ಬಳ್ಳಾರಿಗೆ ಪ್ರಯಾಣಿಕರನ್ನೊಂದು ಮೋಟಾರು ಹೋಗುತ್ತಿದ್ದಾಗ, ದರೋಡೆಗಾರರ ಗುಂಪಿನ ಒಬ್ಬನು ದಾರಿಯಲ್ಲಿ ಅಡ್ಡ ಮಲಗಿದ್ದನು ಡ್ರೈವ್ಹರನು ಮೋಟಾರ ನಿಲ್ಲಿಸಿ, ಆತನಿಗೇನಾಗಿದೆಂದು ನೋಡಹೋದನು. ಮಲಗಿದವನು ಎದ್ದವನೇ ಡ್ರೈವ್ಹರನನ್ನು ಜೋರಿಯಿಂದ ಹಲವು ಸಾರೆ ಹೊಡೆದು, ಆತನನ್ನು ಕೆಡವಿ, ಸಿಳ್ಳು ಹಾಕಿದನು ಕೂಡಲೆ ಅಡಗಿಕೊಂಡಿದ್ದ ೨೦-೩೦ ಜನರು ಬಂದು, ಹೆಣ್ಣುಮಕ್ಕಳ ಮೈಮೇಲಿನ ಆರು ಶೇರು ಬಂಗಾರವನ್ನೂ ಬೇರೆ ಜನರ ಹತ್ತಿರಿದ್ದ ದುಡ್ಡು ದಾಗೀನೆಯನ್ನೂ ತಕ್ಕೊಂಡು ಗಪ್ಪ ಹೇಳಿಸಿದರು.

ಸಾವಳಗಿ ಮಜಲಸು-

ಸಾಯನ್ನರ ರಿಪೋರ್ಟ ಪ್ರಸಿದ್ಧವಾದ ಕೂಡಲೆ- ಅಥವಾ ಆ ಸಂಧಿಯಲ್ಲಿ ರಾವುಂಡ ಟೇಬಲಕ್ಕೆ ಅನುಕೂಲವಾಗಿ ಹೆಳಿಗೇಟರನ್ನು ಗೊತ್ತುಪಡಿಸಲು ಅಥವಾ ಆ ತೆರವಾಗಿ ಲಾರ್ಡ ಆಯರ್ವಿನ ಸಾಹೇಬರಿಗೆ ನೆರವಾಗಲು- ಮಹಾಳಜಿ ತಮ್ಮ ಮಜಲಸು ಕೂಡಿಸುವ ವ್ಯವಸ್ಥೆ ನಡಿಸಿದ್ದು, ಇದಕಾಗಿ ಜಮಾನದಾರ ಮೊದಲಾದವರು ಹೆಳಿಗೇಟರನ್ನು ಆರಿಸುವದಕ್ಕೆ ಪ್ರಾರಂಭಿಸಿದ್ದಾರೆ.

ನೋಟೀಸು

— (೧) —

ಮಿ. ಚಾರಿಸ್ಟ ರೋಜಾರಿಯೋ ಮೋಟಾರ ಡ್ರಾಯವ್ಹರ ಧಾರವಾಡ ಇವರಿಗೆ—

ಕಳಗೆ ಸಹಿ ಮಾಡುವ ರಾಬರ್ಟ ಆನಂದ ಭಾಸ್ಕರ ಮಿಶನ ಕಾಂಪಾಂವುಂಡ ಧಾರವಾಡ ಇವರು ನಿನಗೆ ಈ ನೋಟೀಸು ಕೊಟ್ಟು ತಿಳಿಸುವದೇನಂದರೆ—

ನೀನು ನಮ್ಮಲ್ಲಿ ಮೋಟಾರ ಡ್ರಾಯವ್ಹರ ನಿದ್ದಿ. ಕೆಲವು ತಿಂಗಳು ಚನ್ನಾಗಿ ಕೆಲಸ ಮಾಡಿದಿ ಮೇಲು ಇನ್ಸಪೇಕ್ಶನ ಕಾಲದಲ್ಲಿ ಗಾಡಿ, ಬ್ರೇಕ ಮುಂತಾದ ಎಲ್ಲ ಸಾಮಾನುಗಳನ್ನು ನೀನು ಸರಿಯಾಗಿ ಇಡುವದು ನಿನ್ನ ಕರ್ತವ್ಯವಾಗಿತ್ತು ಈ ಪ್ರಕಾರ ನಿನಗೆ ಇನ್ಸಪೇಕ್ಶನದ ಪೂರ್ವದಲ್ಲಿ ನಾಲ್ಕೈದು ದಿವಸ ನಾನು ಎಚ್ಚರಿಸಿ ಹೇಳುತ್ತಾ ಬಂದೆನು ಎಲ್ಲಾ ಯೋಗ್ಯರೀತಿಯಿಂದ ಇಟ್ಟಿರುತ್ತೇನೆಂದೂ ದುರಸ್ತ ಮಾಡುತ್ತೇನೆಂದೂ ಹೇಳಿದಿ. ಆದರೆ ಇನ್ಸಪೇಕ್ಶನ ಕಾಲದಲ್ಲಿ ನೀನು ಬುದ್ಧಿಪೂರ್ವಕವಾಗಿ ಬ್ರೇಕ ದುರಸ್ತ ಮಾಡಿದ್ದು ಮ|| ರಾ|| ಪೊ|| ಸಾಹೇಬರ ಪಟ್ಟಿಗೆ ಒಂದು ಅವರು ನಿನಗೆ ಒಂದೂವರೀ ತಿಂಗಳು ಸಸ್ಪೆಂಡ ಮಾಡಿದರು ಮುಂದೆ ಮೋಟಾರ ದುರಸ್ತ ಮಾಡಿ ಅದನ್ನು ಪಾಸ ಮಾಡಿಸಿಕೊಳ್ಳಲಿಕ್ಕೆ ನನಗೆ ಹತ್ತು ದಿವಸ ಹತ್ತಿತು ಮತ್ತು ಗಾಡಿ ಪಾಸಾದನಂತರ ಎ ಪಂಪಿ ಟ್ಯೂ ನೀನು ಬುದ್ಧಿಪೂರ್ವಕ ಬಿಟ್ಟು ನಮಗೆ ತಿಳಿಸದಲೆ ನಮ್ಮ ಲುಕಸಾನ ಮಾಡಿದಿ ಮುಂದೆ ತಪಾಸ ಮಾಡಲಾಗಿ, ನೀನು ಬುದ್ಧಿಪೂರ್ವಕ ಪೊ|| ಸಾಹೇಬರ ಕಡೆಗೆ ಅದನ್ನು ವೈದು ನಮ್ಮ ವಿರುದ್ಧ ಅರ್ಜಿ ಕೊಟ್ಟು ನಮ್ಮ ಬೇ ಅಬ್ರು ಮಾಡಿದಿ ಮತ್ತು ಮೋಟಾರ ಸ್ಟ್ಯಾಂಡು ಗಳಲ್ಲಿಯೂ ಇವತ್ತಿಗೂ ನಮ್ಮ ಬೇಅಬ್ರು ಆಗು ವಂಥ ಭಾಷಣ ಮಾಡುತ್ತಾ ಇರುತ್ತೀದಿ ಅದ್ದರಿಂದ ನೀನು ಈ ಬಗ್ಗೆ ನಮ್ಮ ಕ್ಷಮೆ ಕೇಳಿಕೊಳ್ಳಬೇಕು ಇಲ್ಲವಾದರೆ ನಿನ್ನ ಮೇಲೆ ಕಾಯದೆಪ್ರಕಾರ ದಿವಾನೆ ಮತ್ತು ಫೌಜದಾರಿಯಲ್ಲಿ ಇಲಾಜ ಮಾಡುವ ಭಾಗ ಬೀಳುತ್ತದೆ

ನೀನು ನಮ್ಮ ಮೋಟಾರ ಕೆಲಸಕ್ಕೆ ಹನ್ನೆರಡು ದಿವಸ ಹೋಟ ತಂದದ್ದರಿಂದ ದಿನಾಲು ಹತ್ತು ರೂಪಾಯಿಯಂತೆ ೧೨೦ ರೂಪಾಯಿ ಲುಕ್ಸಾನವಾಗಿದೆ ಮತ್ತು ಈ ನೋಟೀಸು ನಿನಗೆ ಕಾವು ೭-೩-|| ಮುಂಗಡ ಕೊಟ್ಟಿದ್ದಿರುತ್ತದೆ ಒಟ್ಟು ೧೯೨|-|| ನನಗೆ ಕೊಟ್ಟು ನನ್ನಿಂದ ಪಾವತಿ ಪಡೆಯಬೇಕು ಇಲ್ಲವಾದರೆ ನಿನ್ನಮೇಲೆ ಕಾಯದೆ ಪ್ರಕಾರ ಇಲಾಜ ಮಾಡಲಾಗುವದು ಈ ನೋಟೀಸಿ ಹತ್ತುವ ಯಾವತ್ತು ಖರ್ಚ ಕೂಡ ನಿನ್ನ ಮೇಲೆ ಇರುತ್ತದೆ ಈ ನೋಟೀಸಿನ ಖರ್ಚ ಸಹ ನಿನ್ನ ತಲೆಯ ಮೇಲಿರುವದು ತಿಳಿಯುವದು ತಾ|| ೨೪-೨-೧೯೩೦ನೇ ಇಸ್ವಿ

Robart, Anand, dhaskar.

ನೋಟೀಸು

ಗಜೇಂದ್ರಗಡದ ಸ್ವಸ್ಥಳ ವ ಪರಸ್ಥಳದ ಮಹಾಜನರಿಗೆ—

ಕೆಳಗೆ ಸಹಿ ಮಾಡಿದ ಚನ್ನಪ್ಪ ತಂದಿ ಈರಪ್ಪ ಗುಡ್ಡದ ಸಾ|| ಗಜೇಂದ್ರಗಡ ತಾ|| ರೋಣ ಈತನ ಕಡೆಯಿಂದಾ ಈ ನೋಟೀಸದ್ವಾರ ಜಾಹೀರ ಮಾಡ ವದೆಲ್ಲಿ ಬರುತ್ತದಲ್ಲ ನನ್ನ ಖಾಸ ತಂದು ಶಿವಪ್ಪ ಈತನು ಅಜಮಾಸು ಎರಡುವರಿ ವರ್ಷಗಳ ಕೆಳಗೆ ಮೃತಪಟ್ಟಿದ್ದಾನೆ ಈತನಿಗೆ ಮಾಂತವ್ವಾ ಹಂಪವ್ವಾ ಎಂಬ ಹೆಸರಿನ ಫಕ್ತ ಇಬ್ಬರು ಹೆಣ್ಣು ಮಕ್ಕಳೇ ಇರುತ್ತಾರೆ ಈ ಹುಡುಗರ ತಾಯಿ ಸಹ ಮೃತಪಟ್ಟಿದ್ದರಿಂದ ಹುಡುಗರ ಸಂರಕ್ಷಣೆ ನಾನೇ ಮಾಡಿಕೊಳ್ಳುತಾ ಬರುತ್ತಿದ್ದು ಅಜಮಾಸು ಮೂರು ತಿಂಗಳ ಹಿಂದೆ ನಮ್ಮ ತಂಗಿ ನಾಗವ್ವಾ ಕೋಂ ಶಿವರುದ್ರಪ್ಪ ಈಕೆಯು ಹುಡುಗರನ್ನು ಅವಳ ತಿಂಗಳೊಪ್ಪತ್ತು ತನ್ನಲ್ಲಿ ಇಟ್ಟುಕೊಳ್ಳುತ್ತೇನೆ ಅಂತಾ ತನ್ನ ಗಂಡನ ಮನೆಗೆ ಅಂದರೆ ಗದಗ ಗ್ರಾಮಕ್ಕೆ ಶಿವರುದ್ರಪ್ಪ ಬದಿಗೆಣ್ಣವರ ಈತನ ಕಡೆಗೆ ಕರಕೊಂಡು ಹೋದಳು ನಂತರ ನನ್ನ ಸಮ್ಮತಿವಿನಾಯ ನನ್ನ ಕೇಳದೆ ಇದೇ ತಿಳಿ ೧೧ನೇ ಮಾರ್ಗಶಿರ ೬|| ದಲ್ಲಿ ತನ್ನ ಮಗಾ ಈಪ್ಪ ಎಂಬುವ ಹುಡುಗನಿಗೆ ಮಾಂತವ್ವಾ ಎಂಬುವ ಅಜಮಾಸ ಹತ್ತು ಹನ್ನೆರಡು ವರ್ಷದ ಅಲ್ಪವಯ ಹುಡಿಗಿಯನ್ನು ತೆಗೆದು ಲಗ್ನ ಮಾಡಿದಳು ಆ ಸಂಗ್ತಿ ಹಿಂದಿನಿಂದ ನನಗೆ ತಿಳಿದು ಅವರಿಗೆ ಶಿಟ್ಟುಮಾಡಲು ನಾಲ್ಕು ಮಂದಿ ಸಂಭಾವಿತರು ನನಗೆ ನಿಮ್ಮ ತಂಗಿಯು ಚಿಕ್ಕ ಮಗನಿಗೆ ಲಗ್ನ ಮಾಡಿರುತ್ತಾಳೆ ಹೋಗಲಿ ಕೊಟ್ಟು ಮುದಿವ ಮಾಡಿಲ್ಲಾ ಅಂತಾ ಸಮಾಧಾನ ಹೇಳಿದರು ಅವರ ಮಾತಿಗೆ ಸುಮ್ಮನಾದೆನು ಈಗ ಎರಡನೆ ಹುಡಿಗಿ ಅಂದರೆ ಹಂಪವ್ವಾ ಈಕೆಯನ್ನ ಸಹ ಎರಡನೇ ಕಡೆಗೆ ಕೊಟ್ಟು ಲಗ್ನ ಮಾಡುತ್ತಾರೆ ಅಂತಾ ಕೇಳುತ್ತೇನೆ ಅದಕ್ಕೆ ನನ್ನ ಕಟಾಲ ಇರೋದಿಲ್ಲಾ ಸದರೀ ಆಕೆಯು ವ ಆಕೆಯ ಗಂಡ ಇವರಿಗೆ ಸದರೀ ಹುಡಿಗಿಯನ್ನು ಲಗ್ನ ಮಾಡಿಕೊಡಲಿಕ್ಕೆ ಎಳ್ಳುಮಾತ್ರಕ್ಕೂ ಹಕ್ಕು ಇರುವದಿಲ್ಲಾ ಯಾರೂ ನನ್ನ ಸಮ್ಮತಿವಿನಾಯ ಲಗ್ನ ಮಾಡಿಕೊಳ್ಳಬಾರದು ಮತ್ತು ರೋಣ ತಾ|| ಗಜೇಂದ್ರಗಡ ಗ್ರಾಮದ ವಾಣಿಪ್ಯಾಟಿ ಸಂತಿನೆರೆಯುವ ಬಾಜಾರದಲ್ಲಿ ನನ್ನ ಮಾಲ್ಕಿ ವಹಿವಾಟಿಯುಳ್ಳ ಮನಿ ಇದ್ದು ಅದು ಅಲ್ಪವಯ ಹುಡಿಗೆಯರ ಆಸ್ತಿಯೆಂದು ಹೇಳಿ ಆ ಹುಡಿಗೆಯರಿಗೆ ಸದರಿ ಶಿವರುದ್ರಪ್ಪನು ತಾನು ಸಂರಕ್ಷಣೆದಾರನಿರುತ್ತೇನೆಂದು ಸಂರಕ್ಷಣೆದಾರನಾತನಿಂದ ಯಾರಿಗಾದರೂ ಸದರಿ ಆಸ್ತಿಯನ್ನು ಯಾವ ತರಹದ ವಿಲ್ಲೆವಾಟ ಮಾಡಿಕೊಡಲಿಕ್ಕೆ ಹೋದರೆ ಅವನಿಂದಾ ಯಾರೂ ಮಾಡಿಸಿಕೊಳ್ಳಬಾರದು ಹಾಗೆ ಮಾಡಿಸಿಕೊಂಡರೆ ವ ಹಿಂದಾಗಿ ಮಾಡಿಸಿಕೊಂಡಿದ್ದರೆ ಸಹಾ ಅವು ರದ್ದು ಇರುತ್ತವೆ

ಸದರ ಆಸ್ತಿ ನನ್ನ ತಾಬಾದಲ್ಲಿನೇ ನನ್ನ ಮಾಲ್ಕಿ ಹಕ್ಕಿನಿಂದ ಇರುತ್ತದೆ ಸದರ ಆಸ್ತಿ ಮೇಲೆ ಅಲ್ಪವಯ ಹುಡಿಗೆಯರ ಮಾಲ್ಕಿ ಎಷ್ಟೂ ಇರುವದಿಲ್ಲಾ ತಿಳಿಯುವದು ತಾರೀಖು ೯ ಮಾಹೇ ಫೆಬ್ರುವರಿ ಸನ್ನ ೧೯೩೦ನೆ ಇಸ್ವಿ

ಸಹಿ ಚನ್ನಪ್ಪಾ ತಂದಿ ಈರಪ್ಪಾ ಗುಡ್ಡದ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು.



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನ್ನು ತಕ್ಕೊಳ್ಳುವದೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟದ್ದೇವೆ. ಫೆಬ್ರುವರಿ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಅದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಅಜಗಿ.

ಮುನಸುಫ ಕೋರ್ಟಿನ ಹತ್ತಿರ, ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಶ್ವತ್ಥಾಚಾರ್ಯ ಬಾಳಾಚಾರ್ಯ ಜೋಶಿ.

ವರ್ಷ ೧೧) ಧಾರವಾಡ ಬುಧವಾರ ತಾರೀಖು ೨೬ ನೇ ಫೆಬ್ರುವರಿ ೧೯೩೦ (ಸಂಚಿಕೆ ೪೯

Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES **GUARANTEED BONUS PLANS**

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli*.

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು ಉದಾರವಾದ ಶರಾಯುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಜಾರಾಗಿ ರದ್ದಾಗದ ಪಾಲಿಸಿಯು ಆದರ್ಶ ಯೋಜನೆ ಬಂಡವಲವು	ಖಾತರಿಯಾದ ಬೋನಸಗಳ ಯೋಜನೆಗಳು ಉದಾರವಾದ ಶರಾಯುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ.

ಇವರಿಗೆ ಬರೆದುಕೊಳ್ಳಿರಿ

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ ಕ್ರೆಡಿಟ ಸೋಸಾಯಟೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಕೈ ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ.

ಪ್ರತಿಯೊಂದು ಕಾಯ್ದೆಶೀರ ವಿಜಯದ ವರ್ಗಣಿದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರು. ೧೨-೮-೦
೬ ,,	೬-೧-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವ್ಯವಸ್ಥಾಪಕ ವಿಜಯ

ವಿಜಯ.

ಧಾರವಾಡ-ತಾ. ೨೬-೨-೨೦ನೇ ಇಸ್ವಿ.

ಶ್ರೀ.

ಈ ವಿಜಯಂ ಶ್ರೀಕಟ್ಟನು
ಗೀ ವಸುಮತಿಯು ನಲಿವಿನೆ ಸುಖಕರಲತಿಕೆಗಳಂ ॥
ಈ "ವಿಜಯಂ" ಶ್ರೀಕರಮಿ ।
ಶಾ ಹಿತಂಗೆ ವಿನಾಶನಲಿಪ್ತನು ಸಾಜನ್ಯ॥

ರಾ. ಬ. ಡಿ. ಎಲ್. ಪಾಟೀಲರ ಮುಕ್ತಿ
ಕರೀ ನಿಶಾನೆಯ ಬಹುಮಾನ

-(೦)-

ವಾಸ್ತವಿಕವಾಗಿ ರಾ. ಬ. ಡಿ. ಎಲ್. ಪಾಟೀಲರು ಅಸೆಂಬ್ಲಿಯ ಚುನಾವಣೆಗೆ ನಿಲ್ಲಬಾರದಾಗಿತ್ತು. ಏಕೆಂದರೆ- ಅಳಿದ ಊರೊಳಗೆ ಉಳಿದವನೇ ಗೌಡನೆಂದೆನಿಸಿಕೊಳ್ಳುವಂಥ ಕಾಲ!! ಈ ವರೆ ಅವರು ಸರಕಾರದ ಕೂಡ ಸಹಕಾರ ಮಾಡುವಂಥವರೂ ಬ್ರಾಹ್ಮಣೇತರರೂ ಆಗಿರುವದರಿಂದ, ಉಮೇದವಾರರಾದರು. ಇವರಿಗೂ ಪ್ರತಿಸ್ಪರ್ಧಿಯಾದ ಮಿ. ಹ್ವಿ. ಹ್ವಿ. ಪಾಟೀಲರಿಗೂ ಹುಬ್ಬಳ್ಳಿ ಮುಂಗಲಿಗೂ ಇರುವಂಥ ಪ್ರೇಮ ಯಾವ ಕಾರಣದಿಂದಲೋ ಮಿ. ಹ್ವಿ. ಹ್ವಿ. ಪಾಟೀಲರು ತಮ್ಮ ಉಮೇದವಾರಿಯನ್ನು ಹಿಂದಕ್ಕೆ ತಕ್ಕೊಳ್ಳಲು, ರಾ. ಬ. ಪಾಟೀಲರು ಅನಾಯಾಸವಾಗಿ ಅಸೆಂಬ್ಲಿಯ ಮೆಂಬರರಾದರು. ಈ ಬಗ್ಗೆ ಅವರ ಅಭಿನಂದನೆ ಮಾಡುವದಕ್ಕಾಗಿ ಎಲ್ಲಿಯೂ ಸಾರ್ವಜನಿಕ ಸಭೆಯಾಗಲಿಲ್ಲ. ಗದಗಿನಲ್ಲಿ ಮಾತ್ರವಾಯಿತು. ಅದು ಯಾವಾಗಲೂ ಮಿರಿಕ್ಕೈವರ ಗಂಡುಮೆಟ್ಟಿನ ಸ್ಥಳವು. ಅಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಇವರ ಪರಮ ಮಿತ್ರರು. ಆದ್ದರಿಂದ ಮ್ಯುನಿಸಿಪಾಲಿಟಿಯ ಅಟ್ಟದಮೇಲೆ ಸಭೆ ಮಾಡಿ ಅದಕ್ಕೆ ಸಾರ್ವಜನಿಕ ಸ್ವರೂಪ ಕೊಟ್ಟರು. ಮವಾಳರು ರಾಜಕೀಯ ಪ್ರಸಕ್ತಿಯಲ್ಲಿ ತಮ್ಮ ಸಭೆಗಳಿಗೆ ಸಾರ್ವಜನಿಕವೆಂಬ ಹೆಸರು ಕೊಡುವದಿಲ್ಲ. ಸ್ನೇಹಿತರೂ ಮತ್ತು ಅಡ್ಮಾಯರರ (Admirers) ಗಳಾದರೂ ಎಂದು ಬರೆದುಕೊಳ್ಳುವರು. ಅಧ್ಯಕ್ಷ ಮಹಾಶಯರಿಗೆ ಇವೆಂದು ಶಬ್ದಗಳ ಪರಿಚಯವಿರುವದಿಲ್ಲ. ಏಕೆಂದರೆ- ಅವರು ಇಂಥ ಸಭೆಗಳ ವಿಚಾರವನ್ನೂ ಸ್ವರೂಪ ಅರಿಯದವರು.

ಸಭೆಗೆ ಪ್ರಾರಂಭವಾಗುವ ಮೊದಲು ಒಂದು ದೊಡ್ಡ ಅನಿಷ್ಟ ಪ್ರಸಂಗವೊದಗಿತು. ಎಷ್ಟೋ ಜನ ತರುಣರು ಕರೀ ನಿಶಾನೆ ಹಿಡಿದುಕೊಂಡು, ಶೇಮ ಶಬ್ದವನ್ನು ಸೂರೆ ಮಾಡುತ್ತಾ ಇವರ ದಾರೀ ಕಾಯುತ್ತ ನಿಂತರು. ಪೊಲೀಸರು ಬೆದರಿಸಿದರು. ನಾವೆಲ್ಲರು ಊರುಗಳಲ್ಲಿ ಕರೀ ನಿಶಾನೆಗಳ ಬಹುಮಾನವಾದದ್ದನ್ನು ತರುಣರು ವರ್ತಮಾನ ಪತ್ರಗಳಲ್ಲೋದುವರು. ಅವುಗಳಿಂದಾಗುವ ಲೋಕ ಜಾಗೃತಿಯನ್ನು ತಿಳಿದವರು. ಆದ್ದರಿಂದ ತರುಣರು ಪೋಲೀಸ ಸಬ್ ಇನ್ಸಪೆಕ್ಟರರಿಗೆ ಹೆದರಲಿಲ್ಲ. ತರುಣರಂತೆ ಇನ್ಸಪೆಕ್ಟರರೂ ಪತ್ರಗಳನ್ನೋದುತ್ತಿದ್ದರೆ- ತಮ್ಮ ಅಧಿಕಾರದ ಹೊರಗಿನ ಕೃತ್ಯ ಮಾಡಲು ಹೋಗುತ್ತಲೇ ಇದ್ದಿಲ್ಲ. ಇಷ್ಟರಲ್ಲಿ ಸ್ವಾರಿ ರಾ. ಬ. ರವರ ಮೋಟಾರ ಬಂತು. ಇವರನ್ನು ಕರೀ ನಿಶಾನೆಯ ಅಗ್ರಗಾಮಿಯ ನೆಳಲಿನಲ್ಲಿ ಕರಕೊಂಡು ಹೋಗದೆ, ಹಿತ್ತಲ ಬಾಗಿಲದೊಳಗಿಂದ ದೇಹಕ್ಕನಂತೆ ಕರಕೊಂಡು ಹೋಗಿ, ಸಮಾರಂಭ ನಡೆಸಿದರು. ಅಲ್ಲಿ ಭಾಷಣಗಳು ನಡೆದ ಕೂಡಲೆ, ಹೊರಗಿನಿಂದ ಶೇಮ ಶಬ್ದಗಳು ಅಧಿಕರ ಕಿವಿ ಗಡಚಿಕ್ಕಿದವು. ಅಂತೂ ಇಂತೂ ಮಾನಾಪಮಾನಗಳ ಒಾಸೇ ಗದ್ದಲದಲ್ಲಿ ಸಮಾರಂಭ ಮುಗಿಯಿತು.

ಈ ಪ್ರದರ್ಶನದಲ್ಲಿ ತರುಣರಾದ ವಿದ್ಯಾರ್ಥಿವರೇ ಹೆಚ್ಚು ದ್ವರೆಯನ್ನು ಧ್ಯಾನದಲ್ಲಿಡತಕ್ಕದ್ದು. ಅವರಲ್ಲಾದ ರಾಷ್ಟ್ರೀಯ ಜಾಗೃತಿಯು ಪ್ರಶಂಸನೀಯವಾದದ್ದೇ ಸರಿ. ಸರ ಸಾಯಂವನ್ನ, ಗವ್ಹರ್ನರ, ಗವ್ಹರ್ನರ ಜನರಲರ ಮೇಲೂ ಕರೀ ನಿಶಾನೆಗಳ ಪ್ರಸಂಗ ಬಂದಿರುತ್ತದೆ. ಆದ್ದರಿಂದ, ರಾ. ಬ. ಪಾಟೀಲರ ಮೇಲೆ ಬಂದ ಹೊತ್ತು ಆಶ್ಚರ್ಯಪಡುವಂಥದಾಗಲಾರದು. ರಾ. ಬ. ರವರು ಈ ಅಪಮಾನವನ್ನು ತಮ್ಮದೆಂದು ತಿಳಿಯಬಾರದು. ತಾವು ಹಿಡಿದ ತಪ್ಪು ದಾರಿಯದಾಗಿರುತ್ತದೆಂದೇ ಭಾವಿಸಿ ಮನಸಿಗೆ ಸಮಾಧಾನ ಹಚ್ಚಿಕೊಳ್ಳತಕ್ಕದ್ದು. ಅಸೆಂಬ್ಲಿಗೆ ಹೋಗುವ ಹುರುಪಿನ ದೆಸೆಯಿಂದ ಕರೀ ನಿಶಾನೆಯ ಸಂಭಾವನೆಯಾಯಿತು. ಯುದ್ಧಕ್ಕೆ ಹೋಗುವಾಗಿಷ್ಟು ಹುರುಪು ಬರುತ್ತದೆ; ಅಷ್ಟು ಹುರುಪು ರಣಮಂಡಲದಲ್ಲಿ ಶತ್ರುಗಳ ಮುಂದೆ ನಿಂತಾಗ ಉಳಿಯುವದಿಲ್ಲ. ಕೂಡಲೆ ವಸಾಹಾತಿನ ಸ್ವರಾಜ್ಯ ದೊರೆಯಬೇಕೆಂದೂ ಅದಕ್ಕಾಗಿಯೇ ತಾವು ಅಸೆಂಬ್ಲಿಗೆ ಹೋದದ್ದೆಂದೂ ರಾ. ಬ. ರವರು ತಮ್ಮ ಜಾಹೀರ ವಿನಂತಿ ಪತ್ರದಲ್ಲಿ ಹೇಳಿಕೊಂಡಿದ್ದಾರೆ. ರಾ. ಬ. ರವರಿಗೆ ಶಾಲು ಸಮಾರಂಭ ಮಾಡಲು ನೆರೆದವರೆಲ್ಲರೂ ಕೂಡಲೆ ವಸಾಹಾತಿನ ಸ್ವರಾಜ್ಯವೆಂಬ ಮೂರು ಶಬ್ದಗಳನ್ನು ಚನ್ನಾಗಿ ನೆನಪಿಡಬೇಕು ಅಥವಾ ಗುರುಮಂತ್ರದಂತೆ ಪಠಣ ಮಾಡಬೇಕು. ಏಕೆಂದರೆ- ರಾ. ಬ. ರವರು ಕೂಡಲೆ ಸ್ವರಾಜ್ಯ ತರುತ್ತೇನೆಂದು ಹುರುಪಿನ ಚೆನ್ನ ಕಟ್ಟಿ ಅಥವಾ ಪಣಬದ್ಧರಾಗಿ ಹೋಗಿದ್ದಾರೆ. ಅಲ್ಲಿ ಕೂಡಲೆ ಸ್ವರಾಜ್ಯ ದೊರೆಯದಿದ್ದರೆ- ಈ ಮಹಾಶಯರು ರಾಜೀನಾಮೆ ಕೊಡಲೇಬೇಕಾಗುತ್ತದೆ. ಆಗ ರಾಜೀನಾಮೆ ಕೊಡದಿದ್ದರೆ- ರಾ. ಬ. ರವರೇ ನಿಮ್ಮ ಕೂಡಲೆ ವಸಾಹಾತಿನ ಸ್ವರಾಜ್ಯದ ಧ್ಯೇಯ ಮತ್ತು ಪ್ರತಿಜ್ಞೆ ಎಲ್ಲಿ ಹೋಯಿತೆಂದು ಸಹಜವಾಗಿ ಪ್ರಶ್ನೆ ಮಾಡಬೇಕಾಗುವದು. ಕೂಡಲೆ ವಸಾಹಾತಿನ ಸ್ವರಾಜ್ಯ ದೊರೆಯದೆ, ಮತ್ತು ಇವರು ತರದೆ, ಮೋರೆಯನ್ನು ಗಾಸಿಕೊಂಡು ಇವರು ತಮ್ಮ ನಾಡಿಗೆ ತಿರುಗಿ ಬಂದು, ಅಸೆಂಬ್ಲಿಗೆ ರಾಜೀನಾಮೆ ಕೊಡದಿದ್ದರೆ- ಕರೀ ನಿಶಾನೆಗಳು ಆಗಿನದ ತುಂಬ ಚಪ್ಪಲಿಗಳಂತೆ ಹಾರಿ, ತಪ್ಪಲೆಗಿಯಬಹುದು. ಆದ್ದರಿಂದ ಈಗ ಅವರಿಗಾದ ಅವಮರ್ಯಾದೆಯನ್ನು ನಾವು ಘನವಾಗಿ ಭಾವಿಸುವದಿಲ್ಲ. ಮುಂದೆ ಅವರ ಕೆಲಸಗಾರಿಕೆ ಮತ್ತು ನುಡಿಯಂತೆ ನಡೆಯುವ ಅವರ ಪರೀಕ್ಷೆಯಾಗುವದುಂಟು.

ಸುಧನ್ವನು ಅಶ್ವಮೇಧ ಕುದುರೆಯನ್ನು ಕಟ್ಟಿ, ಅರ್ಜುನ ಮತ್ತು ಆತನ ಸಾರಥಿ ಕೃಷ್ಣನ ಕೂಡ ಯುದ್ಧಕ್ಕೆ ಹೊರಡುವಾಗ- ಆತನ ತಾಯಿಯು ಅಪ್ಪಾ ಸುಧನ್ವಾ ನೀನು ಆ ನಾಲ್ಕು ಕುದುರೆಯ ಹುಯನು ಹಿಡಿವ ಬುದ್ಧಿಯನು ಮಾಡಬೇಡ. ಶ್ರೀಕೃಷ್ಣ ಪರಮಾತ್ಮನಾಗಿರುವ ಹರಿಯನ್ನು ಹಿಡಿಯುವಂಥವನಾಗು; ನಿನ್ನ ಮೇಲಿನ ಮಮತೆಯನ್ನು ತೊರೆದೆನೆಂದು ಆಶೀರ್ವಾದಿಸಿದ್ದಾಳೆ. ನೀನು ಅಪಜಯ ಹೊಂದಿ, ಹಿಂದಿರುಗಿ ಬಂದರೆ- ನಾನು ಮಾಡುವ ಮನೆಯಲ್ಲಿ ಕಲಿಯುತ್ತ ನಡೆಯಲಾರೆನು; ನನಗೆ ಮಾನವನುಡಿಯವರಿಂದ ಅಪಮಾನಕರವಾದ ಭಾಷಣ ಕೇಳುವಂಥ ಲಜ್ಜೆಯ ಪ್ರಸಂಗ ಬಾರಗೊಡಬೇಡೆಂದು ಸಹೋದರಿಯಾದ ಕುವರಿಯು ಹೇಳಿದ್ದಾಳೆ. ಕೂಡಲೆ ವಸಾಹಾತಿನ ಸ್ವರಾಜ್ಯ ತರುತ್ತೇನೆಂದು ಭಾಷೆಕೊಟ್ಟಿರುವ ರಾ. ಬ. ಪಾಟೀಲರು ಪುರಾಣದೊಳಗಿನ ಈ ದೃಷ್ಟಾಂತಗಳನ್ನು ಧ್ಯಾನದಲ್ಲಿಟ್ಟುಕೊಂಡು, ಅಸೆಂಬ್ಲಿಯಲ್ಲಿ ಕರ್ತವ್ಯಪರಾಯಣರಾಗಬೇಕು. ಹಾಗೇನಾದರೂ ಸಂಭವ ತೋರದಿದ್ದರೆ ಅಲ್ಲಿಯೇ ರಾಜೀನಾಮೆ ಗೀಚಿ ತನೆಯ ದಾರೀ ಹಿಡಿದು, ಕರ್ನಾಟಕದ ಗೌರವ ಕಾಯಬೇಕೆಂದು ಸೂಚಿಸುತ್ತೇವೆ.

ಹಿಂದುಸ್ಥಾನದಲ್ಲಿ ಈ ವರ್ಷ ೫೫ ಲಕ್ಷ ೫೦ ಸಾವಿರ ಎಕರೆ ಜಮೀನು ಬೇಸಾಯಗಾಗಿ ಹತ್ತಿಯ ಬೆಳೆ ಬರುವದೆಂದು ಅಂದಾಜು ಮಾಡಲಾಗಿದೆ.

ಮಹಾತ್ಮರನ್ನು ಕಾಣಲಿಕ್ಕೆ ಹೋಗಿ
ಮೂರ್ಖರಾಗದಂಥ ಒಬ್ಬ ಸಾಹೇಬರು.

——(೦)——

ಇಂಗ್ಲಂಡದಲ್ಲಿ ಕೋಶಾಧ್ಯಕ್ಷರಾಗಿದ್ದ ಲಾರ್ಡ ಹೇಲಶಾಮಸಾಹೇಬರು ಹಿಂದುಸ್ಥಾನಕ್ಕೆ ಬಂದು ಈ ದೇಶವನ್ನು ಸುತ್ತು ಹಾಕಿದರು. ಆದರೆ ಮಹಾತ್ಮರನ್ನು ಕಾಣಲಿಕ್ಕೆ ಹೋಗಲಿಲ್ಲ: ಏಕೆ ಹೋಗಲಿಲ್ಲೆಂದು ಪ್ರಶ್ನೆ ಮಾಡಲು "ಸಂಪೂರ್ಣ ಸ್ವಾತಂತ್ರ್ಯವನ್ನು ಜಾಹೀರ ಮಾಡಿದಂಥವರನ್ನು ನಾನು ಬುದ್ಧಿಪೂರ್ವಕವಾಗಿ ಕಾಣಲಿಕ್ಕೆ ಹೋಗಲಿಲ್ಲ. ಅವರ ಕೂಡ ನನ್ನ ಮಾತು ಕಥೆ ಎಂಥದು? ಅವರು ವಸಾಹಾತಿಕ ಸ್ವರಾಜ್ಯ ಒಪ್ಪಿ, ಸರಕಾರದ ಕೂಡ ಸಹಕಾರ ಮಾಡಿದರೇ ನಮಗೆ ಪ್ರಿಯ. ಇವರು ಕಾಯಿದೆ ಮುರಿದು, ಮನಃಪೂರ್ವಕವಾಗಿ ನಡೆದರೆ- ಅವರ ಬಂದೋಬಸ್ತ ಮಾಡಲು ಕಾಯಿದೆಯು ಸಮರ್ಥವಾಗಿರುತ್ತದೆಂದು ಇವರು ಉತ್ತರ ಕೊಟ್ಟಿದ್ದಾರೆ.

———

ವರ್ತಮಾನಪತ್ರ, ಮತ್ತು ಸರಕಾರದ
ನೋಟೀಸು ಜಾಹೀರಾತುಗಳು.

——(೦)——

ಸಿಂಧಪ್ರಾಂತದಲ್ಲಿ ಸರಕಾರೀ ಜಾಹೀರಾತು ನೋಟೀಸುಗಳನ್ನು ಗಬಾಳ ಪತ್ರಗಳಿಗೆ ಕೊಡುವರು. ಜನಸಾಮಾನ್ಯ ಮತ್ತು ಒದುವರಿಗೆ ಪ್ರಸಾರಗೊಂಡಿರುವ ಪತ್ರಗಳಿಗೆ ಕೊಡುವದೇ ಇಲ್ಲ. ಕಾರಣ ಸರು ಗಬಾಳ ಮತ್ತು ಗಟಾರಕ್ಕೆ ಯೋಗ್ಯವಾದ ಪತ್ರಗಳ ಸಂಪಾದಕರಿಂದ ಲಂಚ ತಕ್ಕೊಂಡು, ಅವುಗಳಿಗೆ ಅಕ್ರಯು ಕೊಡುತ್ತಾರೆಂದು ಈ ಪತ್ರಗಳು ಧಾರಾಳವಾಗಿ ಟೀಕೆ ಮಾಡಿರುತ್ತವೆ

ಈ ಪ್ರಾಂತದಲ್ಲಿ ಅಸಹಕಾರ ಚಳವಳಿಯಿಂದ ಕನಿಷ್ಠ ತರಗತಿಯ ಪತ್ರಗಳಿಗೆ ಸರಕಾರದ ನೋಟೀಸು ಜಾಹೀರಾತುಗಳು ಮಿರಾಸಿಕೆಯಾಗಿ ಅವುಗಳ ಹಸ್ತದ ಹಿಡಿದು ರಾಷ್ಟ್ರೀಯ ಪತ್ರಗಳು ತತ್ವದ ದೆಸೆಯಿಂದ ಜೀವನ ಕಲಹ ನಡೆಸಿರುತ್ತವೆ.

———

ವೈಲಿಯ ರಸಿಕೆಯ ಕಾರಖಾನೆ.

——(೦)——

ಬೆಳಗಾವಿಯಲ್ಲಿರುವ ವೈಲಿಯ ರಸಿಕೆಯ ಕಾರಖಾನೆಗೆ ಈಗ ಅಹೋರಾತ್ರಿ ದುಡಿತವಾಗಿದೆ. ಸಾಧಾರಣ ದಿವಸಗಳಲ್ಲಿ ದಿನಾಲು ಎರಡು ಸಾವಿರ ಜನರಿಗೆ ಸಾಲುವಷ್ಟು ರಸಿಕೆ ಮಾಡುತ್ತಿದ್ದಾರೆ. ಈಗ ಇದರ ಬೇಡಿಕೆಗೂ ಎದ್ದದರಿಂದ ಹತ್ತು ಸಾವಿರ ಡೋಜ ಸಿದ್ಧ ಮಾಡುತ್ತಾರೆ. ಇದನ್ನು ಮಾಡಲು ಸಾಕಷ್ಟು ಕರುಗಳು ಸಿಗದಾಗಿವೆ ರಸಿಕೆಯನ್ನು ಹೆಚ್ಚು ಹೆಚ್ಚಾಗಿ ಮಾಡಲು- ಮುಂಬಯಿ ಸರಕಾರದವರು ಹತ್ತು ಸಾವಿರ ರೂಪಾಯಿಗಳ ಗ್ರಾಂಟು ಕೊಟ್ಟಿದ್ದಾರೆ.

ಧಾರವಾಡದಲ್ಲಿ
" ಏಕೀಕರಣ ದಿನ. "

——(ಪ್ರತಿ)——

ಕರ್ನಾಟಕ ಏಕೀಕರಣ ಸಂಘದವರು ಮೊದಲೇ ಗೊತ್ತುಪಡಿಸಿದ ಮೇರೆಗೆ ಧಾರವಾಡದಲ್ಲಿ ಏಕೀಕರಣ ದಿನವು ಒಳ್ಳೇ ಉತ್ಸಾಹದಿಂದ ಜರುಗಿತು. ಬೆಳಗ್ಗೆ ಸರಿಯಾಗಿ ೭½ ಘಂಟೆಗೆ ನಗರ ಸಂಕೀರ್ತನಕ್ಕಾಗಿ ಸುಮಾರು ೧೨೩ ಜನರು ಕಾಂತೇಶ ವಾಚನಾಲಯದಿಂದ ಊರೊಳಗಿನ ಪ್ರಮುಖ ಬೀದಿಗಳಲ್ಲಿ ಕರ್ನಾಟಕ ಮಾತೆಯ ಜಯಘೋಷಗಳಿಂದ ಹಾಯ್ದು ೭½ ಘಂಟೆಗೆ ವಾಚನಾಲಯಕ್ಕೆ ಬಂದು ತಲುಪಿದರು

ಇದಲ್ಲದೆ ಇನ್ನೊಂದು ೩೫ ಜನರ ತಂಡವು ಮಾಳಮಡ್ಡಿಯಲ್ಲಿ ನಗರಸಂಕೀರ್ತನವನ್ನು ಮಾಡಿತು

ಸಾಯಂಕಾಲ ಶ್ರೀ ಕಾಂತೇಶ ವಾಚನಾಲಯದಲ್ಲಿ, ಏಕೀಕರಣದ ನಿಸ್ಸೀಮ ಭಕ್ತರಾದ ಶ್ರೀ ಕಡಪಾ ರಾಘವೇಂದ್ರರ ಭಾವಚಿತ್ರದ ಅನಾವರಣ ಸಮಾರಂಭವು ಅವರ ಮಿತ್ರರಾದ ಶ್ರೀ ನರಗುಂದ ರಾಮರಾಯರ ಹಸ್ತದಿಂದ ಜರುಗಿತು. ಕಡಪಾರಾಯರು ಏಕೀಕರಣಕ್ಕಾಗಿ ಯಾವ ರೀತಿಯಿಂದ ಶ್ರಮ ಒಟ್ಟಿರುವದನ್ನು ವಿವರಿಸಿ ಹೇಳಿ ರಾಘವೇಂದ್ರರಾಯರಂತೆ ಎಲ್ಲರೂ ಏಕೀಕರಣಕ್ಕಾಗಿ ಹೆಣಗಾಡಬೇಕೆಂದು ಹೇಳಿದರು. ನಂತರ ಚಿಕ್ಕ ಹುಡುಗರ ಕೂಟದವರು ಅಲ್ಲಿಯೇ ಏರ್ಪಡಿಸಿದ ಏಕೀಕರಣ ವಾಙ್ಮಯ ಪ್ರದರ್ಶನವನ್ನು ಶ್ರೀ. ಮುದವೀಡ ಕೃಷ್ಣರಾಯರು ಸಮಯೋಚಿತವಾದ ಭಾಷಣದಿಂದ ತೆರೆದರು.

ಸದರ್ನ ಮರಾಠಾ ಬ್ಯಾಂಕಿನ ಅಟ್ಟದಮೇಲೆ ೬½ ಗಂಟೆಗೆ ಶ್ರೀಮಾನ ಗುಂಜೀ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಆಯಿತು. ಮುದವೀಡ ಕೃಷ್ಣರಾಯರು, ನರಗುಂದ ರಾಮರಾಯರು, ಧರ್ಮದೇವ(ವೇದಸಂದೇಶದ ಸಂಪಾದಕರು) ಮತ್ತು ರಾಜಪುರೋಹಿತರು ಏಕೀಕರಣ ವಿಷಯವಾಗಿ ಮಾತನಾಡಿದರು. ಅಧ್ಯಕ್ಷ ಸಮಾರೋಪ ಭಾಷಣವಾದನಂತರ ಸಭೆಯು ಕರ್ನಾಟಕ ಮಾತೆಯ ಜಯಘೋಷದಲ್ಲಿ ಮುಗಿಯಿತು

———

ಅಖಿಲ ಕರ್ನಾಟಕ ವಾಚನಾಲಯ ಸಂಘ
ಧಾರವಾಡ

——(೦)——

ಮೊದಲೇ ಗೊತ್ತು ಪಡಿಸಿದಂತೆ, ಅಖಿಲ ಕರ್ನಾಟಕ ವಾಚನಾಲಯ ಸಂಘದ ಮೊದಲನೆಯ ಸಭೆಯು ೨೩ನೆಯ ತಾರೀಖಿಗೆ ಶ್ರೀ ಕಾಂತೇಶವಾಚನಾಲಯದಲ್ಲಿ ಶ್ರೀ. ಕರವೀರಪ್ಪ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಸೇರಿ ಆಗ ಬರುವ ವರ್ಷದ ಅಧಿಕಾರಿಗಳನ್ನು ಆರಿಸಲಾಯ್ತು.

ಅಧಿಕಾರಿಗಳು-

ಅಧ್ಯಕ್ಷರು- ಶ್ರೀ. ಕರವೀರಪ್ಪ ಕುಲಕರ್ಣಿ

ಉಪಾಧ್ಯಕ್ಷರು- ರಾ|ಸಾ| ಹಳಕಟ್ಟಿ ವಿಜಾಪೂರ

೨ ಶ್ರೀ. ಅಶ್ವಥರಾವ ಮುತಾಲಿಕ ಶಿರಹಟ್ಟಿ

೩ ಶ್ರೀ. ಆಲೂರ ವೆಂಕಟರಾಯರು.

ಕಾರ್ಯದರ್ಶಿಗಳು- ೧ ಡಾ| ಶ್ರೀ. ಕಾಮುಲಾಪೂರ

೨ ಶ್ರೀ. ಗೋಪಾಲರಾವ ಬೆಳವಡಿ

೩ ಶ್ರೀ. ವಿರುಪಾಕ್ಷಪ್ಪಾ ಪಟ್ಟಣಶೆಟ್ಟಿ ಗದಗ

ಮೇಲಿನ ಅಧಿಕಾರಿಗಳನ್ನೊಳಗೊಂಡು ೩೦ ಜನರದೊಂದು ಕಾರ್ಯಕಾರೀ ಮಂಡಲವು ಸ್ಥಾಪಿಸಲ್ಪಟ್ಟಿತು.

———

ಬೆಳಗಾವಿಯಲ್ಲಿ ಆರೋಪಿಯು ಮಾಫೀ ಸಾಕ್ಷಿದಾರನ ಮೇಲೆ ಪಿಸ್ತೂಲ ಹಾರಿಸಿದ ಮರುದಿವಸ ಕೋರ್ಟಿನಲ್ಲಿ ವಿಚಾರಣೆಯ ಕಾಲದಲ್ಲಿ ಅತಿಶಯ ಜನಸಂದಣಿ ಕೂಡಿತು. ಆಗ ಯಾವದೋ ಕೃತ್ಯದಿಂದಲೋ ಪೋಲಿಸರು ಇಬ್ಬರನ್ನು ಹಿಡಿದರು. ಜನರು ಇವರನ್ನು ಬಿಡಿಸಲು ದೊಡ್ಡ ಗೊಂದಲ ಹಾಕಿ, ಕಚೇರಿಯಲ್ಲಿಯ ಖುರ್ಚಿಗಳಿಗೆ ಬೆಂಕಿ ಹಚ್ಚಿದರು. ಬಿಸಕೀಗಳ ಕನ್ನಡಿಗಳನ್ನು ಒಡೆದು ಧುಂದಾಟಕೆ ಹಾಕಿದರು.

———

ಅಮೃತಸರದಲ್ಲಿ ಖಾಲಸಾ ಕಾಲೇಜದ ಪ್ರಿನ್ಸಿಪಾಲರ ಮೇಲೆ ಯಾವನೋ ಬಾಂಬು ಚಲ್ಲಿದನು. ಅದು ಅವರಿಗೆ ಬಡಿಯದೆ ೧೫ ಜನ ವಿದ್ಯಾರ್ಥಿಗಳಿಗೆ ಬಡಿದು ಘಾಯವಾದರು. ಇವರಲ್ಲಿ ಒಬ್ಬನ ಕಾಲನ್ನು ಕೊಯ್ದು ತೆಗೆಯಬೇಕಾಯಿತು.

———

ಸಿಂಧ ಹೈದರಾಬಾದಿನಲ್ಲಿ ಕರಿಕಿಂದಿಯ ಜಾಹೀರ ಲಿಲಾವಾಯಿತು. ದೊಡ್ಡ ಅಂಗಡಿಗಳಿಗೆ ಶೀಲು ಮುದ್ರೆ ಸಮಾಲಾಯಿತು. ಶಿರುಕಳ ಅಂಗಡಿಗಳು ಗಿರಾಕಿಯೇ ಇಲ್ಲ. ಅಧಿಕಾರಿಗಳ ಅಪಾಥರ್ವಾಯಿತು. ಲೈಂಸಿನಿಂದ ಅಂಗಡಿ ಕೊಡುವ ವಿಚಾರ ನಡೆಸಿರುತ್ತವೆ.

———

ಕಾನಪೂರದಲ್ಲಿ ಕಾಂಗ್ರೆಸ ಪಕ್ಷದ ಪತ್ರವಾದ ವಿಲಾಸ ಮುದ್ರಾಲಯದಲ್ಲಿ ಕಸಗೂಡಿಸುವವನಾದ ಮಿತ್ರ ಎಂಬವನನ್ನು ಕೌನ್ಸಿಲದ ಉಪ ಚುನಾವಣೆಯಲ್ಲಿ ಉಮೇದವಾರನಾಗಿ ನಿಲ್ಲಿಸಿದ್ದಾರೆ.

ನಾಳಿನ ರಜೆ —

ಇಂದು ಶಿವಯೋಗದ ದೆಸೆಯಿಂದ ಮು.ಛ. ಖಾನೆಯಕ್ಕೆ ರಜೆ ಇರುವದರಿಂದ ನಾಳಿನ ಪತ್ರದ ವಿಜಯವು ಪ್ರಕಟಿಸಲ್ಪಡಲಾರದು.

ಇತಿಹಾಸ ಭಕ್ತರಿಗೆ

ಬಿನ್ನಹ

—(೦)—

ಕರ್ನಾಟಕದ ಇತಿಹಾಸದಲ್ಲಿ ಚಾಲುಕ್ಯ ವಿಕ್ರಮನ ಸ್ಥಾನವು ಶ್ರೇಷ್ಠವಾಗಿದೆ. ಈ ಅರಸು ಇ ಸ ವಿ ೧೦೭೬ ರಿಂದ ೧೧೨೬ರ ವರೆಗೆ ಕಲ್ಯಾಣ ನೆಲೆವೀಡಿನಲ್ಲಿದ್ದು ಕರ್ನಾಟಕ ಸಾಮ್ರಾಜ್ಯವನ್ನು ಬಹಳ ವೈಭವದಿಂದ ಆಳಿದನು. ತನ್ನ ಪರಾಕ್ರಮದ ಸ್ಥಿರವಾದ ಸ್ಮಾರಕವೆಂದು ತಾನು ಪಟ್ಟವೇರಿದ ವರುಷದಿಂದ ಚಾಲುಕ್ಯ ವಿಕ್ರಮ ವರುಷವೆಂಬ ಹೊಸದೊಂದು ಕಾಲಗಣನೆಯನ್ನು ಪ್ರಾರಂಭಿಸಿದನು. ಆ ಕಾಲಗಣನೆಯು ನೂರಾರು ವರ್ಷಗಳ ವರೆಗೆ ಕರ್ನಾಟಕದಲ್ಲಿ ಪ್ರಚಲಿತವಾಗಿತ್ತು. ಮರೆತು ಹೋದ ಆ ಕಾಲಗಣನೆಯನ್ನು ಶ್ರೀ ರಾಜಪುರೋಹಿತರು ಕನ್ನಡಿಗರ ನೆನಪಿಗೆ ತಂದುಕೊಟ್ಟರು. ಕೆಲವು ಸನ್ಮಾನ್ಯ ವೃತ್ತಪತ್ರಗಳೂ ಪತ್ರಿಕೆಗಳೂ ಆ ಕಾಲಗಣನೆಯನ್ನು ಮತ್ತೆ ಪ್ರಾರಂಭಿಸಿವೆ. ಈಗ ನಡೆದುದು ಚಾಲುಕ್ಯ ವಿಕ್ರಮ ವರ್ಷದ ೮೫೫ನೆಯ ವರುಷ.

ಚಾಲುಕ್ಯವಿಕ್ರಮನ ಪಟ್ಟಬಂಧೋತ್ಸವ ತಿಥಿಯು ಫಾಲ್ಗುಣ ಶು. ೫ ಆ ದಿನ ಇತಿಹಾಸ ಭಕ್ತರು ಅಲ್ಲಲ್ಲಿ ಸಭೆಗಳನ್ನೇರ್ಪಡಿಸಿ ಚಾಲುಕ್ಯ ವಿಕ್ರಮನ ಚರಿತ್ರೆಯನ್ನೂ ಕರ್ನಾಟಕದ ಇತಿಹಾಸದ ವಿಷಯದ ಪ್ರಶ್ನೆಗಳನ್ನೂ ಕುರಿತು ಚರ್ಚೆ ಮಾಡಬೇಕು.

ಚಾಲುಕ್ಯವಿಕ್ರಮನ ವಿಷಯದಲ್ಲಿ ಈಗ್ಗೆ ಉಪಲಬ್ಧವಿದ್ದ ಸಾಧನಗಳು ಇಂತು (೧) ಬಿಲ್ಹಣನು ಬರೆದ ವಿಕ್ರಮಾಂಕದೇವ ಚರಿತವೆಂಬ ಸಂಸ್ಕೃತ ಕಾವ್ಯ ಇದು ಬಾಂಬೇ ಸಂಸ್ಕೃತ ಸಿರೀಜದಲ್ಲಿ ಪ್ರಸಿದ್ಧವಾಗಿದೆ. (೨) ಇಂಡಿಯನ್ ಆಂಟಿಕ್ವೆರಿ ಆಲಿನೆಯ "ಸಂಪುಟದಲ್ಲಿ ಕಲ್ಯಾಣದ ಚಾಲುಕ್ಯವಿಕ್ರಮನ ಚರಿತ್ರೆ" ಎಂಬ ನಿಬಂಧ (೩) ಫ್ಲೀಟರವರ "ಕರ್ನಾಟಕ" ದ ರಾಜವಂಶಗಳು, (ಇಂಗ್ಲೀಷ); (೪) ಡಾ೦ ಭಾಂಡಾರಕರರು ಬರೆದ "ದಕ್ಷಿಣದ ಇತಿಹಾಸ" (ಇಂಗ್ಲೀಷ) (೫) ಕರಮರಕರರು ಬರೆದ "ತ್ರಿಭುವನಮಲ್ಲ ವಿಕ್ರಮಾದಿತ್ಯನ ಚರಿತ್ರೆ" ಎಂಬ ಕನ್ನಡದಲ್ಲಿ ಬರೆದ ಚಿಕ್ಕದಾದ ಚರಿತ್ರೆ. (೬) ಎಪ್ರಿಲ ೧೯೨೯ರ "ಶಾರದೆ" ಯಲ್ಲಿ ಶ್ರೀ ರಾಜಪುರೋಹಿತರು ಬರೆದ "ವಿಕ್ರಮಾಂಕನ ಚರಿತ್ರೆ" ತ್ರಿಭುವನಮಲ್ಲ ವಿಕ್ರಮಾದಿತ್ಯನ ಚರಿತ್ರೆಯು ಸಾರ್ವಜನಿಕ ಸಂಸ್ಥೆಗಳಿಗೆ ಇತಿಹಾಸ ಮಂಡಳದಿಂದ ಕಾಣಿಕೆಯಾಗಿ ಕಳುಹಿಸಲ್ಪಡುವದು.

ಧಾರವಾಡ — ಕಾರ್ಯದರ್ಶಿಗಳು,

ತಾ|| ೨೦-೨-೩೦ — ಕ. ಇತಿಹಾಸ ಮಂಡಳ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸುದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಕಾಶ! ವೈದ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡು ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಡಾ. ಆನಂದರಾಯ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಈ ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ಈ ಬೇಡಿಕೆಯನ್ನು ಮಾಡುತ್ತಿರುವುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು.

ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುತ್ತಿದ್ದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ಕ್ಲಾಸಿಗೆ ನಿಯಮಿತ ಜನರನ್ನು ತಕ್ಕೊಳ್ಳುವದೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಫೆಬ್ರುವರಿ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಅದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.

[illegible] ಹತ್ತರ, ಧಾರವಾಡ.

ಬಾಲರಂಜನ

(ಕಾವ್ಯಾನಂದರು ಬರೆದದ್ದು)

ದ್ವಿತ್ರ್ಯಕ್ಷರ ಪದಗಳುಳ್ಳ ಸುರಸ ನೈತಿಕ ಕತೆಗಳ ಪುಸ್ತಕ! ಚಿಕ್ಕ ಮಕ್ಕಳಿಗೆ ಓದುವ ಅಭಿರುಚಿ ಹುಟ್ಟಿಸುವಂಥದು!! ಶಿಕ್ಷಕರೂ ಮಕ್ಕಳ ಪಾಲಕರೂ ಬೇಗ ಒರೆಯಿರಿ ಒಂದೇ ಪ್ರತಿ ಬೇಡುವವರು ಎಂಟು ಆಣೆಯ ಟಿಕೀಟು ಕಳಿಸಬೇಕು ೫೦-೫-೧೦ ಕ್ಕೆ ಕಮಿಶನವಾಗುವದು

ಲಕಮನಹಳ್ಳಿ ಓಣಿ } ಆಡಳಿತಗಾರರು,

ಧಾರವಾಡ } ವಿದ್ಯಾರ್ಥಿಗಳ ಗುಂಪು

— —

ಕಂಪೋಜಿಟರನು

—)(—(೦)—)(—

ಬೇಕಾಗಿದ್ದಾನೆ. ಇಂಗ್ಲೀಷ ಮತ್ತು ಕನ್ನಡ ಬಲ್ಲವನಿದ್ದರೆ ಒಳ್ಳೇದು. ಸಂಬಳ ಮುಂತಾದ್ದರ ಬಗೆಯಿಂದ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಬಳವಂತರಾವ ಮಹೀಂದ್ರಕರ

ಫೋಟೋಗ್ರಾಫರ, ಹುಬ್ಬಳ್ಳಿ

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R N. B. 14

ನಿತ್ಯಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶುಕ್ರವಾರ ತಾರೀಖು ೨೫ ನೇ ಫೆಬ್ರುವರಿ ೧೯೩೦ (ಸಂಚಿಕೆ ೪೦

Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES GUARANTEED BONUS PLANS

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಶಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ ಬಂಡವಲವು	ಖಾತ್ರಿಯಾದ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ.

ಇವರಿಗೆ ಬರೆದುಕೊಳ್ಳಿರಿ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬೆಂಡಿಗೇರಿಯ ಎಂಟು ಲಕ್ಷದ ಮೇಲಿಂದು. ಡಿಪಾಜಿಟು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀರದಾರ

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ನಕ್ಕಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿಂತಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

— ಮೇನೇಜರ ವಿಜಯ.

ವಿಜಯ.

ಧಾರವಾಡ ತಾ- ೨೮-೨-೩೦ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಟ್ಟರು
ಶ್ರೀ ವಚನಾತಿಯ ನವಿಟಿ ಶುಂತಕರಿಶಿಗಳಂ ॥
ಈ " ವಿಜಯಂ " ಶ್ರೀಕರರುಗ ।
ತಾ ವಿಹಿತಂಗಳ ಸಿವಾಸುನಲಿವುರು ಸಾಜನ್ಯಗ

ತರುಣರಿಗೆ ಕಾಯದೆಭಂಗದ ಬಗ್ಗೆ ಶ್ರೀ. ರಾಜಗೋಪಾಲಾಚಾರ್ಯರ ಉಪದೇಶ

ಫೇಬ್ರುವರಿಯ ೧೯ನೆಯ ತಾರೀಖಿನ ದಿವಸ ಅಹಮದಾಬಾದಿನಲ್ಲಿ ಕೂಡಿದ್ದ ಕಾಂಗ್ರೆಸ ಕಮಿಟಿಯ ಮೀಟಿಂಗಿನಲ್ಲಿ ಕಾಯದೆಭಂಗ ಮಾಡಬೇಕೆಂದೂ ಅದರ ಸರ್ವ ಸೇನಾಧಿಪತ್ಯವನ್ನು ಮಹಾತ್ಮರಿಗೆ ಕೊಡಬೇಕೆಂದೂ ಆದ ನಿರ್ಣಯದ ಪ್ರಕಾರ, ಕಾಯದೆಭಂಗದ ಉಪದೇಶವನ್ನು ತರುಣರಿಗೆ ಮಾಡಿ, ಅವರ ಸಹಾಯ ಪಡೆದು, ಅದನ್ನು ಯಶಸ್ವಿ ಮಾಡಲು- ವ ಕಾರ್ಯದ ದಳಪತಿಗಳಾದ ಶ್ರೀ ರಾಜಗೋಪಾಲಾಚಾರ್ಯ ಮತ್ತು ದೇಶಭಕ್ತ ದೇಶಪಾಂಡೆ ಗಂಗಾಧರರಾಯರು ಮಹಾರಾಷ್ಟ್ರ ಪ್ರಾಂತದಲ್ಲಿ ಸಂಚಾರ ನಡಿಸಿಕೊಂಡು, ಮೊನ್ನಿನ ದಿವಸ ಬೆಳಗಾವಿಯ ಮಾರ್ಗವಾಗಿ ಧಾರವಾಡ ಹುಬ್ಬಳ್ಳಿಗೆ ಬಂದು, ವ್ಯಾಖ್ಯಾನ ಕೊಟ್ಟು ಮುಂದೆ ಪ್ರಯಾಣ ಬೆಳಸಿದರು. ಶ್ರೀ ರಾಜಗೋಪಾಲಾಚಾರ್ಯರು ಧಾರವಾಡ-ಹುಬ್ಬಳ್ಳಿಯವರಿಗೆ ಅಪರಿಚಯರಲ್ಲ. ಅವರ ವ್ಯಾಖ್ಯಾನದ ಸ್ವರೂಪ ಬಲ್ಲವರು ಅನ್ನರಿಂದ ಅವರ ಬಾಯಿಯಿಂದ ಹೊರಡುವ ಸರಳ ಮತ್ತು ಸುಬೋಧ ವಚನ ಕೇಳಲು- ಕೊಳ್ಳಲು ಸಾವಿರ ಜನರು ನೆರೆದಿದ್ದರು.

ತರುಣ ಮತ್ತು ಮುದುಕ-

ಕಾಯದೆಭಂಗದಲ್ಲಿ ತರುಣರ ಸಹಾಯ ಕೇಳುವದೇ ಅವರ ಮುಖ್ಯೋದ್ದೇಶವಾಗಿತ್ತು. ತರುಣರು ಮತ್ತು ವೃದ್ಧರು ಕೂಡಿ, ಕಾಯದೆಭಂಗ ಮಾಡಿ, ಸ್ವರಾಜ್ಯ ಸ್ವಾತಂತ್ರ್ಯ-ದೊರಕಿಸಬೇಕಾಗಿದ್ದರೂ, ತರುಣರೇ ಹೆಚ್ಚು ಹುರುಪಿನಿಂದ ಈ ಕಾರ್ಯದಲ್ಲಿ ದುಡಿಯಬೇಕಾಗುತ್ತದೆ. ಏಕಂದರೆ-ತರುಣರಲ್ಲಿ ಮುದುಕರಿಗಿಂತ ಹೆಚ್ಚು ಹುರುಪಿರುತ್ತದೆ ಕಷ್ಟ ತಾಪಗಳನ್ನು ಸಹಿಸುವ ತ್ರಾಣವಿರುತ್ತದೆ. ಹಿಂದ ಗದಲ್ಲಿ ಜೇಲರ ಎಷ್ಟು ಸುಪರಿಂಟೆಂಡೆಂಟರು ಕೃಶರಾಗಿ ಹೋಗಿದ್ದಾರೆ. ಅವರ ಶಿಕ್ಷೆಗಳನ್ನು ಸಹಿಸುವದಕ್ಕೆ ಮುದುಕರಿಗಿಂತ ತರುಣರೇ ಧೈರ್ಯಶಾಲಿಗಳೂ, ಗಟ್ಟಿಗರೂ ಆಗುತ್ತಾರೆ. ಮುದುಕರು ಸಾಯುವ ದಿವಸ ಬಂದಿದ್ದರೂ, ಬದುಕಬೇಕೆಂಬ ಆಶೆಯಿಂದ ಡಾಕ್ಟರ, ಔಷಧ ಮತ್ತು ಪಥ್ಯದಲ್ಲಿ ದ್ರವ್ಯ ವ್ಯಯ ಮಾಡುತ್ತಾರೆ. ಮುದುಕರಾದಂತೆ ಅಂಜಿಕೆ ಹೆಚ್ಚುತ್ತದೆ. ಹಾಗೆ ತರುಣರು ಅಂಜುವದಿಲ್ಲ. ಇವರಿಗೆ ಜೀವದ ಆಶೆ ಇರುವದಿಲ್ಲ, ಬಹಳ ಬರುತ್ತದೆ ಹೋಗುತ್ತದೆ ಶಿಕ್ಷೆ ಭೋಗ-ಚಾರಗಳಿಗೆ ದುರ್ದ್ದ ಹಾಕುವ ಭರಿಗೆ ಹೋಗುವದೇ ಇಲ್ಲ. ಆದ್ದರಿಂದ ಹೆದರದಂಥ

ತರುಣರ ಸೇನೆ-

ಬೇಕು. ಯಾವದೇ ದೇಶದ ಸೇನೆ ನೋಡಿರಿ. ತರುಣರೇ ಅದರಲ್ಲಿ ಮುಖ್ಯವಾಗಿ ಸೇರುತ್ತಾರೆ ಪೂರ್ವಾಕ್ತರ ದಂಡಿನಲ್ಲಿಯೂ ತರುಣರೇ ಬೇಕಾಗಿದ್ದಾರೆ ವಿಲಾಯತಿಯು ಪ್ರತಿಯೊಂದು ದೇಶದಲ್ಲಿಯೂ ಕೆಲ ಕಾಲಪರ್ಯಂತರೂ ತರುಣರು ಸೈನ್ಯದಲ್ಲಿ ಸೇರಿ, ಕವಾಯಿತು ಕಲಿಯಬೇಕೆಂದು ಸಕ್ತಿಯ ನಿಯಮವುಂಟು. ಫ್ರಾನ್ಸಕ್ಕೆ ಸೇರಿದ ಪಾಂಡಿಚೇರಿಯಲ್ಲಿ ನೋಡಿರಿ. ವಿಶಿಷ್ಟ ವಯಸಿನ ತರುಣರು ದಂಡಿನಲ್ಲಿ ಸೇರಿ, ಕವಾಯಿತು ಕಲಿತು ದೇಶ ರಕ್ಷಕರಾಗುವರು ಕಲ್ಲಿಯವನ ಬದಲು ಹಿಂದೀಯ ಜಯ ಸಾಲಿಯಾಗಿ, ಫ್ರೆಂಚರು ಹಿಂದುಸ್ಥಾನ ನ್ಯಾಯತ್ತಿದ್ದರೆ- ನಾವು ದಂಡಿನ ಶಿಕ್ಷಣ ಪಡಿಯಬೇಕಾಗುತ್ತಿತ್ತು. ಯಾವದೊಂದು ದೇಶರಕ್ಷಣೆಗೆ ಪರಕೀಯರ ಸೈನ್ಯ ಎಷ್ಟೆಷ್ಟು ಬೇಕಾಗುವದಿಲ್ಲ. ನಾವು ಪ್ರಸ್ತುತದಲ್ಲಿ ನಡೆಸಿದ ಸ್ವರಾಜ್ಯ ಸ್ವಾತಂತ್ರ್ಯ ಯುದ್ಧವು ಮೂರೇ ತಿಂಗಳ ಮಟ್ಟಿಗೆ ಇರುವದು. ಅಷ್ಟರಲ್ಲಿ ಜಯವು ಖಚಿತವಾದಷ್ಟು. ಇದೇನು ತೆಂಗಿನ ಸಸಿಯ ಹುಣಸೆಯ ಮರ ಹಚ್ಚಿ ೧೫-೨೦ ವರ್ಷಗಳ ನಂತರ ಫಲಾಪೇಕ್ಷೆ ಮಾಡುವಂತಹದಲ್ಲ. ನಿಂತಕಾಲುಮೇಲೆ ಸ್ವರಾಜ್ಯ ಸ್ವಾತಂತ್ರ್ಯ ದೊರಕಿಸುವದಾಗಿರುತ್ತದೆ

ಸ್ವದೇಶೀ ಮತ್ತು ಪರದೇಶೀ ಸೈನ್ಯ-

ಪರಕೀಯರ ಸೈನ್ಯ ಸಹಾಯದಿಂದ ನಮ್ಮ ದೇಶ ರಕ್ಷಣೆ ಮಾಡಿ ಕೊಳ್ಳುವದೆಂದರೆ- ಆ ಸೈನ್ಯದ ಅಧೀನವಾಗಿರುವದಾಗುತ್ತದೆ ಅನ್ಯರ ಸೈನ್ಯವಿರುವತನಕ ನಮ್ಮ ಸ್ವರಾಜ್ಯವೆಂದಿಗೂ ಸ್ವತಂತ್ರವಾಗಲಾರದು. ಯಾವ ದೇಶವೂ ಅನ್ಯರ ಸೈನ್ಯ ಬಲದಿಂದ ಸ್ವಾತಂತ್ರ್ಯದ ಸೌಖ್ಯ ಹೊಂದಲಾರದು. ಹಿಂದುಸ್ಥಾನದಲ್ಲಿರುವ ಬ್ರಿಟಿಶ ದಂಡಿಗೆ ಅವರಷ್ಟು ಕೋಟಿ ರೂಪಾಯಿ ವೆಚ್ಚವಾಗುತ್ತದೆ ಪರಕೀಯರ ದಂಡಿನ ಬಲದಿಂದ ದೇಶರಕ್ಷಣೆ ಕರೆಸಿದ ತರುಣರ ಸೈನ್ಯವಿದ್ದರೆ- ಇಷ್ಟು ದೊಡ್ಡ ಹಣವು ಬೇಕಾಗುವದೇ ಇಲ್ಲ. ಈಗ ಪರಕೀಯ ಎಲ್ಲವೂ ಪರಕೀಯವಾಗಿರುತ್ತದೆ.

ಅಧಿಕಾರಸ್ಥರ ಅಂತಸ್ಥಿಕೆ-

ಯನ್ನು ನೋಡಿರಿ. ಹಾಯಸರಾಯರಿಗಾಗಿ ದಿಲ್ಲಿಯಲ್ಲಿ ಹೊಸದಾಗಿ ಕಟ್ಟಿಸಿದ ಅರಮನೆಯು ಇಂಗ್ಲಂಡದ ಬಾದಶಹರ ಅರಮನೆಗಿಂತ ಸುಂದರ ಮತ್ತು ಶ್ರೀಮಂತವಾದದ್ದಿರುತ್ತದೆಂದು ನನಗೊಬ್ಬ ಗೌರಕಾಯ ಯುವತಿಯು ಹೇಳಿದ್ದಾಳೆ. ಕಲೆಕ್ಟರ ಬಿಟ್ಟ ಮುಂತಾದವರ ಬಂಗ್ಲೆಗಳನ್ನು ನೋಡಿರಿ. ಅವು ನಂದನ ವನವಂತೆ ಶೋಭಿಸುತ್ತಿರುವವು ಶ್ರೀಮಂತ ಮಹಾರಾಜನು ಪಿಲ್ಲಿಯ ಬಾದಶಹನನ್ನು ನೋಲಿಸಿದನು. ಶಿಕ್ಷೆಯನ್ನು ತಮ್ಮ ಕುದುರೆಗಳಿಗೆ ಬಿಳ್ಳಿಯ ನೀರು ಕುಡಿಸಿದರು ಅಂಥವರ ಅರಮನೆ ಮತ್ತು ಉಪವನವು ಇಷ್ಟು ಸೊಗಸಾಗಿರಲ್ಲ. ವಿಲಾಯತಿಯಿಂದ ಬರುವ ಕಾಮನಾರರ ಪಗಾರ-ಬರವಾರ ನೋಡಿರಿ. ಇಂಗ್ಲಂಡದ ಕಾಮದಾರರಿಗಿಂತ ಹೆಚ್ಚು ಸಂಬಳ ಸೌಖ್ಯ ದೊರೆಯುವದು. ರಜೆ ಪಡಕೊಂಡು ಸ್ವದೇಶಕ್ಕೆ ಹೋಗಿ ಬರುವ ವೆಚ್ಚವನ್ನೂ ಹಿಂದುಸ್ಥಾನವೇ ಕೊಡಬೇಕು. ಇಷ್ಟು ದೊಡ್ಡ ಸಂಬಳವನ್ನು ಯಾರು ಕೊಡುತ್ತಾರೆಂದು ತಿಳಿದಿರುವಿರಿ ದರಿದ್ರ ರೈತರೇ ಸಂಬಳ ಕೊಡುವಂಥವರಾಗಿದ್ದಾರೆ. ಯಾವದಕ್ಕೂ ರೈತರನ್ನೇ ಹಿಂಡಿ-ಹಿಂಡಿ, ಹಿಪ್ಪಿ ಮಾಡುವರು. ಶ್ರೀಮಂತರ ಮೇಲೆ ಕರ ಕೂಡಿಸಲಾರರು. ಏಕಂದರೆ- ಇವರು ಸುಶಿಕ್ಷಿತರಾಗಿದ್ದು, ತಮ್ಮ ಕಿಸೆ ಖಾಲಿ ಹತ್ತುವದಾದ ಕೂಡಲೆ, ದೊಡ್ಡ ಚಳವಳಿ ಎಬ್ಬಿಸುವರು. ನಿಮ್ಮ ಕಾಲೇಜು ನೋಡಿರಿ ಮೇಲಿಂದ ನೋಡುವವರಿಗೆ ಸರಕಾರದವರು ಕಟ್ಟಿಸಿರುತ್ತಾರೆಂದು ತೋರುತ್ತದೆ ಆದರೆ- ಸರಕಾರವು ವಿಲಾಯತಿಯಿಂದ ದುಡ್ಡು ತಂದು ಕಟ್ಟಿಸಿರುವದಿಲ್ಲ. ರೈತರಿಂದ ವಸೂಲ ಮಾಡಿದ ದುಡ್ಡಿನಿಂದಲೇ ಕಟ್ಟಿಸಿರುತ್ತದೆ. ಸರಕಾರವು ಯಾವ ಕರವಾದರೂ ಮೊದಲು ರೈತರ ಮೇಲೆ ಹೇರುವದು. ಏಕಂದರೆ- ಇವರು ಅಶಿಕ್ಷಿತರಾಗಿದ್ದಾರೆ. ಸಂಪಾದನೆ ಇಂಗ್ಲಿಷರದು, ಸಾಲ ನಮ್ಮದು-

ಪರಕೀಯ ದಂಡು ಮಾಡಿದ ಕಸಕ್ಯತೆವೇ ನುಬದನ್ನು ನೋಡುವಾ- ಪೇಶ್ವೆ, ಮೈಸೂರ, ಮತ್ತು ಕರ್ನಾಟಕದ ನವಾಬರ ಕೂಡ, ಅಫಗಾಣ, ಚೀನೆ ಬ್ರಹ್ಮದೇಶದ ಥೀಬಾನ ಕೂಡ ಮತ್ತು ದಕ್ಷಿಣದ ಕಡೇ ಸೈನ್ಯವನ್ನು ಉತ್ತರಹಿಂದುಸ್ಥಾನದಲ್ಲಿದ ಅಜಿಯ ಇಸವಿಯ ಬಂಡಾಯ ಮುರಿಯುವದಕ್ಕಾಗಿ ಮೈಸೂರು ಯುದ್ಧ ಮಾಡಿದಾಗ ಆದ ಸಾಲದ ಹೊರೆಯನ್ನ, ಹಿಂದುಸ್ಥಾನದ ಬಡ ರೈತರ ತಲೆಯ ಮೇಲೆಯೇ ಹೇರಿದ್ದಾರೆ. ಜರ್ಮನಿಯ ವಿರುದ್ಧವಾಗಿ ಇಂಗಿಷರು ಆದಾಯಿತು. ಆದರ ಪ್ರಸಂ

ದ ಸೇನಾ ಸಾಮರ್ಥ್ಯದ ದೆಸೆಯಿಂದ ಹೆದರಿಕೊಂಡಿತ್ತು. ಆ ಜರ್ಮನಿಯ ಕೂಡ ಯುದ್ಧ ಮಾಡುವಾಗ ಹಿಂದುಸ್ಥಾನದಿಂದ ಕೋಟ್ಯನುಕೋಟಿಯ ಸಹಾಯ ಹೋಯಿತು. ಸಂಪಾದನೆಯು ಇಂಗ್ಲಂಡದಾಗಿ, ಸಾಲದ ಹೊರೆಯು ಮಾತ್ರ ನಮ್ಮದಾಯಿತು. ಇದೇ ನಮ್ಮ ಸ್ಥೈರ್ಯವಿದ್ದರೆ- ಅದರ ಪ್ರಕಾರವೇ ಬೇರೆಯಾಗುತ್ತಿತ್ತು.

ಅಂತೇ

ಉಪ್ಪು ಮತ್ತು ಕರ-

ಇವುಗಳ ಭಾರವು ರೈತರ ಮೇಲೆ ಬಿದ್ದಿರುತ್ತದೆ. ಉಪ್ಪಿನಿಂದ ಏಳುಕೋಟಿ ಮತ್ತು ಕರೆ ಕಿಂಡಿಯಿಂದ ೩೪ ಕೋಟಿಯ ಪ್ರಾಪ್ತಿಯುಂಟು. ನೂರು ವರ್ಷಗಳ ಹಿಂದೆ ಈಸ್ಟ ಇಂಡಿಯಾ ಕಂಪನಿಯ ಡಾಯರೆಕ್ಟರರಾದಂಥವರೇ ಜನರಿಗೆ ಕರ ಹಾಕಿಸಿ, ದೊಡ್ಡ ಪಾಪ ಕಟ್ಟಿಕೊಂಡು, ಹಿಂದೀ ಪ್ರಜರ ತಿರಸ್ಕಾರಕ್ಕೆ ಪಾತ್ರರಾಗುತ್ತೀರೆಂದು ತಮ್ಮ ಜನರಿಗೆ ಎಚ್ಚರಿಕೆ ಹೇಳಿದ್ದಾರೆ. ಆದರೂ ಸರಕಾರವು ಪ್ರಜರ ಈ ವ್ಯಸನ ಬಿಡಿಸಿರುವದಿಲ್ಲ. ವಿಲಾಯತಿಯ ಜನರು ಕುಡಿಯುವರು. ಆದರೆ ಅವರಲ್ಲಿ ಅದನ್ನು ತಡಕೊಳ್ಳುವಂಥ ಶಕ್ತಿಯುಂಟು ದ್ರವ್ಯಾನುಕೂಲತೆಯುಂಟು. ಆದರೆ ನಮ್ಮ ದಾರಿದ್ರ್ಯ ದೇಶದ ಪರಿಸ್ಥಿತಿಯು ಹೀಗಿರುವದಿಲ್ಲ. ಇವರು ತಾವು ಕುಡಿಯುವಾಗ ತಮ್ಮ ತಂದೆ-ತಾಯಿ, ಹೆಂಡರು ಮಕ್ಕಳನ್ನು ಕುಡಿಮುಬಿಡುವರು. ಕುಡಿಯುವದರಿಂದ ಕುಡುಕರ ಮನೆಗಳೆಲ್ಲ ದಾರಿದ್ರ್ಯದ ವಾಸಸ್ಥಾನಗಳಾಗಿವೆ.

ಉಪ್ಪಿನ ಕರವಂತೂ ಬಹು ಹೊರೆಗೆ-

ವಾದದ್ದು. ಏಕೆಂದರೆ- ಇದು ಯಾರು ಮನೆಯ ಹಳ್ಳಿಯವನನ್ನೂ ಬಿಟ್ಟಿಲ್ಲ. ರೈತರು ಬಳಕೆ ಮಾಡಲಾರರು. ಕರವು ಅಪ್ರತ್ಯಕ್ಷವಾಗಿ ತಾನಾಗಿ ವಸೂಲಾಗುವದೆಂಬ ಧೂರ್ತತನದಿಂದ ಸರಕಾರವು ಈ ಕರ ಕೂಡಿಸಿದೆ. ಬೇರೆ ಕರಗಳನ್ನು ಜನರು ಹುಟ್ಟಿದ ಬಳಿಕ ಕೊಡುವರು. ಇದನ್ನು ಹೊಟ್ಟೆಯೊಳಗಿನ ಕೂಸು ಸಹ ಕೊಡುತ್ತದೆ. ಬಯಕೆ ಹತ್ತಿದ ತಾಯಿಗೆ ಹೆಚ್ಚಿಗೆ ಉಪ್ಪು ತಿನ್ನಬೇಕೆಂಬ ಇಚ್ಛೆಯಾದರಾಯಿತು. ಮಗನ ಇಚ್ಛೆಯ ದೆಸೆಯಿಂದ ತಾಯಿಯು ತಿನ್ನುವ ಉಪ್ಪಿನಿಂದಾಗಿ ಇನ್ನು ಮುಂದೆ ಹುಟ್ಟತಕ್ಕ ಕೂಸು ಕರ ಕೊಡಲಿಕ್ಕೆ ಪ್ರಾರಂಭಮಾಡಿದಂತಾಗುತ್ತದೆ. ಈ ಕರವೆಂದರೆ- ಬಡವನ ಪ್ರಾಣಹರಣ ಮಾಡಿದ್ದಾಗುತ್ತದೆ. ಕೂಸು ಉಣ್ಣಿ ಮಾಡಿಕೊಂಡು ತಲೆಗೆ ಏರುತ್ತ ಬೀಳುತ್ತದೆ ಇದ. ಬಡವರಿಗೆ ನೀಗಲಾರದ್ದು. ಆದ್ದರಿಂದ ಅದನ್ನು ಕಡಿಮೆ ಮಾಡಬೇಕು. ಒಂದೂವರೀ ರೂಪಾಯಿಯಲ್ಲಿ ನಾಲ್ಕಾಣೆ ಕಡಿಮೆ ಮಾಡಬೇಕೆಂದು ಅಸೆಂಬ್ಲಿಯಲ್ಲಿ ಬಹುಮತದಿಂದ ಠರಾವು ಪಾಸಾದರೂ, ವ್ಹಾಯಿಸರಾಯರು ಸರ್ಟಿಫೈ ಕೇಟು ಕೊಟ್ಟು ಅದನ್ನು ಕಾಯಿದೆ ಮಾಡಿದರು. ಆದ್ದರಿಂದಲೇ

ಉಪ್ಪಿನ ಮತ್ತು ಕುಡಿತದ ಮೇಲೆ-

ಸ್ವರಾಜ್ಯ ಸ್ವಾತಂತ್ರ್ಯದ ಮುತ್ತಿಗೆ ಹಾಕಬೇಕಾಗಿರುತ್ತದೆ. ಯಾವ ಬುರುಜು ಪೊಳ್ಳು ಇರುತ್ತದೆಂದು ನೋಡಿಯೇ ಅವುಗಳ ಮೇಲೆ ತೋಫು ಹಚ್ಚಿದರು, ಕೋಟೆಯನ್ನು ಕೈವಶ ಮಾಡಿಕೊಳ್ಳುವರು. ಮಹಾತ್ಮರ ಅಹಿಂಸೆಯ ಅಸಹಕಾರದ ಯುದ್ಧದಲ್ಲಿ ವೈರಿಗಳ ಕಿಲ್ಲೆಯ ಉಪ್ಪು ಮತ್ತು ಕರಿಯ ಕೊತ್ತಲಗಳು ಗಟ್ಟಿಯಾಗಿಲ್ಲೆಂದೂ ಅವು ಒಡೆದು ಬೀಳುವಂಥವಾಗಿವೆಂದೂ ತಂದು ಒಬ್ಬರಿಂದ, ಇವುಗಳ ಮೇಲೇರಿ ಹೋಗುವರು. ಇದಕ್ಕೆ ತಮಗೆ ಬೇಕಾಗುವ ಸೇನೆಯಲ್ಲಿ ಸೇರತಕ್ಕವರ ಹೆಸರುಗಳನ್ನು

ಡಾಕ್ಟರ ಹರ್ಡೀಕರರು

ಬರಕೊಳ್ಳುವರು. ಈಗ ಸಮಯವಿಲ್ಲ. ಅವರು ನಿಮ್ಮಲ್ಲಿಗೆ ಬೇಗನೇ ಬರುವರು ಅವರಿಗೆ ನೀವು ಹೆಸರು ಕೊಟ್ಟು, ನಮ್ಮ ಕಾರ್ಯದಲ್ಲಿ ಸ್ವದೇಶ ಸ್ವಾತಂತ್ರ್ಯ ಸಂಪಾದನೆಯ ಕಾರ್ಯದಲ್ಲಿ ಮನಃಪೂರ್ವಕವಾಗಿ ನೆರವಾಗುವಿರೆಂದು ಆಶಿಸುತ್ತೇನೆ.

ಕಾಬೂಲ ಕಾರಸ್ಥಾನ

—(೦)—

ಅಮಾನುಲ್ಲಾ ಖಾನನಿಗೆ ಅರಸೊತ್ತಿಗೆಯ ಆಶೆ

——)(೦)(——

ಕಾಬೂಲದ ಕಾರಸ್ಥಾನಕ್ಕೆ ಪುನಃ ಬೇರೊಂದು ಪ್ರಕಾರದ ಬಣ್ಣ ಬಂದಿದೆ, ಅಮೀರ ನಾದಿರಖಾನನು ಜಡ್ಡಿನಿಂದ ಮಲಗಿರುವ ಸಮಯ ಸಾಧಿಸಿ ದೇಶದಲ್ಲಿ ಮಾಜಿ ಅವ್ಯವಸ್ಥೆಯ ಲಾಭ ತಕ್ಕೊಂಡು ಅಮಾನುಲ್ಲಾಖಾನನು ತನಗೆ ಮತ್ತೆ ಅಮೀರ ಪದವು ಪಟ್ಟವಾಗಬೇಕೆಂದು ಹಾತೊರೆದು ಈ ವಿಷಯವಾಗಿ ಕಾಬೂಲ ಪಾಶ್ಚಾತ್ಯ ಮತ ಕೇಳಬೇಕೆಂದೂ ರಶಿಯಾದ ಸಹಾಯ ಅಥವಾ ಸಹಾನುಭೂತಿಯಿಂದ ಹಿರಾತ ಅಥವಾ ಕಂದಹಾರ ಮಾರ್ಗವಾಗಿ ವಿಮಾನದಿಂದ ತನ್ನ ದೇಶಕ್ಕೆ ಬರಬೇಕೆಂದೂ ಇಚ್ಛಿಸಿದ್ದನೆ. ಈತನು ಕಾಬೂಲ ಮಾರ್ಗ ಹಿಡಿದು, ಹೊರಟಿರುವನೆಂಬ ವರ್ತಮಾನ ಕೇಳಿ, ನಾದಿರಖಾನನಿಗೆ ಬಹಳ ಉಗಿರುತ್ತದಂತೆ ವರ್ತಮಾನವು ಪೂರಾ ಸುಳ್ಳೆಂದು ಸಿಮಲಾದಲ್ಲಿಯ ಆತನ ವಕೀಲನು ಪ್ರಸಿದ್ಧ ಮಾಡಿದ್ದಾನೆ. ರಾಜಕಾರಣದಲ್ಲೇನಾದರೊಂದು ಗೊಂದಲವೇಳುವದಾದ ಕೂಡಲೆ- ಜಡ್ಡೊಂದು ನೆವನವಾಗಿ ಮುಂದೆ ಬರುತ್ತದೆ. ಇದ್ದ ಸಿಟಿಯಾಗಲಿ, ದಿವಾನಗಿರಿ, ನಾದಿರಖಾನನು ಕಾಬೂಲದಲ್ಲಿ ಸಿಂಹಾಸನಾರೋಹಣ ಮಾಡಿದಾಗ ಆತನ ವಿಷಯವಾಗಿ ಪ್ರಜರಲ್ಲಿದ್ದ ಭಕ್ತಿ ಮತ್ತು ವಿಶ್ವಾಸವು ಉಳಿದಿರುವದಿಲ್ಲ. ಶಿನವಾರಿ ಜನರು ತಿರುಗಿ ಬಿದ್ದ ವರ್ತಮಾನವನ್ನು ಕೊಡಲು ಬರೆದಿದ್ದೇವೆ. ಅವರ ಬಂಡಾಯವು ಮುರಿದಿರುವಂತೆ ಮೇಲೆ ತೋರಿದರೂ, ಅದು ಬೂದಿಮುಚ್ಚಿದ ಕೆಂಡವಾಗಿದೆ. ಅಮಾನುಲ್ಲಾಖಾನನು ಕಂದಹಾರದಲ್ಲಿ ಪ್ರಕಟನಾದರೆ- ಈತನ ಪಕ್ಷದ ಕಾಮದಾರರೂ, ಈತನ ಕುಲದವರಾದ ದುರಾಣಿಗಳೂ ಪುನಃ ಬಂಡಾಯದ ನಿಶಾನೆ ಹಚ್ಚುವರು. ಇವರಿಗೆ ಸಹಾಯವಾಗಿ ಶಿನವಾರಿಗಳು ಬಂಡು ಮಾಡುವದಕ್ಕೆ ಹಿಂದು ಮುಂದೆ ನೋಡರು. ಜನರ ಮನಸ್ಸು ಅಲ್ಲೋಲಕಲ್ಲೋಲವಾಗಿರುವಾಗ ದೇಶ ಸುಧಾರಣೆ ಎಂದು ನಾದಿರಖಾನನು ವಿಲಾಯತಿಯ ಪದ್ಧತಿಯಂತೆ ಚುನಾವಣೆಯಿಂದ ರಾಜ್ಯವಾಳುವ ಉಪಕ್ರಮ ಮಾಡಿ, ಹಾಗೆ ಜಾಹೀರನಾಮೆ ಪ್ರಸಿದ್ಧ ಮಾಡಿದನು. ತಮಗೆ ಇಂಥ ಚಳವಳಿಯು ಬೇಕಾಗಿಲ್ಲ. ಹಳೇ ಪದ್ಧತಿಯೇ ಇರಲೆಂದು ಕಾಬೂಲಿಗಳು ಚುನಾವಣೆಯ ಫರ್ಮಾನನ್ನು ಅಂಗೀಕರಿಸಲಿಲ್ಲ.

ನಾದಿರಖಾನನಿಗೆ ಒಳ್ಳೇ ಬಿಕ್ಕಟ್ಟಿನ ಸಮಯ ಒದಗಿದೆ, ಒಳ್ಳೇ ಜಡ್ಡಾಗಿರುವದರಿಂದ ದಂಡಿನ ಚಲನವಲನ ಮಾಡುವಂತಿಲ್ಲ, ಸೈನ್ಯಕ್ಕೆ ಬೇಕಾಗುವಷ್ಟು ದ್ರವ್ಯಾನುಕೂಲತೆ ಇರುವದಿಲ್ಲ. ಕೋಶದಲ್ಲಿ ಆಕಾಶವೇ ಉಳಿದಿರುವದು. ವ್ಯಾಪಾರ ಮಂದವಾಗಿ ಕರ-ಜಕಾತಿಯು ಅಷ್ಟಕಷ್ಟೇ ಬರುವದು. ಮೇಲಾಗಿ ದೇಶದ ತುಂಬ ಇಟ್ಟಣ-ಮುಟ್ಟಣವಾದ್ದರಿಂದ ಈತನ ಮುಂದಿನ ಅವಸ್ಥೆ ಏನೆಂಬ ಪ್ರಶ್ನೆಯುಂಟಾಗಿರುತ್ತದೆ.

ದಂಡಿನ ಕಾಮದಾರನ ಕೊಲೆ

—(೦)—

ವಾಯವ್ಯ ಸರಹದ್ದಿನಲ್ಲಿ ಇಂಜಿನಿಯರನಾಗಿದ್ದ ಲೆಫ್ಟಿನೆಂಟ ಹಾಕಿನ್ಸನೆಂಬವನನ್ನು ಸರಹದ್ದಿನ ಜನರು ಕೊಂದು ಪಲಾಯನ ಹೇಳಿಸಿದ್ದಾರೆ. ಈತನ ಶವವನ್ನು ಪೇಶಾವರಕ್ಕೆ ತಂದಿದ್ದಾರೆ. ಪೋಲೀಸ ತಪಾಸು ನಡೆದಿದೆ.

ಕಾಂಪಾಲದಲ್ಲಿರುವ ಜನಾಂಗದ ಹಿಂಸ್ಕಾನವು ಮುಸಲಮಾನ ಸವಾಲರದು: ಇದಕ್ಕೆ ಸೇರಿದ ಖೂನಾ ಗ್ರಾಮದಲ್ಲಿ ಮುಸಲಮಾನರು ಹಿಂದೂ ಜನರನ್ನು ಹೊಡೆದು; ದಂಗೆಮಾಡಿ, ಅವರ ಅಂಗಡಿಗಳಲ್ಲಿ ಲೂಟಿ ಮಾಡಿದ್ದಾರೆ. ಪೋಲೀಸರು ದಂಗೆಯನ್ನು ಶಾಂತಪಡಿಸಲು ಅಲ್ಲಿಗೆ ಹೋಗಿದ್ದಾರೆ.